## “ಶೌರ್ಯ” ಸಾಧನೆ…

### 1. ಬಸ್ ತಂಗುದಾಣ ನಿರ್ಮಾಣ ಮಾಡಿದ ಮಣಿಪಾಲ ಶೌರ್ಯ ತಂಡ




ಉಡುಪಿ, ಎಪ್ರಿಲ್, 11: ಸಾಮಾಜಿಕ ಸೇವೆಯಲ್ಲಿ ಸದಾ ಮುಂಚೂಣಿಯಲ್ಲಿರುವ ಮಣಿಪಾಲ ಶೌರ್ಯ ಘಟಕದ ಸ್ವಯಂಸೇವಕರು ಉಡುಪಿ ತಾಲ್ಲೂಕಿನ ಮಂಚಿಕುಮೇರಿಯಲ್ಲಿ ಬಸ್ ತಂಗುದಾಣ ನಿರ್ಮಿಸಿ ಸಾಮಾಜಿಕ ಕಳಕಳಿ ಮೆರೆದಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ನೂರಾರು ಸಾಮಾಜಿಕ ಕಳಕಳಿಯ ಸೇವೆಗಳನ್ನು ಸಲ್ಲಿಸಿದ ಈ ತಂಡದ ಸದಸ್ಯರು ಜನದಟ್ಟಣೆಯಿಂದ ಕೂಡಿದ್ದು ಬಿಸಿಲಿನಲ್ಲಿಯೇ ನಿಂತು ಬಸ್ ಏರಬೇಕಾದ ಅನಿವಾರ್ಯತೆ ಇರುವ ಪ್ರದೇಶದಲ್ಲಿ ತಂಗುದಾಣದ ಅಗತ್ಯತೆಯನ್ನು ಮನಗಂಡು ಸ್ವಯಂಪ್ರೇರಣೆಯಿಂದ ಬಸ್ ತಂಗುದಾಣ ನಿರ್ಮಿಸಿ ಜನಸಮುದಾಯಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ.

**ತಾತ್ಕಾಲಿಕವಾಗಿ ನಿರ್ಮಿಸಿದ್ದರು:**



ಮಣಿಪಾಲದಿಂದ ಕೇವಲ ಒಂದುವರೆ ಕಿಲೋಮೀಟರ್ ದೂರದ ಕರ್ನಾಟಕ ಹೌಸಿಂಗ್ ಬೋರ್ಡ್ ಸಮೀಪದಲ್ಲಿ ಪ್ರಯಾಣಿಕರು ರಸ್ತೆ ಬದಿಯಲ್ಲಿ ನಿಂತು ಬಸ್ ಗಾಗಿ ಕಾಯುತ್ತಾ ನಿಂತಿರುತ್ತಿದ್ದರು. ಆ ಪ್ರದೇಶದಲ್ಲಿ ಯಾವುದೇ ಬಸ್ ನಿಲ್ದಾಣ ಕಟ್ಟಡ ಇಲ್ಲದೇ ಇರುವುದರಿಂದ ಬಿಸಿಲು ಮಳೆಯೆನ್ನದೇ ಬಸ್ ಬರುವ ವರೆಗೆ ಕಾದು ನಿಲ್ಲಬೇಕಾಗಿತ್ತು. ಇದನ್ನು ಗಮನಿಸಿದ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ತಂಡದ ಮಾಸ್ಟರ್ ಹಾಗೂ ಮಣಿಪಾಲ ಘಟಕದ ಘಟಕಪ್ರತಿನಿಧಿಯಾದ ಹರೀಶ್ ಇವರು ಈ ಪ್ರದೇಶದಲ್ಲಿ ಬಸ್ ತಂಗುದಾಣದ ಅಗತ್ಯತೆಯನ್ನು ಮನಗಂಡು ಕಟ್ಟಡವನ್ನು ನಿರ್ಮಿಸಲು ಮುಂದಾದರು. ಶೌರ್ಯ ತಂಡದ ಸದಸ್ಯರು ಹಾಗೂ ಸ್ಥಳೀಯ ಯುವಕರ ಸಹಕಾರದಿಂದ ಮೂರು ತಿಂಗಳ ಹಿಂದೆ ತೆಂಗಿನ ಗರಿಗಳನ್ನು ಬಳಸಿಕೊಂಡು ಆಕರ್ಷಕವಾದ ತಾತ್ಕಾಲಿಕ ತಂಗುದಾಣವನ್ನು ನಿರ್ಮಿಸಿದ್ದರು.

## ಹೆಚ್ಚಳವಾದ ವಿರಮಿಸುವವರ ಸಂಖ್ಯೆ :

ಬಸ್ ನಿಲುಗಡೆ ಪ್ರದೇಶದಲ್ಲಿ ಯಾವುದೇ ವಿರಾಮ ಸ್ಥಳ ಇಲ್ಲದೇ ಇರುವುದರಿಂದ ಜನರು ಶೌರ್ಯ ತಂಡದ ಸದಸ್ಯರು ನಿರ್ಮಿಸಿದ ತಂಗುದಾಣದಲ್ಲಿ ವಿರಮಿಸಲು ತೊಡಗಿದರು. ನೆರಳಿನಲ್ಲಿ ಬಸ್ ಬರುವ ವರೆಗೆ ಕಾದು ನಿಲ್ಲತೊಡಗಿದರು. ಚಿಕ್ಕಮಕ್ಕಳನ್ನು ಎತ್ತಿಕೊಂಡ ತಾಯಂದಿರು, ವಯಸ್ಸಾದ ವೃದ್ಧರು, ಗರ್ಭಿಣಿಯರು ಹೀಗೆ ಅನೇಕರಿಗೆ ಈ ತಾತ್ಕಾಲಿಕ ಕಟ್ಟಡ ವರದಾನವಾಗಿತ್ತು. ಇದನ್ನು ಗಮನಿಸಿದ ಮಾಸ್ಟರ್ ಹರೀಶ್ ಇವರು ಈ ಸ್ಥಳದಲ್ಲಿ ಶಾಶ್ವತವಾದ ಕಟ್ಟಡದ ಅಗತ್ಯತೆಯನ್ನು ಮನಗಂಡು ಹೊಸ ಕಟ್ಟಡ ನಿರ್ಮಾಣಕ್ಕೆ ಮುಂದಾದರು.

## 12 ದಿನದ ಶ್ರಮ ಸೇವೆ:

ಶೌರ್ಯ ಘಟಕದಲ್ಲಿರುವ ಸ್ವಯಂಸೇವಕರು ತಮ್ಮದೇ ಆದ ಒಂದು ವೃತ್ತಿಯಲ್ಲಿ ಇರುವುದರಿಂದ ಹಗಲಿನ ವೇಳೆಯಲ್ಲಿ ಕೆಲಸಕ್ಕೆ ಸಿಗುವುದು ಕಷ್ಟವಾಗಿತ್ತು. ಇದರಿಂದಾಗಿ ಎಲ್ಲಾ ಸ್ವಯಂಸೇವಕರು ಚರ್ಚಿಸಿಕೊಂಡು ಸಾಯಂಕಾಲ 6 ಗಂಟೆಯಿಂದ ಕೆಲಸ ಮಾಡುವುದೆಂದು ತೀರ್ಮಾನಿಸಿದರು. ದಿನನಿಗದಿಪಡಿಸಿ ಕೆಲಸ ಮಾಡತೊಡಗಿದರು. ಸಂಜೆ 6 ಗಂಟೆಯಿಂದ ಶುರುವಾದ ಕೆಲಸ ರಾತ್ರಿ 10 ಗಂಟೆಯ ವರೆಗೂ ಮುಂದುವರೆಯುತ್ತಿತ್ತು. ಒಟ್ಟು 12 ದಿನಗಳ ಕಾಲ ಶ್ರಮದಾನ ನಡೆಸಿದ ಸ್ವಯಂಸೇವಕರು ಸುಂದರವಾದ ತಂಗುದಾಣ ನಿರ್ಮಿಸಿದ್ದಾರೆ.



## ಯಾರಿಂದಲೂ ಹಣ ಸಂಗ್ರಹಿಸಿಲ್ಲ:

ಶೌರ್ಯ ಸಮಿತಿಯ ಮಾಸ್ಟರ್ ಹರೀಶ್ ಇವರು ಇಲೆಕ್ಟ್ರಿಕ್ ಕಾಂಟ್ರಾಕ್ಟ್ ಕೆಲಸವನ್ನು ಮಾಡುತ್ತಿದ್ದು ಪ್ರತೀ ವರ್ಷ ತಮ್ಮ ಸ್ವಂತ ಹಣದಿಂದ ಸಮಾಜಕ್ಕೆ ಒಳಿತಾಗುವ ಕೆಲಸವನ್ನು ಮಾಡುತ್ತಿರುತ್ತಾರೆ. ಕಳೆದ ವರ್ಷ 16 ಬಡ ಕುಟುಂಬಗಳನ್ನು ಗುರುತಿಸಿ ಅವರ ಮನೆಗೆ ವಿದ್ಯುತ್ ಅಳವಡಿಕೆಗೆ ಸಂಬಂಧಿಸಿದ ಕೆಲಸವನ್ನು ಉಚಿತವಾಗಿ ಮಾಡಿಕೊಟ್ಟಿದ್ದರು. ಈ ವರ್ಷ ಯಾವುದಾದರೂ ಸೇವೆ ಸಲ್ಲಿಸಬೇಕೆನ್ನುವ ಹಂಬಲ ಹೊಂದಿದ್ದ ಇವರಿಗೆ ಬಸ್ ತಂಗುದಾಣದ ಅಗತ್ಯತೆ ಅರಿವಾಗಿದೆ. ಇದಕ್ಕೆ ಬರುವ ಎಲ್ಲಾ ಖರ್ಚುಗಳನ್ನು ತಾವೇ ನಿಭಾಯಿಸುತ್ತೇನೆ ಎಂದು ಸ್ವಯಂಸೇವಕರಿಗೆ ತಿಳಿಸಿ ಶ್ರಮಸೇವೆಯನ್ನು ತಾವು ನೀಡಬೇಕಾಗಿ ವಿನಂತಿಸಿಕೊಂಡಿದ್ದರು. ಈ ಪ್ರಕಾರವಾಗಿ ತಂಡದ ಸದಸ್ಯರು ಮತ್ತು ಸ್ಥಳೀಯ ಯುವಕರು 12 ದಿನಗಳ ಕಾಲ ಶ್ರಮದಾನ ನಡೆಸಿದ್ದರು. ಕಟ್ಟಡ ರಚನೆಗೆ ರೂ. 50,000 ಖರ್ಚಾಗಿದ್ದು ಹರೀಶ್ ಇವರೇ ಭರಿಸಿರುತ್ತಾರೆ. ತಮ್ಮ ಉದ್ಯೋಗದಿಂದ ಬರುವ ಆದಾಯದ ಒಂದಿಷ್ಟು ಭಾಗ ಜನಸಮುದಾಯಕ್ಕೆ ಅನುಕೂಲವಾಗಬೇಕು ಎನ್ನುವ ಹಂಬಲ ಇವರದು. ಆದುದರಿಂದ ಯಾವುದೇ ಸಂಘ ಸಂಸ್ಥೆಗಳಿಗೆ, ಗಣ್ಯರಿಗೆ ಹಣಕ್ಕಾಗಿ ಬೇಡಿಕೆ ಇಟ್ಟಿಲ್ಲ ಎನ್ನುತ್ತಾರೆ ಹರೀಶ್.

## ಯುವಕರಿಗೆ ಸ್ಪೂರ್ತಿಯಾಗಲಿ ಎನ್ನುವ ಆಶಯ:

ನೂತನವಾಗಿ ರಚಿಸಿದ ತಂಗುದಾಣಕ್ಕೆ ಸ್ವಾಮಿ ವಿವೇಕಾನಂದ ಬಸ್ಸು ತಂಗುದಾಣ ಎಂದು ಹೆಸರನ್ನಿಟ್ಟಿದ್ದಾರೆ. ಸ್ವಾಮಿ ವಿವೇಕಾನಂದರು ಯುವಕರಿಗೆ ಸ್ಪೂರ್ತಿಯಾಗಿದ್ದಾರೆ. ಅವರ ದರ್ಶಗಳನ್ನು ನಾವು ರೂಢಿಸಿಕೊಳ್ಳಬೇಕಿದೆ. ಈ ತಂಗುದಾಣವನ್ನು ಯುವಕರೇ ಸೇರಿಕೊಂಡು ನಿರ್ಮಾಣ ಮಾಡಿದ್ದೇವೆ. ಆದುದರಿಂದ ಸ್ವಾಮಿ ವಿವೇಕಾನಂದ ಬಸ್ಸು ತಂಗುದಾಣ ಎಂದು ಹೆಸರನ್ನು ಇಟ್ಟಿದ್ದೇವೆ ಎನ್ನುತ್ತಾರೆ ಮಾಸ್ಟರ್ ಹರೀಶ್.




## ಸರಳ ಉದ್ಘಾಟನೆ:

ದಿನಾಂಕ 10/04/2025 ರಂದು ಸ್ಥಳೀಯರಾದ ಈಶ್ವರ್ ರವರು ಉದ್ಘಾಟನೆ ಮಾಡಿದರು, ನಗರಸಭೆ ಸದಸ್ಯರಾದ ಅಶೋಕ್ ನಾಯ್ಕ್, ಜನಜಾಗೃತಿ ವೇದಿಕೆ ಸದಸ್ಯರಾದ ಕುಶಾಲ್ ಶೆಟ್ಟಿ, ಜನಜಾಗೃತಿ ಯೋಜನಾಧಿಕಾರಿ ಗಣೇಶ್ ಆಚಾರ್ಯ, ವಲಯ ಮೇಲ್ವಿಚಾರಕರಾದ ಬಾಲಚಂದ್ರ ಸೇವಾಪ್ರತಿನಿಧಿ ಚಂದ್ರಕಲಾ ಉಪಸ್ಥಿತರಿದ್ದರು. ಶೌರ್ಯ ವಿಪತ್ತು ನಿರ್ವಹಣಾ ಘಟಕ ಮಣಿಪಾಲದ ಎಲ್ಲಾ ಸ್ವಯಂಸೇವಕರು, ಸ್ಥಳೀಯ ಗಣ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

*********

# 2. ಬಡ ಕುಟುಂಬಕ್ಕೆ ಶೌಚಾಲಯ ಕಟ್ಟಿಕೊಟ್ಟ ಸ್ವಯಂಸೇವಕರು



ಬೈಂದೂರು, ಫೆಬ್ರವರಿ 19, 2025: ನಿರ್ಗತಿಕ ಕುಟುಂಬವೊಂದಕ್ಕೆ ಶೌಚಾಲಯ ಕಟ್ಟಿಕೊಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ 'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು.

## ಆರ್ಥಿಕವಾಗಿ ಕಷ್ಟದಲ್ಲಿರುವ ಕುಟುಂಬ:



ಬೈಂದೂರು ತಾಲ್ಲೂಕಿನ ಮಿಕ್ಕೆ ದುಡ್ಡಿನಗುಳಿ ಗ್ರಾಮದ ರಾಧಾ ಎನ್ನುವ ಮಹಿಳೆ ತನ್ನ ಎರಡು ಮಕ್ಕಳೊಂದಿಗೆ ವಾಸವಾಗಿದ್ದು ಆರ್ಥಿಕವಾಗಿ ಕಷ್ಟದಲ್ಲಿದ್ದಾರೆ. ಹಳೆಯ ಗುಡಿಸಲು ಮನೆ. ಗೋಡೆಗಳಿಲ್ಲದ ಮನೆಗೆ ಶೇಡ್ ನೆಟ್ ನ್ನೇ ಸುತ್ತಿಕೊಂಡು ವಾಸವಿದ್ದಾರೆ. ಮೇಲು ಹೊದಿಕೆ ಗಟ್ಟಿಯಿಲ್ಲದೇ ಬೀಳುವ ಸ್ಥಿತಿಯಲ್ಲಿದೆ. ವಾಸವಿರುವ ಸ್ಥಳವು ಸ್ವಂತ ಹೆಸರಿಗೆ ಇಲ್ಲದೇ ಇರುವುದರಿಂದ ಯಾವುದೇ ಸೌಲಭ್ಯಗಳು ಸಿಗುತ್ತಿಲ್ಲ.

## ಪಂಚಾಯತಿಯಿಂದ ಮಂಜೂರಾದ ಮನೆ ರದ್ದಾಗಿತ್ತು:

ಕಳೆದ 6 ವರ್ಷದ ಹಿಂದೆ ಗ್ರಾಮ ಪಂಚಾಯತಿಯಿಂದ ಮನೆ ಮಂಜೂರಾತಿ ಆಗಿತ್ತು. ಕಟ್ಟಿಕೊಳ್ಳಲು ಆರ್ಥಿಕ ಸಂಕಷ್ಟದಿಂದ ಮನೆ ನೆನೆಗುದಿಗೆ ಬಿದ್ದಿತ್ತು. ಪಂಚಾಯತಿ ನೀಡಿದ ಸಮಯಾವಕಾಶದೊಳಗೆ ಮನೆ ನಿರ್ಮಾಣ ಮಾಡಿಕೊಳ್ಳದೇ ಇರುವುದರಿಂದ ಮನೆಗೆ ಮಂಜೂರಾಗಿದ್ದ ಹಣ ರದ್ದಾಗಿತ್ತು. ಮನೆಯ ಕನಸು ಕನಸಾಗಿಯೇ ಉಳಿದಿತ್ತು.

ಮಳೆ, ಗಾಳಿಗೆ ತಡೆದುಕೊಳ್ಳದ ಗುಡಿಸಲಿನೊಳಗೆ ಆತಂಕದಿಂದಲೇ ರಾಧಾ ಇವರು ಕಷ್ಟದ ಜೀವನ ನಡೆಸುತ್ತಿದ್ದಾರೆ. ಪತಿ ಅನಾರೋಗ್ಯದಿಂದ ಮರಣ ಹೊಂದಿದ್ದು ಎರಡು ಮಕ್ಕಳನ್ನು ಸಾಕುವ ಜವಾಬ್ದಾರಿ ಇವರಿಗಿದೆ. ಕೂಲಿ ಕೆಲಸ ಆಶ್ರಯಿಸಿದ್ದಾರೆ.

## ಸ್ಥಳೀಯರಿಂದ ಸಮಸ್ಯೆ ತಿಳಿದ ತಂಡ:

ಮಾನವೀಯ ಕಳಕಳಿ ಹೊಂದಿರುವ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಸ್ವಯಂಸೇವಕರಿಗೆ ಈ ಕುಟುಂಬದ ಬಗ್ಗೆ ಸ್ಥಳೀಯರಿಂದ ತಿಳಿದು ಬಂದಿದೆ. ಕೂಡಲೇ ಸ್ಥಳಕ್ಕೆ ಧಾವಿಸಿದ ಸ್ವಯಂಸೇವಕರ ತಂಡ ಮನೆಯನ್ನು ವೀಕ್ಷಿಸಿ ಸಹಾಯ ಮಾಡಲು ಮುಂದಾಗಿದ್ದಾರೆ. ಎರಡು ಮಕ್ಕಳೊಂದಿಗೆ ವಾಸವಿರುವ ಇವರಿಗೆ ತುರ್ತು ಅಗತ್ಯವಿರುವುದು ಶೌಚಾಲಯ ಮತ್ತು ಸ್ನಾನಗ್ರಹ

ಎನ್ನುವುದು ಸ್ವಯಂಸೇವಕರಿಗೆ ಅರಿವಾಗಿದೆ. ಈ ವಿಷಯವಾಗಿ ಸ್ವಯಂಸೇವಕರು ತಮ್ಮ ಘಟಕದ ಸಭೆಯಲ್ಲಿ ಚರ್ಚಿಸಿ ಶೌಚಾಲಯ ರಚನೆ ಮಾಡಿಕೊಡುವ ಬಗ್ಗೆ ತೀರ್ಮಾನಿಸಿ ವಿಷಯವನ್ನು ಬೈಂದೂರು ತಾಲ್ಲೂಕು ಯೋಜನಾಧಿಕಾರಿಯವರಾದ ವಿನಾಯಕ್ ಪೈ ಇವರ ಗಮನಕ್ಕೆ ತಂದು ಶ್ರಮದಾನವನ್ನು ಆರಂಭಿಸಿದ್ದಾರೆ.



**ಆಪತ್ ಬಾಂಧವರಾದ ಸ್ವಯಂಸೇವಕರು:**

ಘಟಕದ ಸ್ವಯಂಸೇವಕರಾದ ಚಂದ್ರ ಬೆಳಾರಿ ಇವರ ನೇತ್ರತ್ವದಲ್ಲಿ ಸ್ವಯಂಸೇವಕರ ತಂಡ ೨ ದಿನಗಳ ಕಾಲ ಶ್ರಮದಾನವನ್ನು ನಡೆಸಿ ಸ್ನಾನಗ್ರಹ ಮತ್ತು ಶೌಚಾಲಯ ರಚನೆ ಮಾಡಿಕೊಟ್ಟಿದ್ದಾರೆ. ಶೌಚಾಲಯ ರಚನೆ ಮಾಡಿಕೊಟ್ಟಿರುವ ಸ್ವಯಂಸೇವಕರ ಸೇವೆಗೆ ಶ್ಲಾಘನೆ ವ್ಯಕ್ತವಾಗಿದೆ. ಯಾವುದೇ ಸಹಕಾರ ಸಿಗದೇ ಕಷ್ಟವನ್ನೇ ನಿತ್ಯ ಅನುಭವಿಸುತ್ತಿದ್ದ ಕುಟುಂಬಕ್ಕೆ ಶೌರ್ಯ ಸ್ವಯಂಸೇವಕರು ಆಪತ್ ಬಾಂಧವರಾಗಿದ್ದಾರೆ. ವಲಯದ ಮೇಲ್ವಿಚಾರಕರಾದ ಭರತ್ ಕುಮಾರ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸುರೇಖಾ, ಯೋಜನಾಧಿಕಾರಿ ವಿನಾಯಕ್ ಪೈ ಇವರು ಸ್ಥಳಕ್ಕೆ ಭೇಟಿ ನೀಡಿದ್ದು ಸ್ವಯಂಸೇವಕರಿಗೆ ಮಾರ್ಗದರ್ಶನ ನೀಡಿದ್ದಾರೆ.

ಘಟಕದ ಸಂಯೋಜಕರಾದ ರಾಮ ಶೆಟ್ಟಿ, ಘಟಕ ಪ್ರತಿನಿಧಿ ಮತ್ತು ಘಟಕದ ಎಲ್ಲಾ ಸ್ವಯಂಸೇವಕರು ಶೌಚಾಲಯ ರಚನೆ ಶ್ರಮದಾನದಲ್ಲಿ ತೊಡಗಿಕೊಂಡಿದ್ದು ತಮ್ಮ ಸಾಮಾಜಿಕ ಪ್ರಜ್ಞೆ ಮೆರೆದಿರುತ್ತಾರೆ.



**********

## ೩. ಬಡ ಕುಟುಂಬಕ್ಕೆ ಹೊಸ ಮನೆ;
## ಶಿರಸಿ ಘಟಕದ ಸ್ವಯಂಸೇವಕರಿಂದ ಮಾನವೀಯ ಸೇವೆ



ಮಳೆಯ ತೀವ್ರತೆಗೆ ಮನೆಯ ಮೇಲ್ಛಾವಣಿ ಹಾರಿ ಹೋಗಿತ್ತು. ಮನೆಯೊಳಗೆಲ್ಲ ನೀರೇ ನೀರು. ಹಳೆಯ ಮನೆ. ರಿಪೇರಿಗೆ ಕಾಸಿಲ್ಲವೆಂದು ಹಂಚಿನ ಮೇಲೆ ಪ್ಲಾಸ್ಟಿಕ್ ಹೊದಿಕೆ ಮಾಡಿದ್ದರು. ಬಿರುಗಾಳಿಗೆ ತೂರಿದ ಅವು ನೀರು ಸೋರುವಿಕೆ ತಡೆಯಲಿಲ್ಲ. ಗುಡುಗು ಸಿಡಿಲಿನ ಸದ್ದು. 'ಎಲ್ಲಿ ಮಾಡು ಕಳಚಿ ಬಿದ್ದೀತೋ' ಜೀವ ಭಯದಿಂದ ಬಡ ಕುಟುಂಬವಿತ್ತು. ಹಿಂದಿನ ಮಳೆಗಾಲವನ್ನು ಹೀಗೆ ಜೀವ ಭಯದಿಂದ ದೂಡಿದ್ದರು. ಅದೃಷ್ಟವಶಾತ್ ಏನೂ ಆಗಿರಲಿಲ್ಲ. ಆದರೆ ಈ ಬಾರಿ ಮಳೆಗಾಲದಲ್ಲಿ ಮನೆ ಕಂಪಿಸಿತ್ತು. ಹಂಚು ಹಾರಿತ್ತು. ಮನೆಯೊಳಗೆ ನೀರು ನುಗ್ಗಿತ್ತು. ಯಾವ ಕ್ಷಣದಲ್ಲಿಯೂ ಆಸರೆಯಾಗಬೇಕಾದ ಮನೆ ನೆಲಸಮವಾಗುವ ಭೀತಿಯಿತ್ತು.

ಶಿರಸಿ ತಾಲ್ಲೂಕಿನ ಕುಳವೆ ಗ್ರಾಮದ ಕಲಗದ್ದೆ ಎಂಬಲ್ಲಿನ 55 ವರ್ಷದ ಮಹೇಶ್ ಜಟ್ಟಿ ನಾಯ್ಕ್ ಎನ್ನುವವರ ಮನೆಯ ಸ್ಥಿತಿಯಿದು. ಐದು ದಶಕವನ್ನು ಪೂರೈಸಿದ ಹಳೆಯ ಮನೆಯದು. ಬಡತನ ಮತ್ತು ಅನಾರೋಗ್ಯ ಕಾರಣಗಳಿಂದಾಗಿ ಮನೆ ರಿಪೇರಿ ಮಾಡಿಕೊಳ್ಳಲಾಗದೇ ಕುಟುಂಬವಿತ್ತು. ಪರಿಸ್ಥಿತಿಯನ್ನು ಅರಿತ 'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕ ಶಿರಸಿಯ ಸ್ವಯಂಸೇವಕರು ದಾನಿಗಳ ನೆರವಿನೊಂದಿಗೆ ಮಳೆಗಾಲದಲ್ಲಿ ತಾತ್ಕಾಲಿಕ ಮನೆ ಕಟ್ಟುವುದಲ್ಲದೇ ಮಳೆಗಾಲದ ನಂತರ ದಾನಿಗಳ ಸಹಕಾರದೊಂದಿಗೆ ಸ್ಥಳೀಯರು, ಗ್ರಾಮ ಪಂಚಾಯತಿಯವರು, ಗಣ್ಯರು ಸೇರಿಕೊಂಡು ರಚಿಸಿದ ಹೊಸ ಮನೆಯ ಶ್ರಮದಾನಕ್ಕೆ ಸಹಕಾರ ನೀಡಿದ್ದಾರೆ.

### ಹೈರಾಣಾಗಿಸಿದ ಕಾಯಿಲೆ:

ಮಹೇಶ್ ಜಟ್ಟಿ ನಾಯ್ಕ್ ಪ್ಯಾರಾಲಿಸಿಸ್ ಕಾಯಿಲೆಯಿಂದ ಬಳಲುತ್ತಿದ್ದು ಆರ್ಥಿಕವಾಗಿ ಕಷ್ಟದಲ್ಲಿರುವುದರಿಂದ ಮನೆ ರಿಪೇರಿ ಸಾಧ್ಯವಾಗಿರಲಿಲ್ಲ. ಕಾಯಿಲೆಯಿಂದಾಗಿ ನಡೆಯಲು ಸಾಧ್ಯವಾಗದೇ ಮನೆಯಲ್ಲಿದ್ದಾರೆ. ಪತ್ನಿ ಪ್ರೇಮಾ ಇವರ ದುಡಿಮೆ ಮನೆಗೆ ಆಸರೆಯಾಗಿದೆ. ಕಷ್ಟದಲ್ಲಿರುವ ಇವರಿಗೆ ನೆರವಿನ ಅಗತ್ಯತೆ ಇದ್ದು 'ಶೌರ್ಯ' ಸ್ವಯಂಸೇವಕರು ಸೇರಿದಂತೆ ಅನೇಕರು ಮಾಡಿದ್ದಾರೆ.

### ಹಳೆಯ ಮನೆ:

ಇವರ ಮನೆ ಹಳೆಯದಾದ ಹಂಚಿನ ಮನೆ. ರಿಪೇರಿಗೆ ಬಂದು ಅದೆಷ್ಟೋ ವರ್ಷವಾಗಿತ್ತು. ಆರ್ಥಿಕ ಸಮಸ್ಯೆಯ ನಡುವೆ ಮನೆ ರಿಪೇರಿ ನೆನೆಗುದಿಗೆ ಬಿದ್ದಿತ್ತು. ಭಯ, ಆತಂಕದಿಂದ ಮೂರ್ನಾಲ್ಕು ಮಳೆಗಾಲವನ್ನೂ ಕಳೆದಾಗಿತ್ತು. ಸೋರುವ ಮನೆಯಲ್ಲಿ ಕ್ರಿಮಿ ಕೀಟಗಳು, ಹುಳು ಹುಪ್ಪಡಿಗಳು, ವಿಷ ಜಂತುಗಳು ಉಪದ್ರ ಕೊಡುತ್ತಿದ್ದವು. ಈ ಬಾರಿಯ ಮಳೆಗಾಲ ಮನೆಯನ್ನು ಕಂಪಿಸಿತ್ತು. ಹಂಚು ಹಾರಿ ಹೋಗಿತ್ತು. ಹೊದಿಕೆ ಛಿದ್ರವಾಗಿತ್ತು. ಮನೆಯನ್ನು ಬಿಡಲೇ ಬೇಕಾದ ಸ್ಥಿತಿ ಎದುರಾಗಿತ್ತು.



## ಮನೆ ತೊರೆದ ದಂಪತಿ:

ಮನೆ ಬೀಳುವ ಸ್ಥಿತಿ ಇರುವುದರಿಂದ ಮನೆಯಲ್ಲಿರುವುದು ಅಪಾಯವೆಂದರಿತ ಮಹೇಶ್ ದಂಪತಿ ಮನೆ ತೊರೆಯಲು ನಿರ್ಧರಿಸಿದರು. ಮಳೆಗಾಲದ ಮೂರ್ನಾಲ್ಕು ತಿಂಗಳು ಹೋಗುವುದಾದರೂ ಎಲ್ಲಿಗೆ? ಯೋಚಿಸಿ ಚಿಂತಾಕ್ರಾಂತರಾಗಿದ್ದರು. ಅಕ್ಕಪಕ್ಕದವರು ಉಳದುಕೊಳ್ಳಲು ಅವಕಾಶ ನೀಡಿದರಾದರೂ ಎಷ್ಟು ದಿನ ಅಂತ ಬೇರೆಯವರ ಮನೆಯಲ್ಲಿ ಉಳಯುವುದು? ಪ್ರಶ್ನೆ ಕಾಡಿತ್ತು.

## ಸ್ವಯಂಸೇವಕರು ಕಟ್ಟಿಕೊಟ್ಟರು ತಾತ್ಕಾಲಿಕ ಮನೆ:



ಸಮಸ್ಯೆಯಲ್ಲಿರುವ ಕುಟುಂಬದ ಬಗ್ಗೆ ಮಾಹಿತಿ ತಿಳಿದ 'ಶೌರ್ಯ' ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಮನೆ ಭೇಟಿ ಮಾಡಿ ಪರಿಸ್ಥಿತಿ ಅವಲೋಕಿಸಿದರು. ಮನೆಯ ಪಕ್ಕದಲ್ಲಿರುವ ಬಯಲು ಜಾಗದಲ್ಲಿ ಮಳೆಗಾಲ ಕಳೆಯಲು ಅನುಕೂಲವಾಗುವಂತೆ ತಾತ್ಕಾಲಿಕವಾಗಿ ಮನೆ ನಿರ್ಮಾಣ ಮಾಡಿಕೊಟ್ಟರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕರಾದ ಶ್ರೀ ಬಾಬು ನಾಯ್ಕ್ ರವರು ಸ್ಥಳಕ್ಕೆ ಭೇಟಿ ನೀಡಿ ಮನೆ ರಚನೆಗೆ ಅಗತ್ಯವಿರುವ ಸಹಕಾರ ಒದಗಿಸಿದರು. ಶಿರಸಿ ತಾಲ್ಲೂಕು ಯೋಜನಾಧಿಕಾರಿ ಶ್ರೀ ರಾಘವೇಂದ್ರ ಇವರ ಮಾರ್ಗದರ್ಶನದಲ್ಲಿ ಸ್ವಯಂಸೇವಕರು ತಾತ್ಕಾಲಿಕ ಮನೆ ನಿರ್ಮಾಣ ಮಾಡಿ ಕಷ್ಟದಲ್ಲಿರುವ ಕುಟುಂಬಕ್ಕೆ ಆಸರೆಯಾದರು. ಮನೆ ರಚನೆಗೆ ಅಗತ್ಯವಿರುವ ಆರ್ಥಿಕ ಸಹಕಾರವನ್ನು ಸ್ಥಳೀಯರಾದ ಪ್ರಭಾಕರ್ ಇವರು ನೀಡಿದರು.

## ಹೊಸ ಮನೆ ನಿರ್ಮಾಣ:



ಮಳೆಗಾಲ ಕಳೆದ ನಂತರ ಹಳೆಯದಾದ ಮನೆಯನ್ನು ತೆರವುಗೊಳಿಸಿ ಹೊಸ ಮನೆಯನ್ನು ಕಟ್ಟಿಕೊಡುವ ನಿರ್ಧಾರವನ್ನು ಸ್ಥಳೀಯರು, ಗ್ರಾಮಪಂಚಾಯತ್, ಅನೇಕ ದಾನಿಗಳು ಮಾಡಿದರು. ಉಡುಪಿ ಮೂಲದ ಪ್ರಭಾಕರ್ ಇವರು ಮನೆ ರಚನೆಯ ಸಂಪೂರ್ಣ ಉಸ್ತುವಾರಿ ನೋಡಿಕೊಂಡರು. 'ಶೌರ್ಯ' ಘಟಕದ ಸ್ವಯಂಸೇವಕರು ಮನೆಯ ಅಂಗಳ ರಚನೆ, ಮನೆಯ ಸುತ್ತಮುತ್ತಲಿನ ಸ್ವಚ್ಛತೆ ಸೇರಿದಂತೆ ಅನೇಕ ಕೆಲಸವನ್ನು ಮಾಡಿಕೊಟ್ಟು ಸಾಮಾಜಿಕ ಪ್ರಜ್ಞೆ ಮೆರೆದರು. ಸಂಘಟಿತ ಪ್ರಯತ್ನದಿಂದ ಬಡ ಕುಟುಂಬಕ್ಕೆ ಮನೆ ಸಿದ್ಧಗೊಂಡಿತು.

## ವೈಯಕ್ತಿಕ ಕೆಲಸ ಬದಿಗಿಟ್ಟ ಸ್ವಯಂಸೇವಕರು:

ಶಿರಸಿ ತಾಲ್ಲೂಕಿನ 'ಶಿರಸಿ ಏ' ಘಟಕದಲ್ಲಿ 23 ಸ್ವಯಂಸೇವಕರಿದ್ದು ತಮ್ಮ ವೈಯಕ್ತಿಕ ಕೆಲಸವನ್ನು ಬದಿಗಿಟ್ಟು ಮನೆ ರಚನೆ ಕೆಲಸದಲ್ಲಿ ಪಾಲ್ಗೊಂಡಿದ್ದರು. ಮನೆಯ ಸುತ್ತಲಿನ ಸ್ಥಳದಲ್ಲಿ ಸ್ವಚ್ಛತೆ, ಅಂಗಳ ರಚನೆ, ತಾತ್ಕಾಲಿಕ ಮನೆಗೆ ಸಾಗಿಸಿದ್ದ ವಸ್ತುಗಳನ್ನು ಮರು ಸಾಗಿಸಲು ಸಹಕಾರ ಹೀಗೆ ಹೆಚ್ಚಿನ ಕೆಲಸಗಳನ್ನು 'ಶೌರ್ಯ' ಸ್ವಯಂಸೇವಕರು ಮಾಡಿರುತ್ತಾರೆ. ಕಳೆದ ಎರಡು ವರ್ಷದ ಹಿಂದೆ ರಚನೆಯಾದ ಈ ಘಟಕ ಸಂಯೋಜಕರಾದ

ರೋಹಿಣಿ ಕಾರಳ್ಳಿ, ಘಟಕ ಪ್ರತಿನಿಧಿ ಶಿಲ್ಪಾ ಭಾಸ್ಕರ್ ನಾಯ್ಕ್ ಇವರ ನೇತ್ರತ್ವದಲ್ಲಿ ಯಶಸ್ವಿಯಾಗಿ ಸೇವಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು ಇದುವರೆಗೆ 130 ಕ್ಕೂ ಹೆಚ್ಚು ಸಾಮಾಜಿಕ ಸೇವೆಗಳನ್ನು, 60 ಕ್ಕೂ ಹೆಚ್ಚು ವಿಪತ್ತು ನಿರ್ವಹಣಾ ಸೇವೆಗಳನ್ನು ಮಾಡಿದೆ. ಈ ಘಟಕದ ಘಟಕ ಪ್ರತಿನಿಧಿ ಶಿಲ್ಪಾ ನಾಯ್ಕ್ ಇವರು ಶಿರಸಿ ವಿಪತ್ತು ನಿರ್ವಹಣಾ ಸಮಿತಿಯ ಕ್ಯಾಪ್ಟನ್ ಆಗಿ ಆಯ್ಕೆಗೊಂಡಿದ್ದು ತಾಲ್ಲೂಕಿನ ಎಲ್ಲಾ ಘಟಕಗಳ ನಿರ್ವಹಣೆಗೆ ತನ್ನದೇ ಆದ ಕೊಡುಗೆ ನೀಡುತ್ತಿದ್ದಾರೆ.



**********

## 4. ಶಾಲೆಯ ಆವರಣಕ್ಕೆ ಬೇಲಿ, ಸಾಮಾಜಿಕ ಕಳಕಳಿ ಮೆರೆದ ಶೌರ್ಯ ತಂಡ




ಕುಂದಾಪುರ, ಮಾರ್ಚ್ 01, 2025: ಕುಂದಾಪುರ ತಾಲ್ಲೂಕಿನ ಇರಿಗೆ, ಹಳ್ಳಿಹೊಳೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಬೇಲಿ ರಚನೆ ಮಾಡಿಕೊಡುವ ಮೂಲಕ ಸಾಮಾಜಿಕ ಪ್ರಜ್ಞೆ ಮೆರೆದಿದ್ದಾರೆ ಶೌರ್ಯ ಶ್ರೀ ಧರ್ಮಸ್ಥಳ ಕಮಲಶಿಲೆ ಘಟಕದ ಸ್ವಯಂಸೇವಕರು.

**ಶಾಲೆಯಿಂದ ಮನವಿ:**

ಶಾಲೆಯ ಆವರಣಕ್ಕೆ ಯಾವುದೇ ಭದ್ರತೆ ಇಲ್ಲದೇ ಆಕಳುಗಳು ಸೇರಿದಂತೆ ಪ್ರಾಣಿಗಳು ಶಾಲೆಯ ಕಟ್ಟಡದ ಸಮೀಪ ಬರುವುದು, ಮಕ್ಕಳಿಗೆ ತೊಂದರೆ ಕೊಡುವುದು, ಗಿಡಗಳನ್ನು ಹಾಳು ಮಾಡುವುದು ಮಾಡುತ್ತಿದ್ದವು. ಕಂಪೌಂಡ್ ರಚನೆಯ ಅಗತ್ಯತೆ ಇರುವುದರಿಂದ ಇದಕ್ಕೆ ಅಗತ್ಯ ಬಜೆ ಟ್ ಇಲ್ಲದೇ ಇರುವುದರಿಂದ ಶಾಲಾ ಶಿಕ್ಷಕರು ಬೇಲಿ ರಚಿಸಿಕೊಡುವ ಬಗ್ಗೆ ಸ್ವಯಂಸೇವಕರ ತಂಡಕ್ಕೆ ಮನವಿ ಮಾಡಿಕೊಂಡಿದ್ದರು.

**ಒಂದು ದಿನದ ಶ್ರಮದಾನ:** ಶಾಲೆಯ ಶಿಕ್ಷಕರ ಮನವಿಗೆ ಸ್ಪಂದಿಸಿದ ಸ್ವಯಂಸೇವಕರು ಒಂದು ದಿನದ ಶ್ರಮದಾನ ನಡೆಸಿದ್ದಾರೆ. ಬಹಳ ಶಿಸ್ತಿನಿಂದ ಬೇಲಿಯನ್ನು ರಚನೆ ಮಾಡಿಕೊಡಲು ಮೊದಲೇ ನಿರ್ಧರಿಸಿದ ಸ್ವಯಂಸೇವಕರು ದಿನ ನಿಗದಿಪಡಿಸಿ ಕೆಲಸ ಮಾಡಿದ್ದಾರೆ. ಶ್ರಮದಾನದ ಮೂಲಕ ಬೇಲಿ ರಚನೆ ಮಾಡಿದ್ದಾರೆ.

## ಅಗತ್ಯ ಪರಿಕರ ಶಾಲೆಯಿಂದ:

ಶ್ರಮದಾನ ನಡೆಸಲು ಮತ್ತು ಬೇಲಿ ರಚನೆಗೆ ಅಗತ್ಯ ಪರಿಕರಗಳನ್ನು ಶಾಲೆಯಿಂದ ಒದಗಿಸಲಾಗಿದೆ. ಶಾಲೆಯ ಆಡಳಿತ ಮಂಡಳಿ ಎಲ್ಲಾ ಖರ್ಚುಗಳನ್ನು ನೋಡಿಕೊಂಡಿದ್ದು ಸ್ವಯಂಸೇವಕರು ಶ್ರಮಸೇವೆ ನೀಡಿದ್ದಾರೆ.



## ಶಾಲೆಯ ಸುತ್ತಮುತ್ತ ಸ್ವಚ್ಛತೆ:

ಬೇಲಿ ರಚನೆಯ ಕೆಲಸದೊಂದಿಗೆ ಶಾಲೆಯ ಆವರಣದಲ್ಲಿ ಸ್ವಚ್ಛತೆ, ನೀರಿನ ಪೈಪ್ ದುರಸ್ಥಿ ಕೆಲಸಗಳನ್ನು ಸ್ವಯಂಸೇವಕರು ಮಾಡಿರುತ್ತಾರೆ. ಶಾಲೆಯ ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿಯ ಸದಸ್ಯರು, ಸ್ಥಳೀಯರು ಸ್ವಯಂಸೇವಕರ ಸೇವೆಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ.




--------

## 5. ಮಕ್ಕಳ ಬಿಸಿ ಊಟಕ್ಕೆ ಕೈ ತೋಟದ ತರಕಾರಿ
## ಶಾಲೆಯಲ್ಲಿ ಕೈತೋಟ ರಚಿಸಿದ ಅಜೆಕಾರು ಘಟಕ



ಹೆಬ್ರಿ, ಮಾರ್ಚ್, 04, 2025: ಶಾಲೆಯಲ್ಲಿ ಕೈತೋಟ ರಚನೆ ಮಾಡಿ, ಸಂರ್ವಕ್ಷಣೆಗೂ ಗಮನ ನೀಡಿ ಹುಲುಸಾದ ತಾಜಾ ತರಕಾರಿಗಳು ಮಕ್ಕಳಿಗೆ ಮದ್ಯಾಹ್ನ ಊಟಕ್ಕೆ ದೊರೆಯುವಂತೆ ಮಾಡಿ ಗಮನ ಸೆಳೆದಿದ್ದಾರೆ ಅಜೆಕಾರುವಿನ ಶೌರ್ಯ ಶ್ರೀ ಧರ್ಮಸ್ಥಳ ಘಟಕ ಸ್ವಯಂಸೇವಕರು.

### ಬೇಡಿಕೆಯ ಮೇರೆಗೆ ಶ್ರಮದಾನ:

ಸದಾ ಒಂದಿಲ್ಲೊಂದು ಸಮಾಜಪರ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿರುವ ಅಜೆಕಾರು ಘಟಕ ಹೆಬ್ರಿ ತಾಲ್ಲೂಕಿನಲ್ಲಿ ಸೇವೆಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಸಾರ್ವಜನಿಕ ಸಮಾರಂಭ, ಚಟುವಟಿಕೆಗಳಿಗೆ ಈ ಘಟಕದ ಸ್ವಯಂಸೇವಕರಿಗೆ ವಿಶೇಷ ಆಹ್ವಾನ ವಿರುತ್ತದೆ. ಸದಾ ಚಟುವಟಿಕೆಗಳಲ್ಲಿ ನಿರತರಾಗಿರುವ ಶೌರ್ಯ ಶ್ರೀ ಧರ್ಮಸ್ಥಳ ತಂಡದ ಬಗ್ಗೆ ಮಾಹಿತಿ ಪಡೆದಿದ್ದ ದಾಸಗದ್ದೆ ಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರು  ಶಾಲಾ ಆವರಣದಲ್ಲಿ ತರಕಾರಿ ಕೈತೋಟವನ್ನು ರಚನೆ ಮಾಡಿಕೊಡುವಂತೆ ವಿನಂತಿಸಿಕೊಂಡಿದ್ದರು. ಆ ಪ್ರಕಾರವಾಗಿ ಘಟಕದ ಸ್ವಯಂಸೇವಕರು ದಿನ ನಿಗದಿಪಡಿಸಿ ಕೈತೋಟ ರಚನೆ ಮಾಡಿರುತ್ತಾರೆ.

### ನಿರ್ವಹಣೆಗೂ ಗಮನ:

ಸ್ವಯಂಸೇವಕರು ಕೈತೋಟ ರಚನೆ ಮಾಡುವ ಕೆಲಸವನ್ನು ಮಾತ್ರ ಮಾಡಿ ಸುಮ್ಮನೇ ಇರಲಿಲ್ಲ. ಬದಲಿಗೆ ಕೈತೋಟದ ನಿರ್ವಹಣೆಯ ಜವಾಬ್ದಾರಿಯನ್ನೂ ವಹಿಸಿಕೊಂಡರು. ಕೆಲವು ಸ್ವಯಂಸೇವಕರ ಮನೆಗಳು ಶಾಲೆಯ ಸಮೀಪವೇ ಇರುವುದರಿಂದ ಆಗಾಗ ಕೈತೋಟವನ್ನು ನೋಡಿ ಬರುತ್ತಿದ್ದರು. ನೀರುಣಿಸುವುದು, ಗೊಬ್ಬರ ಹಾಕುವುದು, ಕಳೆ ಬರದಂತೆ ನೋಡಿಕೊಳ್ಳುವುದು, ಪ್ರಾಣಿಗಳಿಗೆ ಆಹಾರವಾಗದಂತೆ ತಡೆಯುವ ಕೆಲಸ ಮಾಡುತ್ತಿದ್ದರು. ಪರಿಣಾಮವಾಗಿ ಕೈತೋಟ ಹುಲುಸಾಗಿ ಬೆಳೆದಿದ್ದು ತರಕಾರಿ ಅಡುಗೆಗೆ ಲಭ್ಯವಾಗುತ್ತಿವೆ.

### ಬಗೆಬಗೆಯ ತರಕಾರಿ:

ಕೈತೋಟ ರಚನೆಯ ಪೂರ್ವ ಸಾಕಷ್ಟು ಸಿದ್ಧತೆಗಳನ್ನು ನಡೆಸಿಕೊಂಡ ಸ್ವಯಂಸೇವಕರು ಸೂಕ್ತವಾದ ಸ್ಥಳವನ್ನು ಗುರುತಿಸಿ ಭೂಮಿಯನ್ನು ಹಸನುಗೊಳಿಸಿ, ಕೈತೋಟದ ಸುತ್ತಲೂ ಭದ್ರತೆಯ ವ್ಯವಸ್ಥೆ ಮಾಡಿದ್ದಾರೆ. ಮಡಿ ತಯಾರಿಸಿ, ಸಾವಯವ ಗೊಬ್ಬರ ಬಳಸಿ ಭೂಮಿಯನ್ನು ಬೀಜ ಬಿತ್ತನೆಗೆ ಹದಗೊಳಿಸಿದ್ದಾರೆ. ಬಸಳೆ, ಬದನೆ, ಬೆಂಡೆ, ಹರಿವೆ, ಅಲಸಂಡೆ, ನೆಲಬಸಳೆ ಹೀಗೆ ವಿಧ ವಿಧದ ತರಕಾರಿ ಬೀಜಗಳನ್ನು ಬಿತ್ತಿದ್ದಾರೆ. ಸೊಪ್ಪುಗಳನ್ನು ಭೂಮಿಗೆ ಊರಿದ್ದಾರೆ.



ಘಟಕದ ಸ್ವಯಂಸೇವಕರಾದ ಶ್ರೀಮತಿ ಸುಲೋಚನಾ ಇವರು ಅಂಗನವಾಡಿಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಕೈತೋಟವನ್ನು ಕಾಳಜಿಯಿಂದ ನೋಡಿಕೊಳ್ಳುತ್ತಿದ್ದಾರೆ. ಸ್ವಯಂಸೇವಕರಾದ ಪ್ರವೀಣ ಇವರ ಮನೆಯು ಶಾಲೆಯ ಸಮೀಪವೇ ಇರುವುದರಿಂದ ಗಮನ ವಹಿಸುತ್ತಿದ್ದಾರೆ. ಬೇಲಿಯ ಭದ್ರತೆಯನ್ನು ಕೈತೋಟಕ್ಕೆ ಮಾಡಲಾಗಿರುವುದರಿಂದ ಗಿಡಗಳು ಹಾಳಾಗುವುದು ತಪ್ಪಿವೆ.

## ಬಿಸಿ ಊಟಕ್ಕೆ ತರಕಾರಿ:

ಶಾಲೆಯ ಬಿಸಿ ಊಟದ ತಯಾರಿಗೆ ಶಾಲಾ ಕೈತೋಟದ ಬದನೆ, ಹರಿವೆ, ಬಸಳೆ ಮತ್ತಿತರ ತರಕಾರಿಗಳು ಬಳಕೆಯಾಗುತ್ತಿವೆ. ಶಾಲೆಯಲ್ಲಿಯೇ ಕಣ್ಣೆದುರಲ್ಲಿಯೇ ಬೆಳೆದ ತರಕಾರಿಗಳನ್ನು ಗಮನಿಸುತ್ತಿರುವ ಮಕ್ಕಳು ಕೈತೋಟದೆಡೆಗೆ ಕುತೂಹಲ ಹೊಂದಿದ್ದಾರೆ. ಘಟಕದ ಸಂಯೋಜಕಿ ವಿಜಯ, ಸ್ವಯಂಸೇವಕರಾದ ಪ್ರವೀಣ್, ರಾಜೇಶ್, ಸುಶ್ಮಿತಾ, ರೇಷ್ಮಾ, ಪ್ರದೀಪ, ಅಶೋಕ, ಲಲಿತ, ಸುಲೋಚನಾ ಇವರು ಶ್ರಮದಾನವನ್ನು ನಡೆಸಿರುತ್ತಾರೆ.



ವಿಪತ್ತು ನಿರ್ವಹಣಾ ಘಟಕಗಳು ಸಾಮಾಜಿಕ ಸೇವಾ ಚಟುವಟಿಕೆಗಳ ಮೂಲಕ ಸಮುದಾಯದ ಗಮನ ಸೆಳೆಯಬಹುದು ಎನ್ನುವುದಕ್ಕೆ ಅಜೆಕಾರು ಘಟಕ ಉದಾಹರಣೆಯಾಗಿದೆ. ಸಾಕಷ್ಟು ಸಾಮಾಜಿಕ ಕಳಕಳಿಯನ್ನು ಹೊಂದಿರುವ ಸ್ವಯಂಸೇವಕರು ಈ ಘಟಕದಲ್ಲಿರುವುದು ಯಶಸ್ಸಿಗೆ ಕಾರಣವಾಗಿದೆ. ಘಟಕದ ಸ್ವಯಂಸೇವಕರ ಈ ಸೇವೆಗೆ ಶಾಲಾ ಶಿಕ್ಷಕರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

***********

# 6. ಕುಡಿಯುವ ನೀರಿನ ಟ್ಯಾಂಕ್ ಬಣ್ಣ ಬಳದ ಸ್ವಯಂಸೇವಕರು




ಮುಧೋಳ, ಮಾರ್ಚ್ 4: ತಾಲ್ಲೂಕಿನ ಮೆಟಗುಡ್ಡ ಗ್ರಾಮದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕುಡಿಯುವ ನೀರಿನ ಟ್ಯಾಂಕ್ ನ್ನು ಗ್ರಾಮದ  ಮುಖಂಡರಾದ ಮಹಾದೇವ ಸಿ. ನಾವ್ಹಿ ಇವರು ಸ್ವಂತ ಖರ್ಚಿನಲ್ಲಿ ನಿರ್ಮಾಣ ಮಾಡಿದ್ದು ಟ್ಯಾಂಕ್ ಕಟ್ಟೆ ಕಟ್ಟುವ ಮತ್ತು ಅಳವಡಿಕೆ ಮಾಡುವ ಕೆಲಸವನ್ನು ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕ ಮೆಟಗುಡ್ಡದ ಸ್ವಯಂಸೇವಕರು ನಡೆಸಿದರು.

ಕುಡಿಯುವ ನೀರಿನ ಟ್ಯಾಂಕ್ ಸುತ್ತಮುತ್ತಲಿನ ಸುಮಾರು 20 ಕುಟುಂಬಗಳ ನೀರಿನ ಅಗತ್ಯತೆಯನ್ನು ಪೂರೈಸುತ್ತಿದೆ. ಅಲ್ಲದೇ ಈ ಪ್ರದೇಶವು ರುದ್ರಭೂಮಿ ಸಮೀಪದಲ್ಲಿ ಇದ್ದು ರುದ್ರಭೂಮಿಯ ಅಗತ್ಯ ಬಳಕೆಗೆ ನೀರು ಅನುಕೂಲವಾಗುತ್ತಿದೆ. ಗ್ರಾಮದಲ್ಲಿ ಜಾತ್ರೆ ಇರುವ ಹಿನ್ನೆಲೆಯಲ್ಲಿ ಟ್ಯಾಂಕ್ ಗೆ ಬಣ್ಣ ಬಳಿಯಲು ನಿರ್ಧರಿಸಿದ ಸ್ವಯಂಸೇವಕರು ಕೆಲಸವನ್ನು ಪೂರೈಸಿದ್ದಾರೆ.

ಮೆಟಗುಡ್ಡ ಘಟಕದ ಸ್ವಯಂಸೇವಕರು ಕಳೆದ ಮೂರು ವರ್ಷಗಳಿಂದ ಒಂದಲ್ಲಾ ಒಂದು ಸಾಮಾಜಿಕ ಸೇವಾ ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಗ್ರಾಮದಲ್ಲಿರುವ ಕುಡಿಯುವ ನೀರಿನ ಟ್ಯಾಂಕ್ ಗಳು, ಕೊಳವೆ ಬಾವಿ, ನಲ್ಲಿಯ ಸುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತಾ ಶ್ರಮದಾನವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ.



ಗ್ರಾಮದ ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಛಗೊಳಸುವುದರೊಂದಿಗೆ ಬಣ್ಣ ಬಳದು ಅಂದಗೊಳಿಸಿದ ಸ್ವಯಂಸೇವಕರ ಸೇವೆ ಸಾರ್ವಜನಿಕರ ಶ್ಲಾಘನೆಗೆ ಪಾತ್ರವಾಗಿದೆ. ಸಂಯೋಜಕರಾದ ಪಾರ್ವತಿ, ಘಟಕ ಪ್ರತಿನಿಧಿ ಎಚ್.ಎಸ್ ತೆಳಗಡೆ, ಸ್ವಯಂಸೇವಕರಾದ ಮಾರುತಿ, ಯಮನವ್ವ, ಮಾಹಾದೇವಿ, ಹಣಮಂತ .ಸರಸ್ವತಿ, ಶ್ರೀಶೈಲ  ಶ್ರಮದಾನದಲ್ಲಿ ಪಾಲ್ಗೊಂಡಿದ್ದರು.

*************

## 7. ಹೆಬ್ರಿ ಕೊಲ್ಲೂರು ರಾಜ್ಯ ಹೆದ್ದಾರಿಯ ಸೂಚನಾಫಲಕಗಳ ಸ್ವಚ್ಚತೆ,



ಹೆಬ್ರಿ, ಮಾರ್ಚ್ 5,2025: ಹೆಬ್ರಿ ಕೊಲ್ಲೂರು ರಾಜ್ಯ ಹೆದ್ದಾರಿಯ ಇಕ್ಕೆಲಗಳಲ್ಲಿ ಅನೇಕ ಸೂಚನಾ ಫಲಕಗಳಿವೆ. ಹೆದ್ದಾರಿಯಾಗಿರುವುದರಿಂದ ಈ ಮಾರ್ಗದಲ್ಲಿ ಸಾಗುವ ವಾಹನಗಳ ಸಂಖ್ಯೆ ಜಾಸ್ತಿ. ವಾಹನಗಳ ಓಡಾಟಕ್ಕೆ ಸೂಚನಾ ಫಲಕಗಳು ಅತಿ ಪ್ರಾಮುಖ್ಯ. ಈ ಭಾಗದಲ್ಲಿರುವ ಸೂಚನಾ ಫಲಕಗಳನ್ನು ಅಳವಡಿಸಿ ಬಹಳ ದಿನಗಳಾಗಿದ್ದರಿಂದ ಧೂಳು ಆವರಿಸಿ ಕಳೆಗುಂದಿದ್ದವು. ವಾಹನ ವೇಗವಾಗಿ ಓಡುತ್ತಿದ್ದರೆ ಸೂಚನಾ ಫಲಕ ಗಳು ಸ್ಪಷ್ಟವಾಗಿ ಗೋಚರಿಸದೇ ಚಾಲಕರು ತೊಂದರೆ ಅನುಭವಿಸಿದ್ದೂ ಇದೆ.

ಸ್ವಚ್ಚತೆ ಮತ್ತು ದುರಸ್ತಿ: ರಸ್ತೆ ಮಾರ್ಗ ಸೂಚಿಗಳನ್ನು, ಸೂಚನಾ ಫಲಕಗಳನ್ನು ಸ್ವಚ್ಚಗೊಳಿಸಿಬೇಕು ಎಂದು ನಿರ್ಧರಿಸಿದ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕ ಚಾರ ಬೆಳಂಜೆ ಘಟಕದ ಸ್ವಯಂಸೇವಕರು ಹೆಬ್ರಿ ಕೊಲ್ಲೂರು ರಾಜ್ಯ ಹೆದ್ದಾರಿಯ ಇಕ್ಕೆಲಗಳಲ್ಲಿ ಇರುವ ಸೂಚನಾ ಫಲಕಗಳು, ಮಾರ್ಗಸೂಚಿಗಳನ್ನು ಸ್ವಚ್ಚಗೊಳಿಸಿದ್ದಾರೆ. ಕೆಲವು ಸೂಚನಾ ಫಲಕಗಳಿಗೆ ಅಡ್ಡಲಾಗಿ ಮರದ ಗೆಲ್ಲುಗಳು ತೂಗಿ ನಿಂತಿದ್ದು ವಾಹನ ಚಾಲಕರಿಗೆ ಸೂಚನಾ ಫಲಕಗಳು ಗೋಚರವಾಗುತ್ತಿರಲಿಲ್ಲ. ಇಂತಹ ಕಡೆಗಳಲ್ಲಿ ಮರದ ಗೆಲ್ಲುಗಳನ್ನು ತೆರವುಗೊಳಿಸಿದ್ದಾರೆ. ತೀರಾ ಹಳೆಯದಾಗಿದ್ದ ಕೆಲವು ಫಲಕಗಳು ಬಾಗಿಕೊಂಡಿದ್ದು ಅವುಗಳನ್ನು ಸರಿಪಡಿಸಿದ್ದಾರೆ. ಫಲಕಗಳ ಸುತ್ತಲೂ ಬೆಳೆದಿದ್ದ ಗಿಡಕಂಟಿಗಳನ್ನು ತೆರವುಗೊಳಿಸುವ ಕೆಲಸವನ್ನು ಸ್ವಯಂಸೇವಕರು ಮಾಡಿದ್ದಾರೆ.

4 ಕಿಮೀ ದೂರದ ವರೆಗೆ: ಚಾರ ಮೂರು ರಸ್ತೆ ಸರ್ಕಲ್ ನಿಂದ ಬೇಳಂಜೆ ತೆಂಕೊಲ ಅರಣ್ಯ ವಿಭಾಗದವರೆಗೆ ಸುಮಾರು 4 ಕಿಲೋಮೀಟರ್ ದೂರದ ವರೆಗೆ ರಸ್ತೆಯ ಇಕ್ಕೆಲಗಳಲ್ಲಿನ 30 ಕ್ಕೂ ಹೆಚ್ಚು ಫಲಕಗಳನ್ನು ಸ್ವಚ್ಚಗೊಳಿಸುವ ಕೆಲಸವನ್ನು ಸ್ವಯಂಸೇವಕರು ಮಾಡಿದ್ದಾರೆ. ಸ್ವಯಂಸೇವಕರು ಕೆಲಸ ಮಾಡುತ್ತಿದ್ದ ಸಮಯದಲ್ಲಿ ತಮ್ಮ ವಾಹನವನ್ನು ನಿಲ್ಲಿಸಿದ ಅನೇಕರು ಕೆಲಸವನ್ನು ಗಮನಿಸಿ ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಅನೇಕ ಯಾತ್ರಿಕರು ಸ್ವಯಂಸೇವಕರ ಸಮವಸ್ತ್ರವನ್ನು ಗಮನಿಸಿ ತಂಡದ ಬಗ್ಗೆ ಕೇಳಿ ತಿಳಿದಿದ್ದು ಸಂಘಟನೆಯ ಕಾರ್ಯಚಟುವಟಿಕೆಗಳ ಬಗ್ಗೆ ಅಚ್ಚರಿ ವ್ಯಕ್ತಪಡಿಸಿರುತ್ತಾರೆ.



ಶ್ರಮದಾನದಲ್ಲಿ ಘಟಕ ಪ್ರತಿನಿಧಿ ಚಂದ್ರ ನಾಯ್ಕ, ಸ್ವಯಂಸೇವಕರಾದ ಸುಮಲತಾ, ಶಶಿಕಲಾ, ಗಂಗಾರತ್ನ, ಶ್ರೀನಿವಾಸ ನಾಯ್ಕ, ಮಹೇಶ್ ನಾಯ್ಕ್, ಸಂತೋಷ ನಾಯ್ಕ, ಸಂತೋಷ ಪೂಜಾರಿ, ಕೆ.ಕೃಷ್ಣ ನಾಯ್ಕ ಮತ್ತು ನಯನ್ ಕುಮಾರ್ ಉಪಸ್ಥಿತರಿದ್ದರು.

**********

# ೮. ಕುಡಿಯುವ ನೀರಿನ ಬಾವಿ ಸ್ವಚ್ಚತೆ



ಪುತ್ತೂರು, ಮಾರ್ಚ್ ೦೮, 2025: ಬೇಸಿಗೆಯ ಉರಿ ಬಿಸಿಲಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಸಾಮಾನ್ಯ. ಕುಡಿಯುವ ನೀರಿನ ಬಾವಿಯಲ್ಲಿ ನೀರು ಬತ್ತುವುದನ್ನು ಕಾಣುತ್ತಿರುತ್ತೇವೆ. ವರ್ಷವಿಡೀ ನೀರನ್ನು ಪೂರೈಸುವ ಕುಡಿಯುವ ನೀರಿನ ಬಾವಿಗಳು ಎಪ್ರಿಲ್ ತಿಂಗಳ ವೇಳೆಗೆ ನೀರನ್ನು ಇಂಗಿಸಿಕೊಂಡು ಬಾವಿಯ ತಳ ಒಣಗಿರುವುದು ಅಲ್ಲಲ್ಲಿ ಕಂಡು ಬರುತ್ತದೆ.

## ಬತ್ತಿದ ಬಾವಿ:

ಪುತ್ತೂರು ತಾಲ್ಲೂಕಿನ ಬುಲೇರಿಕಟ್ಟೆ ಗ್ರಾಮದ ಸುಮಿತ್ರಾ ಇವರ ಮನೆಯ ಕುಡಿಯುವ ನೀರಿನ ಬಾವಿ ಇದೀಗ ನೀರು ಬತ್ತಿಸಿಕೊಂಡಿದೆ. ಕುಡಿಯುವ ನೀರಿಗಾಗಿ ಕಷ್ಟಪಟ್ಟು ಬಹಳ ದೂರ ಹೋಗಿ ತರಬೇಕಾದ ಅನಿವಾರ್ಯತೆ ಇವರಿಗಿದೆ. ಕಳೆದ ಮೂರು ತಿಂಗಳಿನಿಂದ ಬಾವಿಯ ನೀರು ಸಿಗದೇ ಬೇರೆಡೆಯಿಂದ ನೀರು ತರುತ್ತಿದ್ದಾರೆ.

ಬಾವಿಯಲ್ಲಿ ನೀರಿನ ಪಸೆ ಇರುವುದರಿಂದ ಇನ್ನಷ್ಟು ಆಳಗೊಳಿಸಿದರೆ  ನೀರು ಸಿಗಬಹುದೆಂದು ಬಾವಿಯನ್ನು ಗಮನಿಸಿದ ಅನೇಕರು ಸಲಹೆ ನೀಡಿದ್ದರು. ಆದರೆ ಹಣಕಾಸಿನ ಸಮಸ್ಯೆಯಿಂದಾಗಿ ಬಾವಿಯ ಕೆಲಸ ಮಾಡಲು ಸಾಧ್ಯವಾಗದೇ ಇದ್ದರು.

ಇದೀಗ ನೀರಿನ ಸಮಸ್ಯೆ ಎಲ್ಲಾ ಕಡೆಗಳಲ್ಲಿ ಸಾಮಾನ್ಯವೆಂಬಂತೆ ಕೇಳಬರುತ್ತಿದೆ. ಎಲ್ಲರ ಮನೆಯಲ್ಲೂ ಬಾವಿ ನೀರನ್ನು ತಗ್ಗಿಸಿಕೊಂಡಿವೆ. ಉಳಿದವರಿಗೆ ನೀರು ಕೊಡುತ್ತಾ ಹೋದರೆ ತಮಗೆ ನೀರಿನ ಬರ ಎದುರಾಗಬಹುದು ಎಂದು ಹೆಚ್ಚಿನವರು ಬಾವಿಯ ನೀರನ್ನು ತೆಗೆಯಲು ಅವಕಾಶ ಮಾಡಿಕೊಡುವುದಿಲ್ಲ. ಈ ಸಮಸ್ಯೆಯನ್ನು ಅರಿತ ಸುಮಿತ್ರಾ ಇವರು ತಮ್ಮ ಮನೆಯ ಬಾವಿಯ ಹೂಳನ್ನು ತೆಗೆಯಲು ನಿರ್ಧರಿಸಿದರು.



## ಸ್ವಯಂಸೇವಕರಿಗೆ ಮನವಿ:

ತಮ್ಮ ಮನೆಯ ಬಾವಿಯ ಹೂಳನ್ನು ತೆಗೆಯಲು ಸಹಾಯ ಕೋರಿ ಶೌರ್ಯ ಶ್ರೀ ಧರ್ಮಸ್ಥಳದ ಬಲ್ನಾಡು ಘಟಕದ ಸ್ವಯಂಸೇವಕರಲ್ಲಿ ಕೇಳಿಕೊಂಡಿದ್ದರು. ಆರ್ಥಿಕ ಸಮಸ್ಯೆಯನ್ನು ಎದುರಿಸುತ್ತಿರುವ ಸುಮಿತ್ರಾ ಇವರ ಬಗ್ಗೆ ಅರಿತಿರುವ ಸ್ವಯಂಸೇವಕರು ಅವರ ಮನವಿಗೆ ಸ್ಪಂದಿಸಿ ಬಾವಿ ಸ್ವಚ್ಚತಾ ಶ್ರಮದಾನ ನಡೆಸಿದ್ದಾರೆ. ಸುಮಿತ್ರಾ ಇವರು

ಘಟಕದ ಸದಸ್ಯೆಯಾಗಿ ಇರುವುದರಿಂದ ಗ್ರಾಮದಲ್ಲಿ ನಡೆಯುವ ಎಲ್ಲಾ ಸೇವಾ ಚಟುವಟಿಕೆಗಳಿಗೆ ಸಕ್ರೀಯವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ಗ್ರಾಮದ ಯಾವುದೇ ಸಮಸ್ಯೆಗಳಿಗೆ ಸ್ಪಂದಿಸುವ ಸ್ವಯಂಸೇವಕರು ತಮ್ಮದೇ ಘಟಕದ ಓರ್ವ ಸದಸ್ಯೆ ತೊಂದರೆಯಲ್ಲಿ ಇರುವಾಗ ಅ ವರ ಸಮಸ್ಯೆಗೆ ಸ್ಪಂದಿಸಬೇಕೆಂದು ನಿರ್ಧರಿಸಿದ ಘಟಕದ ಸದಸ್ಯರು ಶ್ರಮದಾನ ನಡೆಸಿದ್ದಾರೆ.

**ಒಂದು ದಿನದ ಸೇವೆ:**



ಒಂದು ದಿನ ನಡೆದ ಸೇವೆಯಲ್ಲಿ ಬಾವಿಯಲ್ಲಿ ಇಳಿದು, ಕೆಸರು ಮಣ್ಣನ್ನು ತೆರವುಗೊಳಿಸಿ ಶುಭ್ರಗೊಳಿಸಿದ್ದಾರೆ. ಮೊದಲಿಗಿಂತಲೂ ಒಂಭತ್ತು ಅಡಿಗಳಷ್ಟು ಹೆಚ್ಚುವರಿ ಆಳ ಮಾಡಿದ್ದಾರೆ. ಪರಿಣಾಮ ನೀರಿನ ಸೆಲೆಗಳು ಬಾವಿಯಲ್ಲಿ ಕಾಣಿಸಿಕೊಂಡು ಕುಡಿಯಲು ಸಾಕಾಗುವಷ್ಟು ನೀರು ಸಿಗತೊಡಗಿದೆ.

**ಸಾಲ ಮಾಡಬೇಕಾದ ಹಣ ಉಳಿತಾಯ:**

“ಬಾವಿಯ ಕೆಲಸ ಮಾಡಬೇಕಾಗಿದ್ದಲ್ಲಿ 10,000 ಕ್ಕೂ ಹೆಚ್ಚು ಹಣ ಖರ್ಚು ಮಾಡಬೇಕಾಗಿತ್ತು. ಅಷ್ಟು ಹಣವನ್ನು ಸಾಲ ಮಾಡಿಯೇ ಪಾವತಿಸಬೇಕಾಗಿತ್ತು. ಆದರೆ ನಮ್ಮ ಊರಿನಲ್ಲಿ ಶೌರ್ಯ ತಂಡ ಇರುವುದರಿಂದ ಬಹಳ ಅನುಕೂಲವಾಯಿತು” ಎನ್ನುತ್ತಾರೆ ಸುಮಿತ್ರಾ.

ಬಾವಿ ಕೆಲಸ ಮಾಡಿಕೊಡಬೇಕೆಂದು ಸಂಯೋಜಕರು ಮತ್ತು ಘಟಕ ಪ್ರತಿನಿಧಿಗಳಲ್ಲಿ ಕೇಳಿಕೊಂಡಾಗ ಈ ವಿಷಯವನ್ನು ತಮ್ಮ ತಂಡದ ಸ್ವಯಂಸೇವಕರ ಗಮನಕ್ಕೆ ತಂದಿದ್ದರು. ಕೂಡಲೇ ಸ್ಪಂದಿಸಿದ ತಂಡದ ಸ್ವಯಂಸೇವಕರು ದಿನ ನಿಗದಿಪಡಿಸಿ ಬಾವಿಯ ಸ್ವಚ್ಚತಾ ಶ್ರಮದಾನ ನಡೆಸಿದ್ದಾರೆ. ಸ್ವಯಂಸೇವಕರಾದ ಕಾರ್ತಿಕ್,ರೋಷನ್, ಹರಿಪ್ರಸಾದ್, ಹರೀಶ್, ಸುಗಂಧಿ, ಇವರು ಶ್ರಮದಾನದಲ್ಲಿ ಪಾಲ್ಗೊಂಡಿದ್ದರು. ಸಂಯೋಜಕರಾದ ಆಶಾಲತಾ ಇದ್ದರು.

*********

## ೯. ಶ್ರಮದಾನದ ಮೂಲಕ ಕುಡಿಯುವ ನೀರಿನ ಬಾವಿ ತೆಗೆದ ಇಡಗುಂಜಿ ಘಟಕದ ಸ್ವಯಂಸೇವಕರು



ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಕುಟುಂಬವೊಂದಕ್ಕೆ ಶ್ರಮದಾನದ ಮೂಲಕ ಬಾವಿಯನ್ನು ತೆಗೆದು ಕುಡಿಯುವ ನೀರಿನ ಅಗತ್ಯವನ್ನು ಪೂರೈಸಲು ತನ್ನದೇ ಆದ ಕೊಡುಗೆಯನ್ನು ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಾದ ಪ್ರಕಾಶ ಅವರು ನೀಡಿ ತಮ್ಮ ಸಾಮಾಜಿಕ ಪ್ರಜ್ಞೆಯನ್ನು ಮೆರೆದಿದ್ದಾರೆ.

**ಇನ್ನೊಬ್ಬರ ಮನೆಯಿಂದ ಕುಡಿಯುವ ನೀರು ತರಬೇಕಾದ ಅನಿವಾರ್ಯತೆ:**

ಪ್ರಕಾಶ್ ಅವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಮಾಳ್ಕೋಡು ಗ್ರಾಮದವರು. ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಘಟಕದ ಸ್ವಯಂಸೇವಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಸ್ನೇಹಿತರಾದ ವಿನಾಯಕ ಈರಯ್ಯ ನಾಯ್ಕರವರ ಕುಟುಂಬ ಕುಡಿಯುವ ನೀರಿಗೆ ತೀರಾ ಸಮಸ್ಯೆ

ಎದುರಿಸುತ್ತಿತ್ತು. ಬಲು ದೂರ ತೆರಳಿ ಇನ್ನೊಬ್ಬರ ಮನೆಯವರಲ್ಲಿ ವಿನಂತಿಸಿಕೊಂಡು ನಿತ್ಯ ಅಗತ್ಯವಿರುವ ಶುದ್ಧ ಕುಡಿಯುವ ನೀರನ್ನು ತರುವ ಅನಿವಾರ್ಯತೆ ಅವರಿಗಿತ್ತು.

**ದೂರದಿಂದ ಹೊತ್ತು ತರಬೇಕಿತ್ತು:**

ಪ್ರತಿ ದಿನ ಕುಡಿಯುವ ನೀರನ್ನು ದೂರದಿಂದ ನೀರು ಹೊತ್ತು ತರುವುದು ಮತ್ತು ನೀರಿಗಾಗಿ ಇನ್ನೊಬ್ಬರಲ್ಲಿ ವಿನಂತಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಇದು ಹಲವು ಬಾರಿ ಕಿರಿಕಿರಿ ಎನಿಸುತ್ತಿತ್ತು. ಕುಡಿಯು ನೀರಿಗಾಗಿ ಇನ್ನೊಬ್ಬರ ಹಂಗಿನಲ್ಲಿರಬೇಕಲ್ಲಾ ಎನ್ನುವ ವಿಷಯ ಇವರಿಗೆ ನೋವು ಉಂಟುಮಾಡಿತ್ತು.

**ಸ್ನೇಹಿತನಲ್ಲಿ ಚರ್ಚಿಸಿದ ಸ್ವಯಂಸೇವಕ:**

ತಮಗೆ ಇರುವ ಕುಡಿಯುವ ನೀರಿನ ಸಮಸ್ಯೆಯನ್ನು ತನ್ನ ಸ್ನೇಹಿತ ಪ್ರಕಾಶ್ ಅವರಲ್ಲಿ ಚರ್ಚಿಸಿದ ವಿನಾಯಕ ಅವರು ತಮ್ಮ ಮನೆಯ ಹತ್ತಿರವೇ ಬಾವಿ ತೆಗೆಯುವ ಆಲೋಚನೆಯನ್ನು ಹಂಚಿಕೊಂಡಿದ್ದರು. ಇನ್ನೊಬ್ಬರಿಗೆ ಸಹಾಯ ಮಾಡುವ ವಿಷಯದಲ್ಲಿ ಚುರುಕಾಗಿರುವ ಪ್ರಕಾಶ್ ಕೆಲಸ ಆರಂಭಿಸುವ ಬಗ್ಗೆ ತೀರ್ಮಾನ ಕೈಗೊಂಡು ದಿನ ನಿಗದಿಪಡಿಸಿ ಕೆಲಸ ಆರಂಭಿಸಿದ್ದರು.




**ಎರಡೇ ದಿನದಲ್ಲಿ ಬಾವಿ ಸಿದ್ಧ:**

ಬಾವಿ ತೆಗೆಯಲು ಸ್ಥಳ ಗುರುತಿಸಿಕೊಂಡು ಕಾಯಕ ಆರಂಭವಾಯಿತು. ಪ್ರಕಾಶ್, ವಿನಾಯಕ ಮತ್ತು ಗಣೇಶ್ ಈ ಮೂವರು ಶ್ರಮಕ್ಕಿಳಿದರು. ಎರಡೇ ಎರಡು ದಿನದಲ್ಲಿ ಎಂಟು ಅಡಿಗಳಷ್ಟು ಆಳದ ಬಾವಿ ಸಿದ್ಧವಾಯಿತು. ಎರಡು ಅಡಿಗಳಷ್ಟು ಶುದ್ಧವಾದ ನೀರು ಬಾವಿಯಲ್ಲಿ ಸಂಗ್ರಹವಾಯಿತು. ನೀರಿನ ಒರತೆ ಚಿಮ್ಮತೊಡಗಿತ್ತು. ಇವರ ಮನೆಯ ಸಮೀಪವೇ ಶರಾವತಿ ನದಿ ಇದೆ. ಹಾಗಾಗಿ ನೀರಿನ ಸೆಲೆ ದೊರಕಲು ಹೆಚ್ಚು ಆಳದ ಗುಂಡಿ ತೋಡಬೇಕಾದ ಅಗತ್ಯ ಬರಲಿಲ್ಲ. ಎಂಟು ಅಡಿಯಲ್ಲಿಯೇ ನೀರು ಸೇದಲು ಸಿಕ್ಕಿತ್ತು.

**ಬಾವಿಯ ಸುತ್ತಲೂ ಕಲ್ಲು:**

ಬಾವಿಯ ಸುತ್ತಲೂ ಕಲ್ಲುಗಳನ್ನು ಕಟ್ಟುವ ಕೆಲಸವನ್ನೂ ಪೂರೈಸಿದ್ದಾರೆ. ಆಳದಿಂದ ಆರಂಭಿಸಿ ನೆಲ ಮಟ್ಟದವರೆಗೆ ಇಬ್ಬರೇ ಭದ್ರವಾಗಿ ಕಲ್ಲು ಜೋಡಿಸಿದ್ದಾರೆ. ಭೂಮಿಯ ಮೇಲ್ಭಾಗದಲ್ಲಿ ಕಲ್ಲಿನ ಬದುವನ್ನು ನುರಿತ ಮೇಸ್ತ್ರಿಯಿಂದ ಕಟ್ಟಿಸಿದ್ದಾರೆ. ಪ್ರಕಾಶ್ ಮತ್ತು ಅವರ ಸ್ನೇಹಿತರ ಸೇವಾಕಾರ್ಯ ಸುತ್ತಮುತ್ತಲಿನವರ ಗಮನ ಸೆಳೆದಿದೆ. ಎಲ್ಲವಕ್ಕೂ ಮುಖ್ಯವಾಗಿ ವಿನಾಯಕ ಅವರ ಕುಟುಂಬದ ಬಹುದಿನದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿದೆ.

**********

## 10. ದೇವಸ್ಥಾನಕ್ಕೆ ಕುಡಿಯುವ ನೀರಿನ ಬಾವಿ ತೆಗೆದರು ಸ್ವಯಂಸೇವಕರು



ದೇವಸ್ಥಾನದಲ್ಲಿ ಕುಡಿಯುವ ನೀರಿನ ಬಾವಿಯಿಲ್ಲ. ದೇವರ ಪೂಜೆಗೆ, ಭಕ್ತಾದಿಗಳ ಅವಶ್ಯಕತೆಗೆ ನೀರನ್ನು ದೂರದಿಂದ ತರಬೇಕು. ಇದನ್ನು ಗಮನಿಸಿದ ಸವಯಂಸೇವಕರು ಬಾವಿ ತೆಗೆಯುವ ಕೆಲಸ ಮಾಡಿ ಸಾಮಾಜಿಕ ಕಳಕಳ ಮೆರೆದಿದ್ದಾರೆ.

### ಗ್ರಾಮಕ್ಕೆ ಕೊಡುಗೆ ನೀಡಲು ನಿರ್ಧಾರ:

'ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಘಟಕಕ್ಕೆ ಸೇರ್ಪಡೆಗೊಂಡ ನಂತರ ತಮ್ಮ ಊರಿನಲ್ಲಿ ಏನಾದರೊಂದು ಸೇವಾಕಾರ್ಯವನ್ನು ನಿರ್ವಹಿಸಿ ಗ್ರಾಮಕ್ಕೆ ಕೊಡುಗೆಯನ್ನು ನೀಡಬೇಕು' ಎಂದು ಸುಳ್ಯ ತಾಲ್ಲೂಕಿನ ನೆಲ್ಲೂರು ದೊಡ್ಡತೋಟ-ಕೆಮ್ರಜೆ ಘಟಕದ ಸ್ವಯಂಸೇವಕರು ನಿರ್ಧರಿಸಿದ್ದರು. ಯಾವ ಕೆಲಸ ನಿರ್ವಹಿಸಬಹುದು ಯೋಚಿಸಿದಾಗ ಗ್ರಾಮದ ದೈವ ದೇವಸ್ಥಾನದಲ್ಲಿ ಕುಡಿಯುವ ನೀರಿಗೆ ಹಾಗೂ ದೇವರ ಅಭಿಷೇಕಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಬಾವಿಯನ್ನು ತೆಗೆಯುವ ನಿರ್ಧಾರವನ್ನು ದೇವಸ್ಥಾನದ ಸಮಿತಿ ಸದಸ್ಯರು ಮಾಡಿರುವ ವಿಷಯ ಗಮನಕ್ಕೆ ಬಂತು. ಸ್ಥಳೀಯ ಯುವಕರು, ಗ್ರಾಮಸ್ಥರು ಸೇರಿಕೊಂಡು ಬಾವಿ ತೆಗೆಯುವ ಶ್ರಮದಾನ ಮಾಡುವ ಬಗ್ಗೆ ನಿರ್ಧಾರವಾಗಿತ್ತು.

### ಭಕ್ತರಿಗೂ ಅನುಕೂಲ:

ಗಟ್ಟಿಗಾರುವಿನ ಮಂಡ್ರಪ್ಪಡಿ ದೈವ ದೇವಸ್ಥಾನದಲ್ಲಿ ವರ್ಷಕ್ಕೊಮ್ಮೆ ದೊಡ್ಡ ಜಾತ್ರೆ ನಡೆಯುತ್ತದೆ. ಕೇವಲ ಸುಳ್ಯ ಮಾತ್ರವಲ್ಲದೇ ಸುತ್ತಮುತ್ತಲಿನ ತಾಲ್ಲೂಕುಗಳಿಂದ ಸಾವಿರಾರು ಭಕ್ತರು ಆಗಮಿಸಿ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ದೇವರಿಗೆ ಸೇವೆ ಸಲ್ಲಿಸಿ ಕೃಪೆಗೆ ಪಾತ್ರರಾಗುತ್ತಾರೆ. ಹೀಗೆ ಸಾವಿರಾರು ಭಕ್ತರು ಬಂದು ಹೋಗುವ ಈ ದೇವಾಲಯದಲ್ಲಿ ನೀರಿನ ಬಾವಿ ಇರಲಿಲ್ಲ. ದೇವರ ಪೂಜೆಗೆಂದು ಸಮೀಪದಲ್ಲಿಯೇ ಇರುವ ಚೆಕ್ ಡ್ಯಾಮ್ ನಿಂದ ಪೈಪ್ ಲೈನ್ ಮೂಲಕ ನೀರು ಹರಿಸಿ ಬಳಸಲಾಗುತ್ತಿತ್ತು. ಕೆಲವೊಮ್ಮೆ ಡ್ಯಾಮ್‌ನಲ್ಲಿ ನೀರು ಬತ್ತಿದಾಗ ಪೈಪ್ ಮೂಲಕ ನೀರು ಹರಿಯುತ್ತಿರಲಿಲ್ಲ. ಅರ್ಚಕರು ದೇವಸ್ಥಾನಕ್ಕೆ ಅಗತ್ಯವಿರುವ ನೀರನ್ನು ಹೊತ್ತು ಸಾಗಿಸಬೇಕಿತ್ತು.



### ಬಾವಿ ತೆಗೆಯುವ ಶ್ರಮದಾನ:

ಶ್ರಮದಾನದ ಮೂಲಕ ಬಾವಿ ತೆಗೆಯುವ ದಿನ ನಿಗದಿಯಾಯಿತು. ಗ್ರಾಮಸ್ಥರು ಶ್ರಮಸೇವೆ ಆರಂಭಿಸಿದರು. ಎರಡು ದಿನದ ಅವಧಿಯಲ್ಲಿ ಹತ್ತು ಅಡಿ ಆಳದವರೆಗೆ ಮಣ್ಣನ್ನು ತೆಗೆದಿದ್ದರು. ಐದು ಇಂಚು ನೀರು ಸಹ ಬಾವಿಯಲ್ಲಿ ಕಾಣಿಸಿಕೊಂಡಿತ್ತು. ಕೆಲಸ ಆರಂಭಿಸಿದ ಮೂರನೆಯ ದಿನ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಶ್ರಮ ಸೇವೆಗೆ ತೊಡಗಿದ'ರು. ಬೆಳಗ್ಗೆ ಆರಂಭಿಸಿದ

ಕೆಲಸ ಸಂಜೆಯವರೆಗೂ ಮುಂದುವರಿಯಿತು. ಸ್ವಯಂಸೇವಕರು ಶ್ರಮದಾನ ಆರಂಭಿಸುವಾಗ ಬಾವಿಯ ಆಳ ಹತ್ತು ಅಡಿಗಳಷ್ಟಿತ್ತು. ವಿಪತ್ತು ಸೇವಾ ಘಟಕದ ಐದು ಮಂದಿಯ ಶ್ರಮದ ಪರಿಣಾಮ ಇನ್ನೈದು ಅಡಿಗಳಷ್ಟು ಆಳಕ್ಕೆ ಬಾವಿಯ ತಳ ಸೇರಿತು. ಬಾವಿಯ ಆಳ ಹದಿನೈದು ಅಡಿಗೆ ಇಳಿದಿತ್ತು. ತಗ್ಗಿದ ಬಾವಿಯಲ್ಲಿ ನೀರಿನ ಸೆಲೆಗಳು ಕಾಣಿಸಿಕೊಳ್ಳತೊಡಗಿದವು. ಬಿರು ಬೇಸಿಗೆಯಲ್ಲಿಯೂ ಎರಡು ಅಡಿಗಳಿಗೂ ಹೆಚ್ಚು ನೀರು ನಿಧಾನವಾಗಿ ತುಂಬಿಕೊಂಡವು.

### ಮೆಚ್ಚುಗೆಗೆ ಪಾತ್ರವಾದ ಕೆಲಸ:

ವಿಪತ್ತು ಸೇವಾ ಘಟಕದ ಸಂಯೋಜಕರಾದ ವೆಂಕಟ್ರಮಣ ಡಿ. ಜಿ, ಸ್ವಯಂಸೇವಕರಾದ ವೇಣುಗೋಪಾಲ, ಅಚ್ಯುತ, ಚೇತನ, ಹಿತೇಶ್ ಅವರು ಶ್ರಮ ಸೇವೆಯನ್ನು ನೀಡಿದವರು. ಬಾವಿ ತೆಗೆಯುವ ಶ್ರಮದಾನ ಮಾಡಿದ ವಿಪತ್ತು ನಿರ್ವಹಣಾ ಸ್ವಯಂಸೇವಕರ ಪ್ರಯತ್ನ ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾಯಿತು. ದೇವಸ್ಥಾನದ ಸಮಿತಿಯವರು ಸ್ವಯಂಸೇವಕರಿಗೆ ವಿಶೇಷ ಅಭಿನಂದನೆ ಸಲ್ಲಿಸಿದರು. ಮಂದ್ರಪ್ಪಾಡಿ ಮಂಟಮೆಯ ದೇವಾಲಯದ ವ್ಯವಸ್ಥಾಪಕ ಸಮಿತಿ ಅಧ್ಯಕ್ಷರಾದ ಶ್ರೀ ಮಾಧವ ಹರ್ಲಡ್ಕ, ಕಾರ್ಯದರ್ಶಿ ಶ್ರೀ ಗಣೇಶ್ ಗಟ್ಟಿಕಾರು, ಗ್ರಾಮ ಪಂಚಾಯ್ತಿಯ ಮಾಜಿ ಅಧ್ಯಕ್ಷರಾದ ಶ್ರೀ ಈಶ್ವರಪ್ಪ ಹಾರ್ಲಡ್ಕ ಅವರು ಶ್ರಮದಾನದ ಸಂದರ್ಭದಲ್ಲಿ ಉಪಸ್ಥಿತರಿದ್ದರು.

************

## 11. ಅಪಾಯಕಾರಿಯಾದ ತೆರೆದ ಬಾವಿಯ ಸುತ್ತಲೂ ಬೇಲಿ ರಚಿಸಿ ಅಪಾಯ ತಪ್ಪಿಸಿದ ಸ್ವಯಂಸೇವಕರು



ಮನೆಯ ಎದುರು, ತೋಟ, ಗದ್ದೆ ಮುಂತಾದ ಸ್ಥಳಗಳಲ್ಲಿ ತೆರೆದ ಬಾವಿಯನ್ನು ನಾವು ಹಲವು ನೋಡಿರುತ್ತೇವೆ. ರಾತ್ರಿ ವೇಳೆಯಲ್ಲಿ ಆ ಬಾವಿಯಲ್ಲಿ ಕಾಲುಜಾರಿ ಬಿದ್ದ ಘಟನೆಗಳ ಬಗ್ಗೆಯೂ ಓದಿರುತ್ತೇವೆ. ಮನುಷ್ಯರು, ಪ್ರಾಣಿಗಳು ಆಯ ತಪ್ಪಿ ಬಿದ್ದು ಪ್ರಾಣ ಕಳೆದುಕೊಂಡಿರುವುದೂ ನಮ್ಮ ಕಿವಿಗೆ ಆಗಾಗ ಬೀಳುತ್ತಿರುತ್ತದೆ. ಆದರೆ ಪ್ರಾಣಕ್ಕೆ ಮಾರಕವಾಗಬಲ್ಲ ಅಂತಹ ಬಾವಿಯ ಕಡೆಗೆ ದಿವ್ಯ ನಿರ್ಲಕ್ಷ್ಯ ಮಾತ್ರ ನಮ್ಮಲ್ಲಿ ಸಾಮಾನ್ಯ. ಇಂತಹ ಬಾವಿಯನ್ನು ಗುರುತಿಸಿ ಸಂಭವನೀಯ ಅಪಾಯದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಭಟ್ಕಳ ನಗರ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಮಾಡುತ್ತಿದ್ದಾರೆ. ಅಲ್ಲದೇ ಅಂತಹ ಬಾವಿಯನ್ನು ಹೊಂದಿರುವ ಕುಟುಂಬಗಳನ್ನು ಸಂಪರ್ಕಿಸಿ ಬಾವಿಯ ಸುತ್ತಲೂ ತಾತ್ಕಾಲಿಕ ಬೇಲಿಯನ್ನು ರಚಿಸುವ ಕೆಲಸವನ್ನೂ ಮಾಡಿರುತ್ತಿದ್ದಾರೆ. ಭಟ್ಕಳ ನಗರ ವಲಯದ ಮುಂಡಳ್ಳಿ ಗ್ರಾಮಪಂಚಾಯತ ವ್ಯಾಪ್ತಿಯಲ್ಲಿನ ಶ್ರೀಮತಿ ದಾಕ್ಷಾಯಣಿ ಅಣ್ಣಪ್ಪ ಆಚಾರಿ ಮತ್ತು ಶ್ರೀ ಕುಪ್ಪಯ್ಯ ಆಚಾರಿ ಎನ್ನುವವರಿಗೆ ಸೇರಿದ ನೆಲಸಮವಾಗಿರುವ ಎರಡು ತೆರದ ಬಾವಿಗಳ ಸುತ್ತಲೂ ತಾತ್ಕಾಲಿಕ ಬೇಲಿ ನಿರ್ಮಿಸುವ ಕೆಲಸವನ್ನು ಇಂದು ಭಟ್ಕಳ ವಲಯದ ಮೇಲ್ವಿಚಾರಕರಾದ ಶ್ರೀ ಭರತ ನಾಯ್ಕರವರ

ಮುಂದಾಳತ್ವದಲ್ಲಿ ನೆರವೇರಿಸಲಾಗಿದೆ. ಹೊನ್ನಾವರ-ಭಟ್ಕಳ ತಾಲೂಕಿನ ಯೋಜನಾಧಿಕಾರಿಗಳಾದ ಶ್ರೀ ಎಮ್.ಎಸ್.ಈಶ್ವರ ಅವರ ಮಾರ್ಗದರ್ಶನದಲ್ಲಿ ಸದ್ಯಕ್ಕೆ ಅತೀ ಅಪಾಯದಲ್ಲಿರುವ ಎರಡು ಬಾವಿಯನ್ನು ಗುರುತಿಸಿ ಬಾವಿಯ ಸುತ್ತ ಬೇಲಿಯನ್ನು ರಚಿಸಿ ಕೊಡಲಾಗಿದೆ.ಸಂಬಂಧಿಸಿದ ಕುಟುಂಬಗಳನ್ನು ಭಟ್ಕಳ ವಲಯ



ಮೇಲ್ವಿಚಾರಕರಾದ ಶ್ರೀ ಭರತ ನಾಯ್ಕ ಹಾಗೂ ವಿಪತ್ತು ನಿರ್ವಹಣಾ ಸಂಯೋಜಕರಾದ ಮಾದೇವ ನಾಯ್ಕ ತೆಂಗಿನಗುಂಡಿ ಇವರು ಭೇಟಿ ನೀಡಿ ಇಂತಹ ಬಾವಿಯಿಂದ ಮುಂದೆ ಸಂಭವಿಸಬಹುದಾದ ಅಪಾಯದ ಬಗ್ಗೆ ಕುಟುಂಬದ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟು ಅವರ ಮನವೊಲಿಸಿ ಎರಡೂ ಬಾವಿಗೆ ತಾತ್ಕಾಲಿಕ ಬೇಲಿ ನಿರ್ಮಿಸಿರುತ್ತಾರೆ. ಮುಂದಿನ ದಿನದಲ್ಲಿ ಬಾವಿಗೆ ಪಕ್ಕಾ ವ್ಯವಸ್ಥೆ ಮಾಡಿಸುವಂತೆ ತಿಳಿಸಿರುತ್ತಾರೆ. ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರ ಮನವಿಗೆ ಸ್ಪಂದಿಸಿದ ಎರಡೂ ಕುಟುಂಬದವರು ಬಾವಿಯ ಸುತ್ತಲೂ ಕಟ್ಟೆ ಕಟ್ಟುವುದಕ್ಕೆ ಒಪ್ಪಿಕೊಂಡು ಸ್ಪಂದಿಸಿರುತ್ತಾರೆ.ಈ ಸೇವಾ ಕಾರ್ಯದಲ್ಲಿ ಮುಂಡಳ್ಳಿ ಸೇವಾಪ್ರತಿನಿಧಿ ಅನೂಷ ದೇವಾಡಿಗ, ದಾಕ್ಷಾಯಿಣಿ ಅಣ್ಣಪ್ಪ ಆಚಾರಿ, ಕುಪ್ಪಯ್ಯ ಆಚಾರಿ ಭಾಗವಹಿಸಿ ಕಾರ್ಯವನ್ನು ಯಸಶ್ವಿಗೊಳಿಸಿರುತ್ತಾರೆ.ಈ ಕಾರ್ಯ ನೋಡಿದ ಸ್ಥಳೀಯರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ವಿಪತ್ತು ನಿರ್ವಹಣಾ ಘಟಕಕ್ಕೆ ಶುಭ ಹಾರೈಸಿರುತ್ತಾರೆ. ಮತ್ತು ಸೇವಾಕಾರ್ಯದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

**************

## 12. ವನ್ಯಜೀವಿ ಕಾಳಜಿ ಮತ್ತು ಕಾಳ್ಗಿಚ್ಚು ಜಾಗೃತಿ ಅಭಿಯಾನ



ಬೆಳ್ತಂಗಡಿ, ಮಾರ್ಚ್ 08, 2025: ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕ ಅರಸಿನಮಕ್ಕಿ -ಶಿಶಿಲ ಮತ್ತು ಕರ್ನಾಟಕ ಅರಣ್ಯ ಇಲಾಖೆ ಉಪ್ಪಿನಂಗಡಿ ವಲಯ ಜಂಟಿ ಸಹಭಾಗಿತ್ವದಲ್ಲಿ ವನ್ಯಜೀವಿ ಕಾಳಜಿ ಅಭಿಯಾನ ಮತ್ತು ಕಾಳ್ಗಿಚ್ಚು ಮುಂಜಾಗೃತಿ ಕ್ರಮಗಳ ಬಗ್ಗೆ ಜಾಗೃತಿ ಅಭಿಯಾನ ನಡೆಸಲಾಯಿತು.

ಉಪ್ಪಿನಂಗಡಿ ಅರಣ್ಯ ವಲಯದ ಕಾಡಂಚಿನ ಶಾಲೆಗಳಾದ ಶ್ರೀ ಗೋಪಾಲಕೃಷ್ಣ ಅನುದಾನಿತ ಶಾಲೆ ಅರಸಿನಮಕ್ಕಿ,ಸರಕಾರಿ ಪ್ರೌಢಶಾಲೆ ಅರಸಿನಮಕ್ಕಿ,ಶಿಶಿಲ ಶಾಲೆ ,ಕೊಳಕ್ಕೆಬೈಲು ಶಾಲಾ ವಿದ್ಯಾರ್ಥಿಗಳಿಗೆ ಪರಿಸರದೊಂದಿಗೆ ವನ್ಯಜೀವಿ ಸಂರಕ್ಷಣೆ ಮತ್ತು ಕಾಡ್ಗಿಚ್ಚು ಸಂಭವಿಸದಂತೆ ಅನುಸರಿಸುವ ಮುಂಜಾಗೃತಾ ಕ್ರಮಗಳು ಮತ್ತು ಕಾಡ್ಗಿಚ್ಚು ಕಂಡುಬಂದಲ್ಲಿ ಯಾವ ರೀತಿಯಾಗಿ ಅರಣ್ಯ ಇಲಾಖೆಯ ಸಂಪರ್ಕದೊಂದಿಗೆ ಸೇರಿಕೊಂಡು ಅದನ್ನು ಹತೋಟಿಗೆ ತರಬಹುದು ಎಂಬುದರ ಬಗ್ಗೆ ವಿಪತ್ತು ನಿರ್ವಹಣಾ ಸಮಿತಿಯ ಸದಸ್ಯ ಸುರೇಶ್ ಶಿಬಾಜೆ ವಿವರಿಸಿದರು.

ಅರಣ್ಯಾಧಿಕಾರಿ ನಾಗಲಿಂಗ ಮತ್ತು ಸಚಿನ್ ಇವರು ಬೇಸಿಗೆಯಲ್ಲಿ ವನ್ಯಜೀವಿಗಳಿಗೆ ಉಂಟಾಗುವ ನೀರಿನ ಕೊರತೆಗೆ ನಾಗರಿಕ ಸಮಾಜದಿಂದ ಯಾವ ರೀತಿಯ ಸಹಾಯ ಮಾಡಬಹುದೆಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಈ ಎಲ್ಲ ವಿಷಯಗಳ ಬಗ್ಗೆ ಜಾಗೃತಿಗಾಗಿ ಕರಪತ್ರಗಳನ್ನು ಹಂಚಲಾಯಿತು.ವಿಪತ್ತು ನಿರ್ವಹಣಾ ಘಟಕದ ಸಂಯೋಜಕಿ ರಶ್ಮಿತಾ ಶಿಶಿಲ,ಘಟಕ ಪ್ರತಿನಿಧಿ ಆನಂದ ನಾಯ್ಕ,ರಮೇಶ್ ಭೈರಕಟ್ಟ,ಅವಿನಾಶ್ ಭಿಡೆ,ಶೀನಪ್ಪ ಶಿಶಿಲ ಅಭಿಯಾನದಲ್ಲಿ ಸಹಕಾರ ನೀಡಿದರು.

ಶಿಶಿಲ ಶಾಲೆಯಲ್ಲಿ ಅಭಿಯಾನದ ಸಮಯದಲ್ಲಿ ಕಳೆದ ವರ್ಷ ಕಾಡ್ಗಿಚ್ಚು ಉಂಟಾದ ಸಮಯದಲ್ಲಿ ಅರಣ್ಯಾಧಿಕಾರಿಗಳಿಗೆ ಸಹಕಾರ ನೀಡಿದ ಮನೀಷ್ ಎಂಬ ಬಾಲಕನನ್ನು ಅರಣ್ಯಾಧಿಕಾರಿ ಸಚಿನ್ ಶ್ಲಾಘಿಸಿದರು.





***********

## 13. ಮೂವತ್ತು ದಿನ ನಡೆದ ಸ್ವಚ್ಛತಾ ಶ್ರಮದಾನ; ಗಾಂಧೀ ಜಯಂತಿ ಪ್ರಯುಕ್ತ ‘ಚಾರ’ ವಿಪತ್ತು ನಿರ್ವಹಣಾ ಘಟಕದಿಂದ ಶ್ಲಾಘನೀಯ ಸೇವೆ



ಹೆಬ್ರಿ ತಾಲ್ಲೂಕಿನ ‘ಶೌರ್ಯ’ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕ ಚಾರ ಇದರ ಸ್ವಯಂಸೇವಕರು ಗಾಂಧೀ ಜಯಂತಿ ಪ್ರಯುಕ್ತ ಸ್ವಚ್ಚತಾ ಶ್ರಮದಾನವನ್ನು ಒಂದು ತಿಂಗಳುಗಳ ಕಾಲ ನಿರಂತರವಾಗಿ ನಡೆಸಿ ಮಾದರಿಯಾಗಿದ್ದಾರೆ. ಸಾಮಾನ್ಯವಾಗಿ ಗಾಂಧೀ ಜಯಂತಿ ದಿನದಂದು ಸ್ವಚ್ಚತಾ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಒಂದು ದಿನಕ್ಕೆ ಅವು ಸೀಮಿತವಾಗಿರುತ್ತದೆ. ರಾಷ್ಟಪಿತನ ನೆನಪಿನಲ್ಲಿ ನಡೆಸುವ ಈ ಶ್ರಮದಾನ ಕೇವಲ ಒಂದು ದಿನಕ್ಕೆ ಸೀಮಿತವಾಗಬಾರದೆಂದು ತೀರ್ಮಾನಿಸಿದ ಶೌರ್ಯ ಸ್ವಯಂಸೇವಕರು ತಿಂಗಳು ಪೂರ್ತಿ ನಡೆಸಲು ತೀರ್ಮಾನಿಸಿ ಕೆಲಸ ಪೂರೈಸಿದ್ದಾರೆ.

## ಅಕ್ಟೋಬರ್ 1 ರಿಂದ ಆರಂಭ:



ಗಾಂಧೀ ಜಯಂತಿ ಮುನ್ನಾ ದಿನ ಅಕ್ಟೋಬರ್ 1 ರಂದು ಚಾರ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಗಾಂಧೀ ಜಯಂತಿ ಪೂರ್ವ ತಯಾರಿ ಕೆಲಸವಾಗಿ 22 ಮಂದಿ ಸ್ವಯಂಸೇವಕರು ಶಾಲೆಯ ಸುತ್ತಮುತ್ತ ಸ್ವಚ್ಛತಾ ಕೆಲಸವನ್ನು ಮಾಡಿದ್ದಾರೆ. ಘಟಕದ ಸಂಯೋಜಕರಾದ ಸಹದೇವ, ಘಟಕ ಪ್ರತಿನಿಧಿ ಚಂದ್ರ ನಾಯ್ಕ ಇವರ ನೇತ್ರತ್ವದಲ್ಲಿ ಶಾಲೆಯ ಶಿಕ್ಷಕರ ವಿನಂತಿಯ ಮೇರೆಗೆ ಶಾಲೆಯ ಆವರಣದೊಳಗಿನ ಅಪಾಯಕಾರಿ ಮರಗಳ ಗೆಲ್ಲುಗಳನ್ನು ತೆರವುಗೊಳಸುವುದು, ಶಾಲಾ ಕೈತೋಟದಲ್ಲಿ ಮಣ್ಣು ಹದಗೊಳಿಸಿ ತರಕಾರಿ ಬೀಜ ಬಿತ್ತನೆ, ಕಸ ಕಡ್ಡಿಗಳ ತೆರವು ಕೆಲಸವನ್ನು ಮಾಡುವುದರ ಮೂಲಕ ಸ್ವಚ್ಛತಾ ಅಭಿಯಾನ ಆರಂಭಿಸಿದರು.

## 15 ಕಿ.ಮಿ ರಸ್ಥೆಯ ಇಕ್ಕೆಲಗಳು ಸ್ವಚ್ಛ:

ಅಕ್ಟೋಬರ್ 2 ರಂದು ಚಾರ ಗ್ರಾಮದ ಪ್ರಯಾಣಿಕರ ಬಸ್ ತಂಗುದಾಣವನ್ನು ಸ್ವಚ್ಛಗೊಳಿಸಿ ಅರ್ಥಪೂರ್ಣವಾಗಿ ಗಾಂಧೀ ಜಯಂತಿ ಆಚರಿಸಿದ ಸ್ವಯಂಸೇವಕರು ನಂತರದಲ್ಲಿ ನವೆಂಬರ್ 1 ರ ವರೆಗೆ ಸ್ವಚ್ಛತಾ ಶ್ರಮದಾನವನ್ನು ಮುಂದುವರೆಸುವ ಅಭಿಲಾಷೆ ವ್ಯಕ್ತಪಡಿಸಿ ಸಭೆಯನ್ನು ಕರೆದು ಎಲ್ಲಿ ಶ್ರಮದಾನ ನಡೆಸಬಹುದು? ಯಾವ ಸಮಯದಲ್ಲಿ ನಡೆಸಬೇಕು? ಎನ್ನುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಂಡರು. ಚಾರ ಗ್ರಾಮದ ರಾಘವೇಂದ್ರ ಆಸ್ಪತ್ರೆಯ ಸರ್ಕಲ್ ನಿಂದ ಸುಮಾರು 15 ಕಿಲೋಮೀಟರ್ ದೂರದ ಬೆಳೆಂಜೆ ದೂಪದಕಟ್ಟೆಯ ವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸುವ ಬಗ್ಗೆ ತೀರ್ಮಾನಿಸಿ ಕೆಲಸ ಆರಂಭಿಸಿರುತ್ತಾರೆ.

## ನಿತ್ಯ ಸಾಯಂಕಾಲ ಕೆಲಸ:

ಪ್ರತಿ ದಿನ ಸಂಜೆ 5.30 ಗಂಟೆ ಯಿಂದ 6.30 ರ ವರೆಗೆ ಶ್ರಮದಾನ ನಡೆಸಿದ್ದಾರೆ. ಘಟಕದಲ್ಲಿ ಸದಸ್ಯರು ಹೆಚ್ಚಿನವರು ದಿನಗೂಲಿಗೆ ತೋಟದ ಕೆಲಸಕ್ಕೆ ಹೋಗುವವರು. ಸ್ವ ಉದ್ಯೋಗ ಮಾಡುವವರು, ಕೃಷಿಕರು, ಆಟೋ ಚಾಲಕರು, ವಾಹನ ಚಾಲಕರೂ ಇದ್ದಾರೆ. ಇವರು ಸಾಯಂಕಾಲ ಕೆಲಸ ಮುಗಿಸಿ ಸ್ವಚ್ಛತೆ ಕೆಲಸದಲ್ಲಿ ಭಾಗಿಯಾಗಿದ್ದಾರೆ. ಶೌರ್ಯ ಘಟಕದಲ್ಲಿ ಒಟ್ಟು 22 ಸದಸ್ಯರಿದ್ದು ಇದರಲ್ಲಿ ನಿತ್ಯ ಸರಾಸರಿ 15-18 ಮಂದಿ ಪಾಲ್ಗೊಳ್ಳುತ್ತಿದ್ದು ರಸ್ತೆಯುದ್ದಕ್ಕೂ ಸ್ವಚ್ಛತಾ ಕೆಲಸ ಮಾಡಿದ್ದಾರೆ.

## ಗ್ರಾಮ ಪಂಚಾಯತಿಯಿಂದ ನೆರವು:



ಆರಿಸಿದ ಕಸವನ್ನು ವಿಲೇವಾರಿ ಮಾಡುವುದು ಸವಾಲಿನ ಸಂಗತಿ. ಇದಕ್ಕಾಗಿ ಸ್ವಯಂಸೇವಕರಿಗೆ ಗ್ರಾಮ ಪಂಚಾಯತಿ ನೆರವಾಗಿದೆ. ಕಸ ಆರಿಸಿ ತೊಟ್ಟೆಯಲ್ಲಿ ಸಂಗ್ರಹಿಸಿ ಇಡುತ್ತಿದ್ದ ಕಸವನ್ನು ಗ್ರಾಮ ಪಂಚಾಯತಿ ಚಾರ ಹಾಗೂ ಗ್ರಾಮ ಪಂಚಾಯತಿ ಕುಚ್ಚೂರು ಇದರ ವತಿಯಿಂದ ವಾಹನವನ್ನು ಕಳುಹಿಸಿ ಕಸ ವಿಲೇವಾರಿ ಮಾಡಿದ್ದಾರೆ. ಅಲ್ಲದೇ ಸ್ವತಃ

ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರುಗಳು ಶ್ರಮದಾನದಲ್ಲಿ ಭಾಗವಹಿಸಿ ಸ್ವಯಂಸೇವಕರಿಗೆ ಪ್ರೇರಣೆ ತುಂಬಿದ್ದಾರೆ.

## ಸ್ಥಳೀಯರು ಭಾಗಿ:

ಸ್ವಯಂಸೇವಕರು ಸೇವೆಯನ್ನು ಗಮನಿಸಿದ ಸ್ಥಳೀಯರು ಶ್ರಮದಾನದಲ್ಲಿ ಭಾಗವಹಿಸಿ ಸೇವೆ ಸಲ್ಲಿಸಿರುತ್ತಾರೆ. ಅಕ್ಕಪಕ್ಕದ ಅಂಗಡಿಯವರು, ಆಟೋ ಚಾಲಕರು, ದಾರಿ ಹೋಕರು, ಮಕ್ಕಳು ಮತ್ತಿತರರು ರಸ್ತೆಯ ಇಕ್ಕೆಲಗಳಲ್ಲಿ ಬಿದ್ದಿರುವ ಬಾಟಲ್ ಗಳು, ಪ್ಲಾಸ್ಟಿಕ್ ಕವರ್ ಗಳು ಮತ್ತಿತರ ಪರಿಸರಕ್ಕೆ ಹಾನಿ ಉಂಟುಮಾಡಬಲ್ಲ ವಸ್ತುಗಳನ್ನು ತೆರವುಗೊಳಿಸಿ ತಮ್ಮ ಸಾಮಾಜಿಕ ಕಳಕಳಿಯನ್ನು ಮೆರೆದಿದ್ದಾರೆ. ಚಾರ ಗ್ರಾಮ ಪಂಚಾಯತ್ ಅಧ್ಯಕ್ಷರಾದ ದಿನೇಶ್ ಶೆಟ್ಟಿ, ಕುಚ್ಚೂರು ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಮಹೇಶ್ ಶೆಟ್ಟಿ, ಜನಜಾಗೃತಿ ವೇದಿಕೆಯ ಸದಸ್ಯರಾದ ವಾದಿರಾಜ್ ಶೆಟ್ಟಿ, ತಾಲ್ಲೂಕು ಯೋಜನಾಧಿಕಾರಿ ಲೀಲಾವತಿ, ವಲಯ ಮೇಲ್ವಿಚಾರಕರಾದ ರೇವತಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿಬ್ಬಂದಿಗಳು, ಶ್ರಮದಾನದಲ್ಲಿ ಭಾಗವಹಿಸಿ ಸ್ವಯಂಸೇವಕರ ಮಹತ್ಕಾರ್ಯಕ್ಕೆ ಕೈಜೋಡಿಸಿದ್ದಾರೆ.

ಸ್ವಯಂಸೇವಕರ ಈ ಸೇವೆಯನ್ನು ಗುರುತಿಸಿ ಚಾರ ಹಾಗೂ ಕುಚ್ಚೂರು ಗ್ರಾಮ ಪಂಚಾಯತಿ ಸದಸ್ಯರು ಅಭಿನಂದಿಸಿದ್ದಾರೆ. ಸ್ಥಳೀಯ ಸಂಘಸಂಸ್ಥೆಗಳು, ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು ಮೆಚ್ಚುಗೆ ಸೂಚಿಸಿದ್ದಾರೆ.




****************

# 14. 20 ಅಡಿ ಆಳದ ತೆರೆದ ಬಾವಿಯಲ್ಲಿ ಬಿದ್ದ ಆಕಳು; ರಕ್ಷಣೆ ಮಾಡಿದ ಸ್ವಯಂಸೇವಕರು




ಶಿರಸಿ ತಾಲ್ಲೂಕಿನ ಗಣೇಶನನಗರದ ಮನೆಯೊಂದರ ತೆರೆದ ಬಾವಿಯಲ್ಲಿ ಆಕಳು ಬಿದ್ದ ಘಟನೆ ನಡೆದಿದೆ. ನವೆಂಬರ್ 1, 2023 ರ ಸಾಯಂಕಾಲ ಕಾಡು ಸುತ್ತಿ ಮೇಯ್ದು ಕೊಟ್ಟಿಗೆಗೆ ಹೋಗಬೇಕಿದ್ದ ಶಿವರಾಮ್ ಎನ್ನುವವರಿಗೆ ಸೇರಿದ ಆಕಳು ಕಂಪೌಂಡ್ ಇಲ್ಲದ ಖಾಲಿ ಸ್ಥಳದಲ್ಲಿ ಹೊಸದಾಗಿ ತೆಗೆಯುತ್ತಿದ್ದ ಬಾವಿಯಲ್ಲಿ ಆಯತಪ್ಪಿ ಬಿದ್ದಿದೆ.

ಸುಮಾರು ಇಪ್ಪತ್ತು ಅಡಿ ತೆಗೆದಿದ್ದ ಬಾವಿಯಲ್ಲಿ ನೀರು ಇರಲಿಲ್ಲ. ಸಂಜೆ ಬಿದ್ದ ಆಕಳನ್ನು ಯಾರೂ ಗಮನಿಸಿರಲಿಲ್ಲ. ಬೆಳಗ್ಗೆ ದಾರಿಹೋಕರು ಆಕಳು ಕೂಗುವುದನ್ನು ಕೇಳಿ ಬಾವಿಯ ಹತ್ತಿರ ತೆರಳಿ ಗಮನಿಸಿದಾಗ ಆಕಳು ಬಿದ್ದಿರುವುದು ತಿಳಿದುಬಂದಿದೆ.




ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿದ ಸ್ಥಳೀಯರು ಬಾವಿಯಲ್ಲಿ ಬಿದ್ದ ಆಕಳನ್ನು ಮೇಲೆತ್ತಲು ಸಹಾಯ ಮಾಡುವಂತೆ ಶೌರ್ಯ ವಿಪತ್ತು ನಿರ್ವಹಣಾ ಘಟಕಕ್ಕೆ ವಿನಂತಿಸಿಕೊಂಡಿದ್ದರು. ಕೂಡಲೇ ಸ್ಥಳಕ್ಕೆ ಧಾವಿಸಿದ ಶಿರಸಿ 'ಎ' ಘಟಕದ ಸ್ವಯಂಸೇವಕರಾದ ಜಗದೀಶ್ ಗೌಡ ಹಾಗೂ ಇನ್ನಿತರ ಸ್ವಯಂಸೇವಕರು ಕಾರ್ಯಾಚರಣೆ ನಡೆಸಿದ್ದರು.

ಇಪ್ಪತ್ತು ಅಡಿಯ ಬಾವಿಯಲ್ಲಿ ಸಣ್ಣ ಪುಟ್ಟ ಗಾಯಗಳಾಗಿದ್ದು ಭಯಭೀತಿಯಿಂದಿದ್ದ ಆಕಳನ್ನು ಮೇಲಕ್ಕೆತ್ತುವುದು ಸವಾಲಿನ ಸಂಗತಿಯಾಗಿತ್ತು. ಸ್ವಯಂಸೇವಕರಾದ ಜಗದೀಶ್, ವಿನಾಯಕ ಹಾಗೂ ಶ್ರೀಕಾಂತ್ ಇವರು ಬಾವಿಯಲ್ಲಿ ಇಳಿದು ಆಕಳಿಗೆ ಹಗ್ಗವನ್ನು ಕಟ್ಟಿ ಮೇಲಕ್ಕೆ ಎಳೆಯಲು ಅನುಕೂಲ ಮಾಡಿಕೊಟ್ಟಿದ್ದಾರೆ.


ಬಾವಿಯ ಮೇಲೆ ನಿಂತಿದ್ದಂತಹ ಸ್ವಯಂಸೇವಕರಾದ ನಾಗರಾಜ್, ಸಂತೋಷ್, ಶಿವು, ರವಿಲಾ ಮತ್ತು ಸ್ಥಳೀಯರು ಸೇರಿಕೊಂಡು ಮೆಲ್ಲನೆ ಆಕಳನ್ನು ಮೇಲಕ್ಕೆ ಎತ್ತಿದ್ದಾರೆ.

ಮೇಲಕ್ಕೆ ಬರುತ್ತಿದ್ದಂತೆಯೇ ಆಕಳಿಗೆ ಕಟ್ಟಿದ್ದ ಹಗ್ಗವನ್ನು ಬಿಡಿಸಿದ್ದು ತಕ್ಷಣ ಆಕಳು ಓಡುತ್ತಾ ಕಣ್ಮರೆಯಾಗಿದೆ. ಆಕಳ ವಾರಸುದಾರರಾದ ಶಿವರಾಮ್ ಇವರು ತಮ್ಮ ಕೊಟ್ಟಿಗೆಗೆ ತಲುಪಿದ ಬಗ್ಗೆ ಮಾಹಿತಿ ನಿಡಿದ್ದಾರೆ.

ಸ್ವಯಂಸೇವಕರ ಈ ರಕ್ಷಣಾ ಕಾರ್ಯ ಮೆಚ್ಚುಗೆಗೆ ಪಾತ್ರವಾಗಿದೆ. ಸ್ಥಳೀಯರು ಸ್ವಯಂಸೇವಕರ ಸೇವೆಗೆ ಪ್ರಶಂಶೆ ವ್ಯಕ್ತಪಡಿಸಿದ್ದಾರೆ.

*************

## ೧೫. ಬಾವಿಯಲ್ಲಿ ಮಹಿಳೆಯ ಶವ ಪತ್ತೆ;
## ಮೃತ ದೇಹವನ್ನು ಮೇಲಕ್ಕೆತ್ತಿದ ಶೌರ್ಯ ತುರ್ತು ಸ್ಪಂದನಾ ತಂಡ



ಬೆಳ್ತಂಗಡಿ, ನವೆಂಬರ್ 03, 2023: ಬೆಳಾಲು ಗ್ರಾಮದ ಮಾಚಾರ್ ನ ಕೆಂಪನೊಟ್ಟು ಎಂಬಲ್ಲಿ ವಿವಾಹಿತ ಮಹಿಳೆಯ ಮೃತ ದೇಹ ಮನೆಯ ಸಮೀಪದ ಬಾವಿಯಲ್ಲಿ ಪತ್ತೆಯಾದ ಘಟನೆ ನವೆಂಬರ್ 1 ರಂದು ನಡೆದಿದ್ದು ಪೋಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಬಳಕ ಉಜಿರೆ ಬೆಳಾಲು ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸ್ವಯಂ ಸೇವಕರಿಗೆ ಮೃತ ದೇಹ ಮೇಲೆತ್ತಲು ಸಹಕಾರ ನೀಡುವಂತೆ ದೂರವಾಣಿ ಕರೆ ಮಾಡಿದ್ದು ಸ್ಪಂದಿಸಿದ ಸ್ವಯಂಸೇವಕರು ಸ್ಥಳಕ್ಕೆ ಧಾವಿಸಿ ಸಹಕಾರ ನೀಡಿರುತ್ತಾರೆ.

ಕೆಂಪನೊಟ್ಟು ಸುಧಾಕರ್ ನಾಯ್ಕರ ಪತ್ನಿ ಶಶಿಕಲಾ(25) ಬಾವಿಯಲ್ಲಿ ಶವವಾಗಿ ಪತ್ತೆಯಾದ ಮಹಿಳೆಯಾಗಿದ್ದು ಧರ್ಮಸ್ಥಳ ಖಐ. ಅನಿಲ್ ಕುಮಾರ್, ಬೆಳ್ತಂಗಡಿ ಸರ್ಕಲ್ ಇನ್ಸೆಕ್ಟರ್ ನಾಗೇಶ್ ಕದ್ರಿ, ಬಂಟ್ವಾಳ ಆಥಿಖಾಥೋರಟ್, ಮಂಗಳೂರಿನಿಂದ ಅರುಣ್ ರವರ ನೇತೃತ್ವದಲ್ಲಿ ವಿಧಿ ವಿಜ್ಞಾನ ತಂಡ ಮತ್ತು ಪೋಲೀಸರ ತಂಡ ಸ್ಥಳದಲ್ಲಿದ್ದರು.

ಪೊಲೀಸ್ ಅಧಿಕಾರಿಗಳ ಸಲಹೆಯಂತೆ ಶೌರ್ಯ ವಿಪತ್ತು ನಿರ್ವಹಣಾ ಘಟಕ ಉಜಿರೆ-ಬೆಳಾಲು ಘಟಕದ ಸ್ವಯಂಸೇವಕರು ಆಳವಾದ ನೀರಿರುವ ಬಾವಿಯಿಂದ ಮೃತದೇಹವನ್ನು ಮೇಲಕ್ಕೆ ಎತ್ತುವ ಯಶಸ್ವೀ ಕಾರ್ಯಾಚರಣೆ ನಡೆಸಿದರು.

ಕಾರ್ಯಾಚರಣೆಯಲ್ಲಿ ಶೌರ್ಯ ತುರ್ತು ಸ್ಪಂದನಾ ತಂಡದ ಬೆಳಾಲು ಘಟಕದ ಮುಳುಗು ತಜ್ಞ ಹರೀಶ ಕೂಡಿಗೆ, ಸಂಜೀವ ಕೋಲ್ವಾಡಿ, ಸಂತೋಷ ಮಾಚಾರ್, ಸುಲೈಮಾನ್ ಬೆಳಾಲು, ಸಂತೋಷ ಕನೆಕ್ಕಿಲ, ಜಗದೀಶ್ ಪಲ್ಲಿದಡ್ಕ, ಶಶಿಧರ ಶಾಂತಿನಗರ ಹಾಗೂ ಉಜಿರೆ ಘಟಕದ ರವೀಂದ್ರ ಉಜಿರೆ, ವೇಣೂರ್ ಘಟಕದ ರಾಘವೇಂದ್ರ ರವರು ಪಾಲ್ಗೊಂಡಿದ್ದರು.



ನೆರೆದಿದ್ದ ಸಾರ್ವಜನಿಕರು ಮತ್ತು ಪೊಲೀಸರು, ಬೆಳಗ್ಗಿನಿಂದ ಸಂಜೆ ತನಕ ಹಾಜರಿದ್ದು ಮೃತದೇಹವನ್ನು ಬಾವಿಯಿಂದ ಮೇಲಕ್ಕೆ ಎತ್ತಿ, ಬಳಿಕ ಮಹಜರು ಮುಗಿದ ಮೇಲೆ ಆಂಬುಲೆನ್ಸ್ ಗೆ ರವಾನಿಸಿಕೊಟ್ಟ ಶೌರ್ಯ ಸ್ವಯಂ ಸೇವಕರ ಬಗ್ಗೆ ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದರು.

ಧರ್ಮಸ್ಥಳ ಸಬ್ ಇನ್ಸ್ಪೆಕ್ಟರ್ ಅನಿಲ್ ಕುಮಾರ್ ರವರು ಬೆಳಾಲು ಶೌರ್ಯ ತಂಡದವರ ಬಗ್ಗೆ ಬೆಳ್ತಂಗಡಿ ಸರ್ಕಲ್ ಇನ್ಸ್ಪೆಕ್ಟರ್ ನಾಗೇಶ್ ಕದ್ರಿ ಜೊತೆ ಬಹಳ ಕೊಂಡಾಡಿದರು.

***********

## 16. ನದಿಯಲ್ಲಿ ಮುಳುಗಿ ಮೃತಪಟ್ಟ ವ್ಯಕ್ತಿಯ ಶೋಧ ಕಾರ್ಯ
## ಶೌರ್ಯ ತುರ್ತು ಸ್ಪಂದನಾ ಸ್ವಯಂಸೇವಕರಿಂದ ಕಾರ್ಯಾಚರಣೆ




ಬೆಳ್ತಂಗಡಿ ತಾಲ್ಲೂಕಿನ ಕಲ್ಲೇರಿ ಸಮೀಪದ ಕಕ್ಕೆಪದವು ಕುಂಡಡ್ಕ ಪ್ರದೇಶದಲ್ಲಿ ದಿನಾಂಕ 19/20/2022 ರಂದು ಸಂಜೆ ಭಾರೀ ಮಳೆಯ ಸಮಯದಲ್ಲಿ ಅಬ್ದುಲ್ ರಹಿಮಾನ್ ಎಂಬುವವರು ವೇಗವಾಗಿ ತೋಡಿನಲ್ಲಿ ಹರಿಯುತ್ತಿರುವ ನೀರಿನಲ್ಲಿ ಆಕಸ್ಮಿಕವಾಗಿ ಬಿದ್ದು ಕೊಚ್ಚಿಕೊಂಡು ಹೋಗಿರುವ ಘಟನೆ ನಡೆದಿದೆ. ನೀರಿನಲ್ಲಿ ನಾಪತ್ತೆಯಾದ ವ್ಯಕ್ತಿಯ ಮೃತದೇಹ ತಡ ರಾತ್ರಿವರೆಗೂ ಸಿಗದೇ ಇರುವುದರಿಂದ ಸ್ಥಳೀಯರು ಈ ಕುರಿತು ಬೆಳಾಲು ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸದಸ್ಯ ಸುಲೈಮಾನ್ ರವರಿಗೆ ಮಾಹಿತಿ ನೀಡಿದ್ದರು.

ತಕ್ಷಣ ಸ್ಪಂದಿಸಿದ ಇವರು ವಿಪತ್ತು ನಿರ್ವಹಣಾ ತುರ್ತು ಸ್ಪಂದನಾ ಘಟಕದ ಸ್ವಯಂಸೇವಕರಿಗೆ ಮಾಹಿತಿ ನೀಡಿದ್ದು ದಿನಾಂಕ 20/10/2022 ರಂದು ಬೆಳಗ್ಗೆ ಮುಳುಗು ತಜ್ಞ ಹರೀಶ ಕೂಡಿಗೆಯವರ ನೇತೃತ್ವದಲ್ಲಿ ಪತ್ತೆ ಕಾರ್ಯಾಚರಣೆ ನಡೆಯಿತು. ವ್ಯಕ್ತಿಯು ನಾಪತ್ತೆಯಾದ ಸ್ಥಳದಿಂದ ಶೋಧ ಕಾರ್ಯ ಪ್ರಾರಂಭ ಮಾಡಿದ್ದು, ಮೃತದೇಹ 4 ಕಿಲೋಮೀಟರ್ ದೂರದಲ್ಲಿ ಪತ್ತೆಯಾಗಿದೆ. ಸ್ಥಳೀಯರು ಮೃತದೇಹ ಗುರುತಿಸಿದ್ದು ನದಿಯ ದಡಕ್ಕೆ ಮೃತದೇಹ ತಲುಪಿಸಿದ್ದರು. ಇಕ್ಕಟ್ಟಾದ ಸ್ಥಳದಿಂದ ಶೌರ್ಯ ಸ್ವಯಂಸೇವಕರು ಮೃತದೇಹವನ್ನು ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿರುವ ಮುಖ್ಯ ರಸ್ತೆಗೆ ತಲುಪಿಸಿ ಪೊಲೀಸರಿಗೆ ಒಪ್ಪಿಸಿರುತ್ತಾರೆ.

ಪುಂಜಾಲಕಟ್ಟೆ ಪೊಲೀಸರು ವಿಪತ್ತು ನಿರ್ವಹಣಾ ಸ್ವಯಂಸೇವಕರ ಸೇವೆಗೆ ಶ್ಲಾಘನೆ ವ್ಯಕ್ತಪಡಿಸಿರುತ್ತಾರೆ. ಸ್ವಯಂಸೇವಕರಾದ ಸುಲೈಮಾನ್ ಬೆಳಾಲು, ಸಂಜೀವ ಕೋಲ್ಪಾಡಿ, ಯಶೋಧರ ಮಂಡಾಲು, ಮಹಮ್ಮದ್ ಶರೀಫ್, ಪ್ರದೀಪ್ ಮೈರಾಜೆ, ಲೋಕೇಶ್, ಉಜಿರೆ ಘಟಕದ ರವೀಂದ್ರ, ಸುಧೀರ್, ನಡ ಕನ್ಯಾಡಿ ಘಟಕದ ಜಯರಾಮ್ ಶೋಧ ಕಾರ್ಯಾಚರಣೆ ನಡೆಸಿದರು.

************

## 17. ಬಸ್ ನಡುವೆ ಅಪಘಾತ; ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲು ನೆರವಾದ ಶೌರ್ಯ ಸ್ವಯಂಸೇವಕರು...




ಬೆಳ್ತಂಗಡಿ, ಡಿಸೆಂಬರ್ 27 ರ ಮಧ್ಯಾಹ್ನ 11.30 ರ ವೇಳೆಗೆ ನಿಡ್ಲೆ ಸಮೀಪದ ಬೂಡಜಾಲುವಿನಲ್ಲಿ ಸಿಂಧನೂರು ತಾಲ್ಲೂಕಿನಿಂದ ಶೈಕ್ಷಣಿಕ ಪ್ರವಾಸಕ್ಕೆ ಬಂದ ಪಿ.ಯು ಕಾಲೇಜು ವಿದ್ಯಾರ್ಥಿಗಳ ಬಸ್ ಮತ್ತು ಕೆ.ಎಸ್.ಆರ್.ಟಿ.ಸಿ ಬಸ್ ಮಧ್ಯೆ ಮುಖಾಮುಖಿ ಅಪಘಾತ ಸಂಭವಿಸಿದ್ದು ಎರಡೂ ಬಸ್ ಚಾಲಕರು ಗಂಭೀರವಾಗಿ ಗಾಯಗೊಂಡಿದ್ದು ಸುಮಾರು 30 ವಿದ್ಯಾರ್ಥಿಗಳಿಗೆ ಸಣ್ಣ ಪುಟ್ಟ ಗಾಯಗಳಾಗಿತ್ತು. ರಸ್ತೆ ಅಪಘಾತದ ಸ್ಥಳದಲ್ಲಿ ಶೌರ್ಯ ವಿಪತ್ತು ನಿರ್ವಹಣಾ ಸ್ವಯಂಸೇವಕರ ಮನೆಗಳು ಇದ್ದುದರಿಂದ ತಕ್ಷಣ ಸ್ಥಳಕ್ಕೆ ಧಾವಿಸಿದ ಸ್ವಯಂಸೇವಕರು ಗಾಯಗೊಂಡು ಅರೆಪ್ರಜ್ಞಾವಸ್ಥೆಯಲ್ಲಿದ್ದ ಎರಡೂ ವಾಹನ ಚಾಲಕರನ್ನು ತಮ್ಮ ಸ್ವಂತ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ದಾಖಲಿಸಿ ರಕ್ಷಣೆ ಮಾಡಿರುತ್ತಾರೆ. ಸ್ವಯಂಸೇವಕರಾದ ಮನೋಹರ್ ಇವರು ತಮ್ಮ ಸ್ವಂತ ಬಳಕೆಯ ಸ್ವಿಫ್ಟ್ ಕಾರ್ ನಲ್ಲಿ ಕಾಲು ತುಂಡರಿಸಿ ರಕ್ತದ ಮಡುವಿನಲ್ಲಿದ್ದ ಗಾಯಾಳುವನ್ನು ನೆಲ್ಯಾಡಿಯ ಅಶ್ವಿನಿ ಕ್ಲಿನಿಕ್ ಗೆ ಸಾಗಿಸಿ ಮಾನವೀಯತೆ ಮೆರೆದಿದ್ದಾರೆ. ಗಾಯಾಳುವಿನ ಸ್ಥಿತಿ ಗಂಭೀರವಾಗಿರುವುದರಿಂದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿಗೆ ವರ್ಗಾಯಿಸಲಾಗಿದೆ. ಅಪಘಾತವಾದ ಬಸ್ ನಲ್ಲಿ ಸುಮಾರು ನಲವತ್ತೈದಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದು ಹಲವರಿಗೆ ಸಣ್ಣ ಪುಟ್ಟ ಗಾಯವಾದ ಹಿನ್ನೆಲೆಯಲ್ಲಿ ತುರ್ತಾಗಿ ನಾಲ್ಕರಿಂದ ಐದು ಆಂಬುಲೆನ್ಸ್ ಗಳನ್ನು ಕರೆಯಿಸಿ ವಿದ್ಯಾರ್ಥಿಗಳನ್ನು ಉಜಿರೆಯ ಎಸ್.ಡಿ.ಎಮ್ ಆಸ್ಪತ್ರೆಗೆ ತುರ್ತಾಗಿ ಕಳುಹಿಸಲು ವ್ಯವಸ್ಥೆ ಮಾಡಿರುತ್ತಾರೆ. ನಿಡ್ಲೆ ಧರ್ಮಸ್ಥಳ ಘಟಕದ ಸಂಯೋಜಕರಾದ ಕೊರಗಪ್ಪ, ಘಟಕ ಪ್ರತಿನಿಧಿ ಗಿರೀಶ್, ಬೆಳ್ತಂಗಡಿ ಸಮಿತಿಯ ಮಾಸ್ಟರ್ ಸ್ನೇಕ್ ಪ್ರಕಾಶ್, ನಳಿನ್ ಕುಮಾರ್ ಬೇಕಲ್ ಮತ್ತು ಸ್ವಯಂಸೇವಕರು ಉಪಸ್ಥಿತರಿದ್ದರು.

### ವಾಸ್ತವ್ಯ ಹಾಗೂ ಊಟದ ವ್ಯವಸ್ಥೆ ಮಾಡಿದ ಸ್ವಯಂಸೇವಕರು



ಬೆಳ್ತಂಗಡಿ, ಡಿಸೆಂಬರ್ 27: ನಿಡ್ಲೆ ಸಮೀಪದ ಬೂಡಜಾಲುವಿನಲ್ಲಿ ಸಿಂಧನೂರು ತಾಲ್ಲೂಕಿನಿಂದ ಶೈಕ್ಷಣಿಕ ಪ್ರವಾಸಕ್ಕೆ ಬಂದ ಪಿ.ಯು ಕಾಲೇಜು ವಿದ್ಯಾರ್ಥಿಗಳ ಬಸ್ ಮತ್ತು ಕೆ.ಎಸ್.ಆರ್.ಟಿ.ಸಿ ಬಸ್ ಮಧ್ಯೆ ಮುಖಾಮುಖಿ ಅಪಘಾತ ಸಂಭವಿಸಿದ್ದು ಕೆಲವು ವಿದ್ಯಾರ್ಥಿಗಳು ಗಾಯಗೊಂಡಿದ್ದು ಚಿಕಿತ್ಸೆಗಾಗಿ

ಆಸ್ಪತ್ರೆಗೆ ದಾಖಲಾಗಿದ್ದರಿಂದ ಉಳಿದ ವಿದ್ಯಾರ್ಥಿಗಳಿಗೆ ವಿರಮಿಸಲು ಸ್ಥಳದ ಸಮಸ್ಯೆಯಾಗಿರುವುದನ್ನು ಗಮನಿಸಿದ ವಿಪತ್ತು ನಿರ್ವಹಣಾ ಘಟಕ ಉಜಿರೆಯ ಸ್ವಯಂಸೇವಕರು ಉಜಿರೆಯ ಶಾರದಾ ಮಂಟಪದಲ್ಲಿ ತಂಗುವ ವ್ಯವಸ್ಥೆ ಮಾಡಿರುತ್ತಾರೆ. ಅಲ್ಲದೇ ರಾತ್ರಿಯ ಊಟದ ವ್ಯವಸ್ಥೆಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳದ ಅನ್ನಛತ್ರದಿಂದ ತಂದು ನೀಡಿರುತ್ತಾರೆ. ಸುಮಾರು 140 ವಿದ್ಯಾರ್ಥಿಗಳು, ಶಿಕ್ಷಕರು ಸೇರಿ ಸುಮಾರು 160 ಮಂದಿಗೆ ಸಹಕಾರ ನೀಡಿರುತ್ತಾರೆ.

************

## 18. ಬಿಸಿಲ ಝಳ: ಪ್ರಾಣಿ ಪಕ್ಷಿಗಳ ಬಾಯಾರಿಕೆ ನೀಗಿಸಲು ಮುಂದಾದ ಶೌರ್ಯ ಸ್ವಯಂಸೇವಕರು



ಬಿಸಿಲಿನ ಧಗೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಬಿಸಿಲಲ್ಲಿ ಸ್ವಲ್ಪ ಓಡಾಡಿದರೂ ದಾಹವಾಗಿ ನೀರು ಕುಡಿಯೋಣ ಎನಿಸುತ್ತದೆ. ಮನುಷ್ಯರಾದ ನಮಗೆ ಈ ರೀತಿಯಾದರೆ ಮೂಕ ಪ್ರಾಣಿಗಳ ಕಥೆಯೇನು? ಪಕ್ಷಿಗಳ ವ್ಯಥೆಯೇನು? ಇಂತಹದೊಂದು ಪ್ರಶ್ನೆ ಪ್ರತಿಯೊಬ್ಬರಲ್ಲಿಯೂ ಕಾಡದೇ ಇರದು.

ಬತ್ತಿದ ಕೆರೆಯಲ್ಲಿ ಇರುವ ಅಲ್ಪಸ್ವಲ್ಪ ಗಲೀಜು ನೀರನ್ನೇ ಬಾಯಾರಿಕೆಗೆ ಕುಡಿಯುತ್ತಿರುವ ಹಸುಗಳು, ನಲ್ಲಿಗೆ ಜೋತುಬಿದ್ದು ನೀರು ಹನಿಸಬಹುದೆಂದು ಕಾಯುವ ಪಕ್ಷಿಗಳು, ಮನೆಯ ತಾರಸಿಯ ಮೇಲಿನ ನೀರಿನ ಟ್ಯಾಂಕ್ ಮುಚ್ಚಳ ತೆಗೆದು ನೀರು ಕುಡಿಯಲು ಸಾಹಸ ಮಾಡುವ ಮಂಗಗಳು ಹೀಗೆ ಸಾಮಾನ್ಯವೆಂಬತೇ ಹನಿ ಗುಟುಕಿಗಾಗಿ ಪರಿತಪಿಸುವ ಪಕ್ಷಿ, ಪ್ರಾಣಿಗಳು ನಮ್ಮ ಪರಿಸರದಲ್ಲಿ ಕಂಡುಬರತೊಡಗಿವೆ.

### ಮಾತೃಶ್ರೀ ಅಮ್ಮನವರ ಪರಿಕಲ್ಪನೆ:

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಕಾರ್ಯಕ್ರಮದ ಅಧ್ಯಕ್ಷರಾದ ಮಾತೃಶ್ರೀ ಹೇಮಾವತಿ ವೀ. ಹೆಗ್ಗಡೆ ಯವರ ಆಶಯದಂತೆ 'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಕಳೆದ ಹಲವಾರು ವರ್ಷಗಳಿಂದ ಕುಡಿಯುವ ನೀರು ಪ್ರಾಣಿ ಪಕ್ಷಿಗಳಿಗೆ ಒದಗಿಸುವ ಕೆಲಸ ಮಾಡುತ್ತಿದ್ದಾರೆ. ಈ ವರ್ಷವೂ ಬಿಸಿಲ ಝಳ ಅತಿಯಾದ ಹಿನ್ನಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡತೊಡಗಿದ್ದು ಮಾನವೀಯತೆ ಮೆರೆಯುತ್ತಿದ್ದಾರೆ.

### ಎಲ್ಲೆಲ್ಲಿ ನೀರು?

ತಮ್ಮ ಮನೆಯ ಚಾವಣಿಯ ಮೇಲೆ, ತಾರಸಿಯ ಮೇಲ್ಗಡೆ, ಅಂಗಡಿಗಳ ಮುಂದೆ ನೀರಿನ ಚಿಕ್ಕ ಚಿಕ್ಕ ನೀರಿನ ತೊಟ್ಟಿಗಳನ್ನು ಅಥವಾ ತಟ್ಟೆಗಳನ್ನು ಇಟ್ಟು ದಿನನಿತ್ಯ ನೀರು ತುಂಬಿಸುತ್ತಿದ್ದಾರೆ. ಮರದಲ್ಲಿ ನೀರಿನ ಬಾಟಲಗಳನ್ನು ಕಟ್ಟಿ ಮೂಕಪ್ರಾಣಿ ಮತ್ತು ಪಕ್ಷಿಗಳ ದಾಹ ತೀರಿಸುವ ಕಾರ್ಯಗಳನ್ನು ಮಾಡುತ್ತಿದ್ದಾರೆ. ತಮ್ಮ ಮನೆಯ ಮುಂದೆ ನೀರಿನ ತೊಟ್ಟಿಯಿಟ್ಟು ಅದಕ್ಕೆ ನೀರು ಹಾಕುವುದರ ಮೂಲಕ ಬೀದಿ ನಾಯಿ ಮತ್ತು ಬಿಡಾಡಿ ದನಗಳ ದಾಹತಣಿಸುವ ಕಾರ್ಯದಲ್ಲಿ ಸ್ವಯಂಸೇವಕರು ನಿರತರಾಗಿದ್ದಾರೆ.

ಪ್ರಾಣಿಗಳಿಗಾಗಿಯೇ ಪ್ರತ್ಯೇಕ ನೀರಿನ ತೊಟ್ಟಿ ತಂದಿರಿಸಿ ಅದರಲ್ಲಿ ಸದಾ ನೀರು ಸಂಗ್ರಹವಾಗಿರುವಂತೆ ನೋಡಿಕೊಂಡು ಮೂಕ ಪ್ರಾಣಿಗಳ ದಾಹ ತಣಿಸುವುದು ಸುಲಭದ ಕೆಲಸವಲ್ಲ. ಇಂತಹ ಕಾರ್ಯವನ್ನು ಶೌರ್ಯ ಸ್ವಯಂಸೇವಕರು ಮಾಡುತ್ತಿದ್ದಾರೆ.



### ೩ ವರ್ಷಗಳಿಂದ ನಡೆಯುತ್ತಿದೆ:

ಚಿಕ್ಕೋಡಿ, ನಿಪ್ಪಾಣಿ, ರಾಮದುರ್ಗ, ಗೋಕಾಕ್, ಹುಕ್ಕೇರಿ ತಾಲ್ಲೂಕುಗಳ ಶೌರ್ಯ ಘಟಕಗಳ ಸ್ವಯಂಸೇವಕರು ಕುಡಿಯುವ ನೀರು ಇಡುವ ಕೆಲಸವನ್ನು ಕಳೆದ ಮೂರು ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ. ಈ ವರ್ಷವೂ ಮಾರ್ಚ್ ಮೊದಲ ವಾರದಿಂದಲೇ ತಯಾರಿ ಆರಂಭಿಸಿ, ಸ್ಥಳ ಗುರುತಿಸಿ ನೀರು ಇಡುವ ಕೆಲಸ ಆರಂಭಿಸಿದ್ದಾರೆ. ಮಳೆ ಹನಿಸುವ ವರೆಗೆ ಈ ಕಾರ್ಯ ಮುಂದುವರೆಸುವುದಾಗಿ ಸ್ವಯಂಸೇವಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

### ನಲ್ಲಿ ಸೋರದಂತೆ ಜಾಗೃತೆ:

ಹಳ್ಳಿಗಳಲ್ಲಿ ರಸ್ತೆ ಬದಿಯಲ್ಲಿ, ಮನೆಯಲ್ಲಿ ನಲ್ಲಿಗಳು ಸೋರುವುದು ಸಾಮಾನ್ಯ. ಇದರಿಂದ ಸಾಕಷ್ಟು ನೀರು ಪೋಲಾಗುತ್ತದೆ. ಇವುಗಳ ಕಡೆಗೆ ಗಮನ ವಹಿಸಿದ ಸ್ವಯಂಸೇವಕರು ಸೋರುವ ನಲ್ಲಿಗಳನ್ನು ಗುರುತಿಸಿ ಸರಿಪಡಿಸುವ ಕೆಲಸಮಾಡುತ್ತಿದ್ದಾರೆ. ಮನೆ ಮನೆಗೆ ತೆರಳಿ ನಲ್ಲಿಗಳಲ್ಲಿ ನೀರು ಸೋರದಂತೆ ಕ್ರಮ ತೆಗೆದುಕೊಳ್ಳಲು ಜನರಿಗೆ ಅರಿವು ಮೂಡಿಸುತ್ತಿದ್ದಾರೆ.

ರಣಬಿಸಿಲಿನ ಕಾಲವಾಗಿರುವುದರಿಂದ ಪ್ರಾಣಿ, ಪಕ್ಷಿಗಳು ನೀರಿಗಾಗಿ ಹಾತೊರೆಯುತ್ತವೆ. ಒಂದು ಪುಟ್ಟ ಬಟ್ಟಲಲ್ಲಿ ನೀರಿಟ್ಟರೂ ಸಾಕು ಅವುಗಳು ನೀರು ಕುಡಿಯಲು ದುಂಬಾಲು ಬೀಳುತ್ತವೆ. ಪ್ರಾಣಿ ಪಕ್ಷಿಗಳ ದಾಹತಣಿಸಲು ಶೌರ್ಯ ಸ್ವಯಂಸೇವಕರು ನೀಡುತ್ತಿರುವ ಸೇವೆ ಮಾದರಿಯೇ ಸರಿ.

***********

## ೧೯. ಬೆಂಕಿ ಅನಾಹುತ, 'ಶೌರ್ಯ' ಸ್ವಯಂಸೇವಕರ ಸಮಯಪ್ರಜ್ಞೆಯಿಂದ ತಪ್ಪಿದ ದುರಂತ.



ನಿಪ್ಪಾಣಿ ತಾಲೂಕಿನ ಯರನಾಳ ಗ್ರಾಮದಲ್ಲಿ ಕೃಷಿ ಭೂಮಿಗೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿದ್ದು ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ತಂಡದ ಸ್ವಯಂಸೇವಕರ ಸಕಾಲದ ಸ್ಪಂದನೆಯಿಂದ ಸುಮಾರು ೫೦ ಎಕರೆ ಜೋಳ, ತರಕಾರಿ, ಹೂವಿನ ಬೆಳೆ ಉಳಿದಿದೆ.

**ಬಿರು ಬಿಸಿಲಿನಲ್ಲಿ ಹೊತ್ತಿಕೊಂಡ ಬೆಂಕಿ:**

ದಿನಾಂಕ: 23.03.2025 ರ ಮಧ್ಯಾಹ್ನ ಕೃಷಿ ಭೂಮಿಯ ಬದಿಯಲ್ಲಿರುವ ಬಯಲು ಪ್ರದೇಶದಲ್ಲಿ ಒಣಗಿಕೊಂಡಿದ್ದು ಹರಡಿರುವ ಹುಲ್ಲಿಗೆ ಬೆಂಕಿ ತಗುಲಿದೆ. ಬಿರು ಬಿಸಿಲು, ಅಲ್ಲದೇ ಗಾಳಿ ಇರುವುದರಿಂದ ಸಣ್ಣದಾಗಿ ಕಾಣಿಸಿದ ಬೆಂಕಿಜ್ವಾಲೆಯಾಗಿ ಹರಡತೊಡಗಿದ್ದವು. ಇದನ್ನು ದೂರದಿಂದಲೇ ಗಮನಿಸಿದ ವಿಪತ್ತು ನಿರ್ವಹಣಾ ತಂಡದ ಸ್ವಯಂಸೇವಕ ಯಶವಂತ್ ಕಾಂಬಳೆ ತಕ್ಷಣ ಸ್ಥಳಕ್ಕೆ ಧಾವಿಸಿದ್ದಾರೆ.

**ಅಗ್ನಿಶಾಮಕ ದಳಕ್ಕೆ ವಿಷಯ ತಿಳಿಸಿದ ಸ್ವಯಂಸೇವಕರು:**

ಸ್ಥಳೀಯವಾಗಿ ಯಾರೂ ಇಲ್ಲದೇ ಇದ್ದು ಬೆಂಕಿ ತಕ್ಷಣ ಹತ್ತಿರದಲ್ಲಿಯೇ ಇರುವ ಕೃಷಿ ಬೆಳೆಗೆ ವ್ಯಾಪಿಸುವ ಅಪಾಯ ಇರುವುದರಿಂದ ಘಟಕದ ಪ್ರತಿನಿಧಿ ಬಾಬಾಸು ಪವಾರ್ ಇವರಿಗೆ ಕರೆ ಮಾಡಿ ತಿಳಿಸಿದ್ದಾರೆ. ಕೂಡಲೇ ಅಗ್ನಿಶಾಮಕ ದಳಕ್ಕೆ ಕರೆ ಮಾಡಿ ವಲಯದ ಮೇಲ್ವಿಚಾರಕರಾದ ರಾಮದಾಸ್ ಗೌಡ ಇವರು ಅಗ್ನಿಶಾಮಕ ಅಧಿಕಾರಿಗಳನ್ನು ಸ್ಥಳಕ್ಕೆ ಕರೆದು ತಂದಿದ್ದಾರೆ.

**ಎರಡು ಗಂಟೆಗಳ ಕಾಲ ಕಾರ್ಯಾಚರಣೆ:**

ಅಗ್ನಿಶಾಮಕ ವಾಹನ ಬರುವ ಮೊದಲೇ ಸ್ಥಳದಲ್ಲಿ ಸೇರಿದ ಸ್ವಯಂಸೇವಕರು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿಕೊಂಡು ಬೆಂಕಿ ನಂದಿಸಲು ತೊಡಗಿದ್ದರು. ಸ್ಥಳೀಯರು ಮಾಹಿತಿ ಇಲ್ಲದೇ ಇರುವ ಕಾರಣಕ್ಕೆ ಬಂದಿರದೇ ಇರುವುದರಿಂದ 7 ಮಂದಿ ಸ್ವಯಂಸೇವಕರು ಬೆಂಕಿ ನಂದಿಸಲು ಹರಸಾಹಸ ಪಟ್ಟಿದ್ದಾರೆ.

**ವಲಯ ಮೇಲ್ವಿಚಾರಕರ ಸಮಯಪ್ರಜ್ಞೆ:**

ಸ್ವಯಂಸೇವಕರಿಂದ ದೂರವಾಣಿ ಕರೆ ಬರುತ್ತಿದ್ದಂತೆಯೇ ನಿಪ್ಪಾಣಿ ಪಟ್ಟಣದಲ್ಲಿಯೇ ಇದ್ದ ವಲಯದ ಮೇಲ್ವಿಚಾರಕರಾದ ರಾಮದಾಸ್ ಗೌಡ ಇವರು ಅಗ್ನಿಶಾಮಕ ದಳಕ್ಕೆ ದೂರವಾಣಿ ಕರೆ ಮಾಡಿ ತುರ್ತಾಗಿ ಅಗ್ನಿಶಾಮಕ ವಾಹನ ಕೃಷಿ ಭೂಮಿಗೆ ತೆರಳಲು ಇರುವ ಸುಲಭದ ಮತ್ತು ಸಮೀಪದ ರಸ್ತೆಯ ಮೂಲಕ ಕರೆದುಕೊಂಡು ಹೋಗಿದ್ದು ಅಗ್ನಿಶಾಮಕ ದಳ ಕನಿಷ್ಠ ಅವಧಿಯಲ್ಲಿ ಸ್ಥಳಕ್ಕೆ ತಲುಪಲು ಸಹಾಯಕವಾಗಿದೆ.

**ಸತತವಾಗಿ 2 ಗಂಟೆ ನಡೆದ ಕಾರ್ಯಾಚರಣೆ:**

ಕೃಷಿ ಬೆಳೆಗೆ ಬೆಂಕಿ ತಗಲುವ ಸಾಧ್ಯತೆ ಇರುವುದರಿಂದ ತಕ್ಷಣ ಬೆಂಕಿ ನಂದಿಸುವ ಅನಿವಾರ್ಯತೆ ಇತ್ತು. ಶೀಘ್ರ ವ್ಯಾಪಿಸುತ್ತಿರುವ ಬೆಂಕಿಯನ್ನು ನಂದಿಸತೊಡಗಿದ ಅಗ್ನಿಶಾಮಕ ದಳ ಹಾಗೂ ಶೌರ್ಯ ಸ್ವಯಂಸೇವಕರು ಸತತವಾಗಿ ಎರಡು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸಲು ಯಶಸ್ವೀಯಾಗಿದ್ದಾರೆ.

**ಮೆಚ್ಚುಗೆಗೆ ಪಾತ್ರವಾದ ತುರ್ತು ಸ್ಪಂದನೆ:**

ಸ್ವಯಂಸೇವಕರ ತಕ್ಷಣದ ಸ್ಪಂದನೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಸಕಾಲದ ಸ್ಪಂದನೆಯಿಂದ ಸುಮಾರು 50 ಎಕರೆ ಪ್ರದೇಶದಲ್ಲಿನ ಜೋಳ, ತರಕಾರಿ, ಹೂವಿನ ಬೆಳೆ ಉಳಿದಿದೆ. ಸ್ವಯಂಸೇವಕರ ಸ್ಪಂದನೆಗೆ ಶ್ಲಾಘನೆ ವ್ಯಕ್ತಪಡಿಸಿದ ಅಗ್ನಿಶಾಮಕ ಇಲಾಖೆ ಸ್ವಯಂಸೇವಕರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಅಲ್ಲದೇ ಬೆಂಕಿ ನಿರ್ವಹಣೆಯ ಬಗ್ಗೆ ವಿಶೇಷ ತರಬೇತಿಯನ್ನು ಸ್ವಯಂಸೇವಕರಿಗೆ ನೀಡುವ ಭರವಸೆಯನ್ನು ನೀಡಿದ್ದಾರೆ.

************

## ೨೦. ಮಹಾಶಿವರಾತ್ರಿ ಪಾದಯಾತ್ರೆಯಲ್ಲಿ ಶೌರ್ಯ ಸ್ವಯಂಸೇವಕರ ಸೇವೆ, ಭಕ್ತರಿಗೆ ಪಾನೀಯ, ಕುಡಿಯುವ ನೀರು, ವಿಶ್ರಾಂತಿ, ಸ್ವಚ್ಚತೆ, ಅನ್ನಸಂತರ್ಪಣೆಗೆ ವ್ಯವಸ್ಥೆ



ಬೆಳ್ತಂಗಡಿ, ಫೆಬ್ರವರಿ, ೨೬,೨೦೨೫: ಶಿವರಾತ್ರಿ ಪ್ರಯುಕ್ತ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ ಪಾದಯಾತ್ರಿಗಳಿಗಾಗಿ ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ತಂಡದ ಸ್ವಯಂಸೇವಕರು ಮೂರು ದಿನಗಳ ಕಾಲ ವಿವಿಧ ಸೇವೆ ಸಲ್ಲಿಸಿ ಶ್ರೀ ಕ್ಷೇತ್ರ ಧರ್ಮಸ್ಥಳದ ಕಡೆಗೆ ಭಕ್ತರ ಭಕ್ತಿಯ ನಡಿಗೆ ಯಶಸ್ವಿಗೊಳ್ಳುವಂತೆ ಮಾಡಿದ್ದಾರೆ.

### ಕುಡಿಯುವ ನೀರಿನ ವ್ಯವಸ್ಥೆ:

ಪಾದಯಾತ್ರಿಗಳು ಸಾಗಿಬರುವ ಚಾರ್ಮಾಡಿ ಘಟ್ಟದ ರಸ್ತೆಯಲ್ಲಿ ಆಯಾಸಗೊಂಡ ಯಾತ್ರಿಕರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಶೌರ್ಯ ಘಟಕದಿಂದ ಮಾಡಲಾಗಿದೆ. ಸಾಮಾನ್ಯವಾಗಿ ಘಟ್ಟದ ಕೆಳಗಿನ ಪ್ರದೇಶದಲ್ಲಿ ಯಾತ್ರಿಕರಿಗೆ ಕುಡಿಯಲು ನೀರು, ಮಜ್ಜಿಗೆ ಮತ್ತಿತರ ಪಾನೀಯಗಳು ಯತೇಚ್ಚವಾಗಿ ಸಿಗುತ್ತದೆ. ಆದರೆ ಘಟ್ಟದ ಪ್ರದೇಶದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ. ಬಿಸಿಲಿನಲ್ಲಿ ನಡೆಯುವ ಯಾತ್ರಿಕರಿಗೆ ಇದರಿಂದ ತೊಂದರೆ ಉಂಟಾಗುತ್ತದೆ. ಇದನ್ನು ಮನಗಂಡ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ (ರಿ) ಇದರ ಅಡಿಯಲ್ಲಿ ರಚಿಸಲಾದ 'ಶೌರ್ಯ' ಘಟಕವು ಯೋಜನೆಯ ಮಾನ್ಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಾದ ಶ್ರೀ ಅನಿಲ್ ಕುಮಾರ್ ಎಸ್.ಎಸ್ ರವರ ನಿರ್ದೇಶನದಂತೆ, ಜನಜಾಗೃತಿ ಪ್ರಾದೇಶಿಕ ನಿರ್ದೇಶಕರಾದ ಶ್ರೀ ವಿವೇಕ್ ವಿ. ಪಾಯ್ಸ್ ರವರ ಮಾರ್ಗದರ್ಶನದಲ್ಲಿ ಚಾರ್ಮಾಡಿ ಘಟ್ಟದಲ್ಲಿ ಮೂರು ಕಡೆಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಘಟ್ಟದ 11 ನೇ ತಿರುವು, ೯ ನೇ ತಿರುವು ಹಾಗೂ 7 ನೇ ತಿರುವಿನಲ್ಲಿ ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡ ಸ್ವಯಂಸೇವಕರು ಶುದ್ಧ ಕುಡಿಯುವ ನೀರಿನ ಜೊತೆಗೆ ಬೆಲ್ಲ, ಮಜ್ಜಿಗೆ ಹಾಗೂ ಪಾನಕದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಮುಂಡಾಜೆಯಿಂದ ಧರ್ಮಸ್ಥಳ ಮಾರ್ಗವಾಗಿ ಸಂಚರಿಸುವ ಭಕ್ತರಿಗೆ ಮುಂಡಾಜೆಯಲ್ಲಿ ಒಂದು ಕೇಂದ್ರ ಆರಂಭಿಸಿ ಕುಡಿಯುವ ನೀರಿನ ವಿತರಣೆ ಮಾಡಲಾಗಿದೆ. ಅಲ್ಲದೇ ಆಯಾಸಗೊಂಡು ಬಂದ ಯಾತ್ರಿಕರಿಗೆ ವಿಶ್ರಾಂತಿ ಪಡೆಯಲು ಚೇರ್ ಗಳನ್ನು ಇಟ್ಟಿದ್ದು ಯಾತ್ರಿಕರು ಪ್ರಯೋಜನ ಪಡೆದಿರುತ್ತಾರೆ.

## ಅಂದಿನ ಕಸ ಅಂದೇ ಸ್ವಚ್ಚತೆ:



ಕುಡಿಯುವ ನೀರಿನ ವಿತರಣಾ ಸ್ಥಳದಲ್ಲಿ ಸ್ವಚ್ಚತೆಗೆ ಆದ್ಯತೆ ನೀಡಿದ ಸ್ವಯಂಸೇವಕರು ಸಂಜೆಯ ವೇಳೆಗೆ ರಸ್ತೆಯುದ್ದಕ್ಕೂ ಪ್ಲಾಸ್ಟಿಕ್ ವಸ್ತುಗಳು, ನೀರಿನ ಬಾಟಲ್ ಗಳನ್ನು ತೆರವುಗೊಳಸುವ ಕೆಲಸವನ್ನು ಮಾಡಿರುತ್ತಾರೆ. ಕಾಡಿನ ಮಧ್ಯೆ ಅಲ್ಲಲ್ಲಿ ಅಂಗಡಿಗಳನ್ನು ಇಟ್ಟಿರುವ ಸ್ಥಳದಲ್ಲಿ ವಿಪರೀತ ಪ್ಲಾಸ್ಟಿಕ್ ಬಾಟಲ್ ಗಳು, ತಟ್ಟೆಗಳು ಬಿದ್ದಿದ್ದು ಇವುಗಳನ್ನು ತೆರವುಗೊಳಸುವ ಕೆಲಸವನ್ನು ನಿತ್ಯವೂ ಮಾಡಿರುತ್ತಾರೆ. ಮುಂಡಾಜೆ ಪರಶುರಾಮ ದೇವಸ್ಥಾನದ ಸಮೀಪದ ರಸ್ತೆಯಲ್ಲಿ ಸ್ವಚ್ಚತಾ ಶ್ರಮದಾನವನ್ನು ನಡೆಸಿದ್ದು ಅಲ್ಲಿ ರಾತ್ರಿಯ ವೇಳೆ ವಿಶ್ರಾಂತಿ ಪಡೆಯುವ ಭಕ್ತರಿಗೆ ಅನುಕೂಲ ಮಾಡಿಕೊಟ್ಟಂತಾಗಿದೆ.

## ವಾಹನ ಸಂದಣಿ ನಿಯಂತ್ರಣೆ:

ಸಾಮಾನ್ಯವಾಗಿ ಬೆಳಗ್ಗಿನ ಜಾವ ಹಾಗೂ ಸಾಯಂಕಾಲದ ವೇಳೆಗೆ ಭಕ್ತರು ಕಾಲ್ನಡಿಗೆಯಲ್ಲಿ ಬರುವುದು ಜಾಸ್ತಿ. ಬಿಸಿಲಿನ ಪ್ರಖರತೆ ಇಲ್ಲದೇ ಇರುವುದರಿಂದ ಈ ಸಂದರ್ಭದಲ್ಲಿ ಭಕ್ತರು ವೇಗವಾಗಿ ಹೆಜ್ಜೆಹಾಕುತ್ತಾರೆ. ಸಾಮಾನ್ಯವಾಗಿ ಸಂಜೆ ಮತ್ತು ಬೆಳಗ್ಗಿನ ವೇಳೆಗೆ ವಾಹನ ಸಂಚಾರವೂ ಅಧಿಕವಿರುತ್ತದೆ. ಇದನ್ನು ಅರಿತ ಸ್ವಯಂಸೇವಕರು ಚಾರ್ಮಾಡಿ ಘಟ್ಟದಿಂದ ಮುಂಡಾಜೆ ಪರಶುರಾಮ ದೇವಸ್ಥಾನದ ವರೆಗೆ ರಸ್ತೆಯಲ್ಲಿ ವಾಹನ ಸಂಚರಿಸುವಾಗ ಪಾದಯಾತ್ರಿಕರಿಗೆ ಜಾಗೃತೆಯ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಮಾಡಿರುತ್ತಾರೆ. ಮುಂಡಾಜೆಯಲ್ಲಿ ಬ್ಯಾರಿಕೇಡ್ ಅಳವಡಿಸುವ ಮೂಲಕ ವಾಹನ ವೇಗವಾಗಿ ಸಾಗದಂತೆ ನೋಡಿಕೊಂಡು ರಸ್ತೆ ದಾಟುವಾಗ ಭಕ್ತರಿಗೆ ಸಹಕಾರ ನೀಡಿರುತ್ತಾರೆ.

## ಮಾಸ್ಕ್, ಔಷಧಿಗಳ ವಿತರಣೆ:

ಯಾತ್ರಿಕರು ರಸ್ತೆಯಲ್ಲಿ ನಡೆಯುವಾಗ ಧೂಳಿನ ಸಮಸ್ಯೆ ಎದುರಿಸುತ್ತಿದ್ದುದನ್ನು ಗಮನಿಸಿದ ನೆರಿಯ ಘಟಕದ ಸ್ವಯಂಸೇವಕರು ಆರೋಗ್ಯ ಇಲಾಖೆಯಿಂದ ಮಾಸ್ಕ್ ಗಳನ್ನು ತಂದು ಪಾದಯಾತ್ರಿಕರಿಗೆ ಹಂಚುವ ಕೆಲಸ ಮಾಡಿರುತ್ತಾರೆ. ಪಾದದ ಉರಿ, ನೋವು ಎಂದು ಹೇಳುವ ಭಕ್ತರಿಗೆ ಅಗತ್ಯ ಔಷಧಿಗಳನ್ನು ಆರೋಗ್ಯ ಇಲಾಖೆಯಿಂದ ಕೊಡಿಸಿದ್ದಾರೆ. ಮುಂಡಾಜೆಯ ಪರಶುರಾಮ ದೇವಸ್ಥಾನದ ಆವರಣದಲ್ಲಿ ಭಕ್ತಾದಿಗಳು ವಿಶ್ರಾಂತಿ ಪಡೆಯುತ್ತಿದ್ದು ಅಲ್ಲಿಗೆ ಧಾವಿಸಿ ಸ್ಥಳದಲ್ಲಿಯೇ ಭಕ್ತರಿಗೆ ಕುಡಿಯುವ ನೀರು, ಪಾನಕ ವಿತರಣೆಯ ಕೆಲಸ ಮಾಡಿದ್ದಾರೆ.

## ಅನ್ನಸಂತರ್ಪಣೆಗೆ ಸಹಕಾರ:

ಚಾರ್ಮಾಡಿಯ ಮತ್ತೂರು ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ದೇವಾಲಯದ ವತಿಯಿಂದ ಭಕ್ತರಿಗೆ ಅನ್ನಸಂತರ್ಪಣೆಯ ವ್ಯವಸ್ಥೆ ಇದ್ದು ಅಲ್ಲಿ ಅಡುಗೆ ತಯಾರಿಗೆ ಶೌರ್ಯ ಸ್ವಯಂಸೇವಕರು ಸಹಕಾರ ನೀಡಿರುತ್ತಾರೆ. ಅನ್ನಸಂತರ್ಪಣೆಗೆ ಸಹಕಾರ ನೀಡಿರುತ್ತಾರೆ. ಊಟ ಮಾಡಿದ ತಟ್ಟೆಗಳನ್ನು ಎಲ್ಲೆಂದರಲ್ಲಿ ಎಸೆಯಯದಂತೆ ಅರಿವು ಮೂಡಿಸುವುದರ ಜೊತೆಗೆ ಸ್ವಚ್ಚತೆಯ ಕೆಲಸಗಳನ್ನು ಮಾಡಿರುತ್ತಾರೆ.



ಪಾದಯಾತ್ರಿಕರಿಗೆ ಯಾವುದೇ ತೊಂದರೆಗಳು ಉಂಟಾಗಬಾರದೆನ್ನುವ ನಿಟ್ಟಿನಲ್ಲಿ ಮೂರು ದಿನಗಳ ಕಾಲ

ಶ್ರಮವಹಿಸಿದ ವಿಪತ್ತು ನಿರ್ವಹಣಾ ಸ್ವಯಂಸೇವಕರ ಸೇವೆ ಭಕ್ತಾದಿಗಳ ಗಮನ ಸೆಳೆದಿದೆ. ಬೆಳ್ತಂಗಡಿ ವಿಪತ್ತು ನಿರ್ವಹಣಾ ಸಮಿತಿಯ ಘಟಕಗಳಾದ ಕುಕ್ಕಾವು ಘಟಕ, ನೆರಿಯ ಎ ಮತ್ತು ನೆರಿಯ ಬಿ. ಘಟಕ, ಧರ್ಮಸ್ಥಳ ಘಟಕ, ನಡ ಕನ್ಯಾಡಿ ಘಟಕ, ಉಜಿರೆ ಎ ಮತ್ತು ಉಜಿರೆ ಬಿ ಘಟಕ, ಇಂದಬೆಟ್ಟು ಘಟಕ, ಅರಿಶಿನಮಕ್ಕಿ ಘಟಕ, ನಿಡ್ಲೆ ಕಳೆಂಜ ಘಟಕ, ಪುದುವೆಟ್ಟು ಘಟಕ ಹೀಗೆ ಬೆಳ್ತಂಗಡಿ ತಾಲ್ಲೂಕಿನ 11 ಘಟಕಗಳ 130 ಸ್ವಯಂಸೇವಕರು ಮೂರು ದಿನಗಳ ಕಾಲ ಸೇವೆ ಸಲ್ಲಿಸಿದ್ದಾರೆ.

***********

## 21. ಅನಾರೋಗ್ಯದ ಕಾರಣದಿಂದ ಒಕ್ಕಲು ಮಾಡದೇ ಪಾಳು ಬಿಡಲು ನಿರ್ಧರಿಸಿದ ಭತ್ತದ ಬೆಳೆಯನ್ನು ಒಕ್ಕಲು ಮಾಡಿ ಧಾನ್ಯದ ರಾಶಿಯನ್ನು ರೈತನಿಗೆ ಒಪ್ಪಿಸಿದ ಸ್ವಯಂಸೇವಕರು.




ಸಕಲೇಶಪುರ, ಜನವರಿ 16: ಅನಾರೋಗ್ಯದಿಂದ ಬಳಲುತ್ತಿದ್ದ ರೈತರೋರ್ವರಿಗೆ ಸೇರಿದ, ಭತ್ತದ ಗದ್ದೆಯಲ್ಲಿಯೇ ಹಾಳಾಗಲು ಬಿಟ್ಟಿದ್ದ ಭತ್ತದ ಬೆಳೆಯನ್ನು ಒಕ್ಕಲು ಮಾಡಿ, ಧಾನ್ಯದ ರಾಶಿಯನ್ನು ಮಾಡಿಟ್ಟು ಕುಟುಂಬದವರಿಗೆ ನೀಡಿ ಮಾನವೀಯತೆ ಮೆರೆದ ಘಟನೆ ಸಕಲೇಶಪುರ ತಾಲ್ಲೂಕು ಬೆಳ್ಳೂರು ವ್ಯಾಪ್ತಿಯಲ್ಲಿ ಬರುವ ಹಾತೂರು ಗ್ರಾಮದಲ್ಲಿ ನಡೆದಿದೆ. ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಹಾತೂರು ಘಟಕದ ಸ್ವಯಂಸೇವಕರು ಈ ಸೇವಾಕಾರ್ಯ ಮಾಡಿದವರು.

### ಅಕಾಲದಲ್ಲಿ ಸುರಿದ ಮಳೆ:

ಸಲಕೇಶಪುರ ತಾಲ್ಲೂಕಿನಲ್ಲಿ ಅಕಾಲಿಕ ಮಳೆ ಸುರಿದು ಅನಾಹುತ ಸೃಷ್ಟಿಯಾಗಿತ್ತು. ರೈತರು ಬೆಳೆದ ಬೆಳೆ ನೆಲಕಚ್ಚಿತ್ತು. ಕೃಷಿ ಭೂಮಿ ನೀರಿನಿಂದ ಆವರಿಸಿ ತೊಂದರೆ ಉಂಟಾಗಿತ್ತು. ಉಮೇಶ್ ಎಚ್.ಇ ಅವರಿಗೆ ಸೇರಿದ ಭತ್ತದ ಬೆಳೆಯೂ ಅಕಾಲಿಕ ಮಳೆಗೆ ತುತ್ತಾಗಿತ್ತು. ಇಪ್ಪತ್ತೆರಡು ದಿನದ ಹಿಂದೆ ಉಮೇಶ್ ಅವರು ಭತ್ತದ ಬೆಳೆಯನ್ನು ಕಟಾವು ಮಾಡಿದ್ದರು. ಅಕಾಲದಲ್ಲಿ ಸುರಿದ ಮಳೆಯಿಂದಾಗಿ ಕೊಯ್ಲು ಮಾಡಿಟ್ಟ ಭತ್ತ ನೀರಿನಿಂದ ನೆನೆದು ಒಕ್ಕಲು ಮಾಡುವಂತಿರಲಿಲ್ಲ. ಬಿಸಿಲಿನಲ್ಲಿ ಹಾಗೆಯೇ ಒಣ ಬಿಟ್ಟು ನಂತರ ತೆಗೆದರಾಯ್ತು ಎಂದು ಸುಮ್ಮನಿದ್ದರು.

**ಕಾಡಿದ ಅನಾರೋಗ್ಯ:** ವಾರದ ಹಿಂದೆ ಉಮೇಶ್ ಅವರಿಗೆ ಆರೋಗ್ಯ ಕೈ ಕೊಟ್ಟಿತ್ತು. ಆಸ್ಪತ್ರೆಗೆ ದಾಖಲಾಗಿದ್ದರು. ಪತ್ನಿ ಸಹ ಅನಾರೋಗ್ಯದ ನಿಮಿತ್ತವಾಗಿ ಮನೆಯಲ್ಲಿ ಇರಲಿಲ್ಲ. ಸಂಬಂಧಿಗಳ ಮನೆಗೆ ತೆರಳಿದ್ದರು. ಇಬ್ಬರು ಮಕ್ಕಳು ಮಾತ್ರ ಮನೆಯನ್ನು ಕಾಯ್ದುಕೊಂಡಿದ್ದರು.ತನ್ನ ಅನಾರೋಗ್ಯದ ಕಾರಣದಿಂದಾಗಿ ಆಸ್ಪತ್ರೆಯಲ್ಲಿ ದಾಖಲಾಗಿರುವ ಉಮೇಶ್ ಗದ್ದೆಯಲ್ಲಿ ಕೊಯ್ದಿಟ್ಟ ಭತ್ತದ ಫಸಲನ್ನು ಆಯ್ದು ಒಕ್ಕಲು ಮಾಡಲು ಸಾಧ್ಯವಾಗದೇ ನಿರಾಶರಾಗಿದ್ದರು.




**ಗದ್ದೆಯಲ್ಲಿಯೇ ಬಿಟ್ಟು ಬಿಡಲು ತೀರ್ಮಾನ:**

ವರ್ಷ ಪೂರ್ತಿ ಊಟದ ಮೂಲವಾಗಿದ್ದ ಭತ್ತ ಹೊಲದಲ್ಲಿಯೇ ಉದುರಿ ಹೋಗುತ್ತದೆ ಎನ್ನುವ ನೋವು ಉಮೇಶ್ ಅವರಲ್ಲಿ ಕಾಡುತ್ತಿತ್ತು. ತನ್ನ ಆರೋಗ್ಯವೇ ಸರಿ ಇಲ್ಲದ ಕಾರಣ ಅವನ್ನು ಏನೂ ಮಾಡುವಂತಿರಲಿಲ್ಲ. ಹತಾಶೆಯಿಂದ ಕಟಾವು ಮಾಡಿದ ಭತ್ತವನ್ನು ಗದ್ದೆಯಲ್ಲಿಯೇ ಬಿಟ್ಟು ಬಿಡುವ ತೀರ್ಮಾನ ಕೈಗೊಂಡಿದ್ದರು. ಗದ್ದೆಯಲ್ಲಿಯೇ ಹಾಸಿದ್ದ, ಕಟಾವು ಮಾಡಿಟ್ಟ ಭತ್ತದ ಫಸಲು ಕಾಡಿನ ಹಂದಿ, ಇಲಿಗಳಿಗೆ ಭರ್ತಿ ಖುಷಿ ನೀಡಿದಂತಿತ್ತು. ಅವುಗಳಿಗೆ ಆಹಾರದ ಮೂಲವಾಗಿ ಭತ್ತದ ಧಾನ್ಯ ಸುಲಭವಾಗಿ ಲಭ್ಯವಾಗುತಿತ್ತು.

**ಸ್ವಯಂಸೇವಕರಿಂದ ಸಹಾಯ:**

ಕಷ್ಟ ಪಟ್ಟು ಕುಯಿಲು ಮಾಡಿದ ಭತ್ತವನ್ನು ರೈತ ಗದ್ದೆಯಲ್ಲಿಯೇ ಬಿಡಲು ತೀರ್ಮಾನಿಸಿದ ವಿಷಯ ಹತ್ತಿರದವರೇ ಆದ ವಿಪತ್ತು ನಿರ್ವಹಣಾ ಸಂಯೋಜಕ ಸತೀಶ್ ಅವರಿಗೆ ತಿಳಿಯಿತು.ವಿಷಯ ತಿಳಿದ ತಕ್ಷಣ ಅವರ ಗದ್ದೆಯ ಹತ್ತಿರ ತೆರಳಿದ ಸತೀಶ್ ರೈತ ಉಮೇಶ್ ಅವರ ಸದ್ಯದ ಸಂಕಷ್ಟ ದ ಬಗ್ಗೆ ಆಲೋಚಿಸಿದರು. ವರ್ಷಪೂರ್ತಿ ಒಂದು ಕುಟುಂಬದ ಹಸಿವನ್ನು ನೀಗಿಸುವ ಭತ್ತದ ಬೆಳೆ ಮಣ್ಣಾಗಿ ಹೋಗಲು ರೈತ ತೀರ್ಮಾನಿಸಿರುವುದನ್ನು ನೆನೆದು ಸಂಕಟ ಪಟ್ಟರು. ಅವರ ಈ ಸಮಯದ ಅನಾರೋಗ್ಯ ಆಹಾರದ ಮೂಲವನ್ನು ಕಸಿಯುತ್ತಿರುವುದು ಇವರಿಗೆ ಬೇಸರವೆನ್ನಿಸಿತು.ಮೂರ್ನಾಲ್ಕು ತಿಂಗಳು ಕಣ್ಣಲ್ಲಿ ಕಣ್ಣಿಟ್ಟು ಬೆಳೆಸಿದ, ಪ್ರಾಣಿ ಪಕ್ಷಿಗಳ ಹಾವಳಿಯಿಂದ ರಕ್ಷಣೆ ಮಾಡಿದ, ಕಟಾವು ಮಾಡಿದ ಭತ್ತದ ಫಸಲನ್ನು ತನ್ನ ಹೊಲದಲ್ಲಿ ಹಾಳು ಬಿಡಲು ನಿರ್ಧರಿಸಿದ ವಿಷಯವನ್ನು ವಿಪತ್ತು ನಿರ್ವಹಣಾ ಸಂಯೋಜಕ ಸತೀಶ್ ತನ್ನ ಗುಂಪಿನ ಸ್ವಯಂಸೇವಕರಲ್ಲಿ ಹಂಚಿಕೊಂಡರು.

**ಉಚಿತ ಕೆಲಸ:**

ಮಳೆಯಲ್ಲಿ ತುತ್ತಾಗಿ ಹಾಳಾಗುವ ಗದ್ದೆಯನ್ನು ನೋಡಿ ಕೂಡಲೇ ಸ್ಪಂದಿಸಿದ ಸ್ವಯಂಸೇವಕರು ಕೊಯ್ಲು ಮಾಡಿದ ಭತ್ತದ ಫಸಲನ್ನು ಪಿಂಡಿ ಮಾಡಿ ಕಣಕ್ಕೆ ಹೊತ್ತೊಯ್ದು ಭತ್ತದ ರಾಶಿ ಮಾಡುವ ತೀರ್ಮಾನ ಕೈಗೊಂಡರು.



ಮತ್ತು ಸೇವಾಕಾರ್ಯಕ್ಕೆ ಇಳಿದರು.ಗದ್ದೆಯಲ್ಲಿ ಕೊಯ್ದಿಟ್ಟ ಭತ್ತದ ಬೆಳೆ ಒಟ್ಟುಗೂಡಿಸಿದ್ದಾಯ್ತು. ಹೊತ್ತು ಕಣಕ್ಕೆ ಸೇರಿಸಿದ್ದಾಯ್ತು. ಟ್ರಾಕ್ಟರ್ ಓಡಾಡಿಸಿ ಕಾಳನ್ನು ಹುಲ್ಲಿನಿಂದ ಬೇರ್ಪಡಿಸಿದ್ದೂ ಆಯ್ತು.ತಮ್ಮ ಟ್ರಾಕ್ಟರ್ ನ್ನು ಸಂಯೋಜಕ ಸತೀಶ್ ಉಚಿತವಾಗಿ ಕೆಲಸಕ್ಕೆ ನೀಡಿದರು. ಭತ್ತ ಸುಮಾರು ಐದು ಕ್ವಿಂಟಾಲ್ ಸಿಕ್ಕಿರಬಹುದು. ಅದನ್ನು ಸುರಕ್ಷಿತವಾಗಿ



ತಾಡಪಾಲ್ ನಿಂದ ಹೊದಿಕೆ ಮಾಡಿ ಸ್ವಯಂಸೇವಕರು ತಮ್ಮ ಮನೆಯತ್ತ ತೆರಳಿದರು. ತಮ್ಮಲ್ಲಿರು ತಾಡ್ಪಾಲ್ ನ್ನು ಸ್ವಯಂಸೇವಕ ಪ್ರಶಾಂತ್ ನೀಡಿದರು.ಉಮೇಶ್ ಅವರ ಕುಟುಂಬಕ್ಕೆ ಸುಮಾರು ಆರು ತಿಂಗಳು ಸಾಲುವಷ್ಟು ಆಹಾರ ಧಾನ್ಯ ಹಾಗೂ ಮನೆಯಲ್ಲಿರುವ ಜಾನುವಾರಿಗೆ ಮೇವು ಉಳಿಸಿದ ಕೀರ್ತಿ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಿಗೆ ಸಲ್ಲುತ್ತದೆ.

ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರ ಈ ಸೇವಾಕಾರ್ಯ ಸುತ್ತಮುತ್ತಲಿನವರ ಗಮನ ಸೆಳೆದಿದೆ.ವಿಪತ್ತು ನಿರ್ವಹಣಾ ತರಬೇತಿಯಲ್ಲಿ ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಸ್ಫೂರ್ತಿಯ ಮಾತುಗಳು, ಪ್ರಾದೇಶಿಕ ನಿರ್ದೇಶಕರ ಮಾರ್ಗದರ್ಶನ ಇಂತಹ ಕೆಲಸ ಮಾಡಲು ನಮಗೆ ಸ್ಫೂರ್ತಿಯಾಗಿದೆ ಎಂದು ಸಂಯೋಜಕ ಸತೀಶ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

********

## 22. ದಟ್ಟಾರಣ್ಯದಲ್ಲಿ ನಾಲ್ಕು ದಿನದಿಂದ ಕಾಣೆಯಾಗಿದ್ದ ವೃದ್ಧನನ್ನು ಪತ್ತೆಹಚ್ಚಿದ ವಿಪತ್ತು ನಿರ್ವಹಣಾ ಸ್ವಯಂಸೇವಕರು,



"ಶೌರ್ಯ" ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣೆ ಘಟಕದ ಸ್ವಯಂಸೇವಕರಾದ ಶ್ರೀ ವಿನಯಚಂದ್ರ ಹಾಗೂ ಶ್ರೀ ರತನ್ ಅವರು ಅಪರೂಪದಲ್ಲಿ ಅಪರೂಪದ ಕಾರ್ಯಾಚರಣೆಯೊಂದರಲ್ಲಿ ಪಾಲ್ಗೊಂಡು ಮಾನವೀಯತೆ ಮೆರೆದಿದ್ದಾರೆ.

### ಕಾಣೆಯಾದ ಅಜ್ಜ:

ಬೆಳ್ತಂಗಡಿ ತಾಲ್ಲೂಕಿನ ಕೊಲ್ಲಿ ಗ್ರಾಮದ ಶಾಂತಿಗುಡ್ಡೆ ಎಂಬಲ್ಲಿನ ಎಂಭತ್ತೈದು ವರ್ಷ ವಯಸ್ಸಿನ ಅಣು ಪೂಜಾರಿ ಎನ್ನುವವರು ಕಾಣೆಗಿದ್ದರು. ಆಕಳುಗಳನ್ನು ಮೇಯಿಸಲೆಂದು ಹತ್ತಿರದ ಕಾಡಿಗೆ ಹೋಗಿದ್ದ ಅಜ್ಜ ಸಂಜೆಯಾದರೂ ಮನೆಗೆ ಬಂದಿರಲಿಲ್ಲ. ಕತ್ತಲು ಏರುವ ಸಮಯದಲ್ಲಿ ಅಜ್ಜ ಮನೆಗೆ ಬಾರದೇ ಇರುವ ಸುದ್ದಿ ಊರು ತುಂಬಾ ಹರಡಿತು. ಅಕ್ಕ ಪಕ್ಕದ ಮನೆಯವರಲ್ಲಿ ಕೇಳಲಾಯಿತು. ಅಜ್ಜ ಹೋಗಿ ಬರುತ್ತಿದ್ದ

ಸಂಬಂಧಿಗಳು, ಪರಿಚಿತರು, ಆಪ್ತರ ಮನೆಗಳಲ್ಲಿಯೂ ವಿಚಾರಿಸಿಯಾಯಿತು. ಆದರೂ ಅಜ್ಜ ಎಲ್ಲಿ ಹೋಗಿದ್ದಾರೆಂದು ತಿಳಿದಿರಲಿಲ್ಲ.

'ಹಸುವನ್ನು ಮೇಯಿಸಲು ಹೋದ ಅಜ್ಜ ಕಾಡಿನ ಮಾರ್ಗವಾಗಿ ಹೋಗಿದ್ದಾರೆ. ಅದನ್ನು ನಾನು ನೋಡಿದ್ದೇನೆ' ಎಂದು ಸ್ಥಳೀಯರೊಬ್ಬರು ಹೇಳಿದಾಗ, ಬೆಳ್ಳಂಬೆಳಗ್ಗೆ ಸ್ಥಳೀಯ ಯುವಕರ ಗುಂಪೊಂದು ಕಾನಿಗೆ ತೆರಳಿ ಹುಡುಕ ತೊಡಗಿತ್ತು. ದಿನವಿಡೀ ಹುಡುಕಿದ್ದಾರೆ. ಹಲವು ಗುಂಪುಗಳಾಗಿ ವಿಂಗಡಿಸಿಕೊಂಡು ಅರಸಿದ್ದಾರೆ. ಅಜ್ಜನ ಸುಳಿವು ಮಾತ್ರ ಪತ್ತೆಯಾಗಲಿಲ್ಲ.



## ಮೂರು ದಿನ ಹುಡುಕಿದರೂ ಸಿಗಲಿಲ್ಲ:

ಎರಡು ದಿನದಿಂದ ಕಣ್ಮರೆಯಾಗಿದ್ದ ಅಜ್ಜ ಗೋಚರಿಸದಿದ್ದಾಗ ಪುನಃ ಇನ್ನೊಂದಿಷ್ಟು ಯುವಕರ ತಂಡ ಕಾಡಿನೆಡೆ ಧಾವಿಸಿತು. ದನದ ಹೆಜ್ಜೆಯ ಗುರುತು ಆಧರಿಸಿ ಹೊರಟ ತಂಡಕ್ಕೆ ಒಂದಿಷ್ಟು ದೂರ ಕ್ರಮಿಸಿದಾಗ ಅಜ್ಜ ನಡೆದಾಡಲು ಬಳಸುತ್ತಿದ್ದ ಕೋಲು ದೊರಕಿತ್ತು. ಕಾಡಿನ ಮಧ್ಯದ ಗುಡ್ಡದ ಬದಿಯಲ್ಲಿ ಆ ಕೋಲಿತ್ತು. ಇಲ್ಲಿಯೇ ಸುತ್ತಮುತ್ತಲಿನಲ್ಲಿ ಅಜ್ಜ ಇರಬಹುದು ಭಾವಿಸಿ ಹುಡುಕುವ ವೇಗ ಚುರುಕುಗೊಳಿಸಿದರು. ಅಲ್ಲಿಯೇ ಸ್ವಲ್ಪ ದೂರದಲ್ಲಿ ಅರಸುತ್ತಿರುವಾಗ ಅಜ್ಜ ಬಳಸುತ್ತಿದ್ದ ಎಲೆ ಅಡಿಕೆಯ ಚೀಲ ದೊರೆಯಿತು. ಅಜ್ಜ ಧರಿಸಿದ್ದ ಬಟ್ಟೆಯ ತುಂಡೊಂದು ಅಲ್ಲಿಯೇ ಪಕ್ಕ ಕಣ್ಣಿಗೆ ನಿಲುಕಿತ್ತು. ಸುಳಿವು ಆಧರಿಸಿ ಸುತ್ತಮುತ್ತಲಿನ ಪರಿಸರದಲ್ಲಿ ಅರಸುವ ಕೆಲಸ ಯುವಕರಿಂದ ನಡೆಯಿತು. ಅಜ್ಜನ ಕೋಲು ಸಿಕ್ಕಿದೆ, ಚೀಲ ದೊರೆತಿದೆ ಸುದ್ದಿ ತಿಳಿಯುತ್ತಿದ್ದಂತೆ ಬೇರೆ ಬೇರೆ ಗುಂಪುಗಳಲ್ಲಿ ಚದುರಿ ಹುಡುಕುತ್ತಿದ್ದ ಯುವಕರೆಲ್ಲಾ ಒಂದಾಗಿ ಅಲ್ಲಿಯೇ ಸುತ್ತಮುತ್ತಲಿನ ಪರಿಸರದಲ್ಲಿ ಹುಡುಕ ತೊಡಗಿದರು. ಹಲವು ಗಂಟೆಗಳು ಉರುಳಿದರೂ, ಅರಸಿ ಅರಸಿ ಸುಸ್ತಾದರೂ ಅಜ್ಜ ಮಾತ್ರ ಪತ್ತೆಯಾಗಿರಲಿಲ್ಲ.

ಅಜ್ಜ ಕಳೆದು ಹೋಗಿ ಮೂರು ದಿನವಾಯಿತು. ಅಜ್ಜನ ಕವಳದ ಚೀಲ, ಕೋಲು, ಅಲ್ಲಲ್ಲಿ ಬಿದ್ದದ್ದ ಧರಿಸಿದ ಬಟ್ಟೆ, ಇವೆಲ್ಲಾ ಅಜ್ಜ ಕಾಡಿಗೆ ಹೋಗಿರುವುದನ್ನು ಖಾತ್ರಿ ಪಡಿಸುತ್ತಿತ್ತು. ಅಜ್ಜ ಮಾತ್ರ ಪತ್ತೆಯಾಗುತ್ತಿಲ್ಲ. ಕಾಡಿನಲ್ಲಿ ಇದ್ದರೆ ಅನ್ನ ಇಲ್ಲ. ಕುಡಿಯಲು ನೀರಿಲ್ಲ. ದಟ್ಟಾರಣ್ಯವಾಗಿದ್ದರಿಂದ ಪ್ರಾಣಿಗಳ ಭೀತಿ ಬೇರೆ. ಆತ ಎಲ್ಲಿಗೆ ಹೋಗಿದ್ದಾನೆಂದು ನೋಡಿದವರಿಲ್ಲ. ಆತನೊಂದಿಗೆ ತೆರಳಿದ್ದ ಮೂಕ ಜಾನುವಾರುಗಳು ಅಂದೇ ರಾತ್ರಿ ಕೊಟ್ಟಿಗೆ ಸೇರಿಕೊಂಡಿವೆ. ಹಾಗಾದರೆ ಅಜ್ಜನನ್ನು ಪತ್ತೆ ಮಾಡುವುದಾದರೂ ಹೇಗೆ? ಆತನ ಬಗ್ಗೆ ಕೇಳುವುದಾದರೂ ಯಾರಲ್ಲಿ?. ಉತ್ತರವಿಲ್ಲದ ಪ್ರಶ್ನೆ ಏಳುತ್ತಲೇ ಇತ್ತು. ಮಾಸುತ್ತಲೇ ಇತ್ತು.

## ಕಾಡು ಪ್ರಾಣಿಗೆ ಬಲಿಯಾಗಿರಬಹುದೇ?



ಅಜ್ಜ ಕಾಣೆಯಾಗಿದ್ದ ಬಗ್ಗೆ ಚರ್ಚೆ ಮುನ್ನೆಲೆಗೆ ಬರುತ್ತಿದ್ದಂತೆ ದಿನ ಮೂರು ದಾಟಿದಾಗ ಪತ್ತೆಯಾಗದ ಅಜ್ಜನ ಬಗ್ಗೆ ಚರ್ಚಿಸುತ್ತಾ ಕೆಲವು ಸ್ಥಳೀಯರು ಆತ ಕಾಡು ಪ್ರಾಣಿಗೆ ಬಲಿಯಾಗಿರಬೇಕೆಂದು ಮಾತನಾಡತೊಡಗಿದ್ದರು. ವಸ್ತುಗಳು ಸಿಕ್ಕ ಸ್ಥಳದಲ್ಲಿ ಆತ ಸಿಗದೇ ಇರುವುದರಿಂದ ಅವರು ಆ ನಿರ್ಧಾರ ತಳೆದಿದ್ದರು. ಹುಲಿ, ಕರಡಿ, ಚಿರತೆ, ಕಡುಕೋಣದಂತಹ ಪ್ರಾಣಿಗಳು ಆ ಸ್ಥಳದಲ್ಲಿ ಆಗಾಗ್ಗೆ ಓಡಾಡುತ್ತಿರುತ್ತವೆ. ಅದನ್ನು ಗಮನಿಸಿದ್ದ ಅನೇಕರಿದ್ದರು. ಅದೇ ಸ್ಥಳದಲ್ಲಿ ಅಜ್ಜ ಮರೆಯಾಗಿರುವುದರಿಂದ ಆತಂಕ ಸಹಜವಾಗಿಯೇ ಉದ್ಭವವಾಗಿತ್ತು.

## ಅಜ್ಜನನ್ನು ಹುಡುಕಲು ಹೊರಟ ಶೌರ್ಯ ತಂಡ:

ಬೆರಳೆಣಿಕೆಯಷ್ಟು ಮಂದಿ ತಳೆದ ನಿರ್ಧಾರ ಕೆಲವು ಯುವಕರಿಗೆ ಸರಿ ಎನ್ನಿಸಲಿಲ್ಲ. ಆ ಯುವಕರಿಗೆ ಅಜ್ಜ ಇನ್ನೂ ಸುರಕ್ಷಿತ ವಾಗಿದ್ದಾರೆ ಎನ್ನುವ ಭರವಸೆಯಿತ್ತು. ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಾದ ಶ್ರೀ ವಿನಯಚಂದ್ರ ಹಾಗೂ ಶ್ರೀ ರತನ್ ಶೆಟ್ಟಿ ಅವರು ತಮ್ಮ ಸ್ನೇಹಿತರನ್ನು ಒಳಗೊಂಡ ಸಣ್ಣ ಗುಂಪು ಕೂಡಿಕೊಂಡು ಅಜ್ಜನನ್ನು ಹುಡುಕಲು ಹೊರಟರು. ಕಿಲ್ಲೂರಿನ ವಿಶ್ವ ಹಿಂದು ಪರಿಷದ್ ಹಾಗೂ ಯುವ ಕೇಸರಿ ಗೆಳೆಯರ ಬಳಗದ ಯುವಕರೂ ಜೊತೆಯಾದರು. ಬೇರೆ ಬೇರೆ ಸಂಘಟನೆಗಳ ಯುವಕರ ಜಂಟಿ ಕಾರ್ಯಾಚರಣೆ ಕಾನಿನ ನಡುವೆ ಚುರುಕಾಗಿ ನಡೆಯಿತು.

ಕಿಲ್ಲೂರಿನ ಕಾಡುಮನೆ ಮಾರ್ಗವಾಗಿ ಬೆಳ್ಳಂಬೆಳಗ್ಗೆ ನಸುಕಿನಲ್ಲಿಯೇ ತೆರಳಿದ ಯುವಕರ ತಂಡ ಮಧ್ಯಾಹ್ನದ ವೇಳೆಗೆ ಊರಿನಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ಇರುವ ಎತ್ತರದ ಕಾಡಿನ ಗುಡ್ಡ ಏರಿತ್ತು. ಬಳಲಿಕೆ ಕಾಡಿದರೂ ಅಜ್ಜ ಸಿಕ್ಕೇ ಸಿಗುತ್ತಾನೆ ಎನ್ನುವ ಭರವಸೆ ಇವರನ್ನು ದಟ್ಟ ಕಾಡಿನ ದೊಡ್ಡದಾದ ಗುಡ್ಡ ಏರುವಂತೆ ಮಾಡಿತ್ತು.

## ಅಜ್ಜ ಕಾಣಿಸಿಕೊಂಡಿದ್ದ:



ಗುಡ್ಡದಲ್ಲಿರುವ ಒಂದು ಕಲ್ಲು ಬಂಡೆಯ ಹತ್ತಿರ ತೆರಳಿದ ಸ್ವಯಂಸೇವಕರಿಗೆ ಅಚ್ಚರಿ ಕಾದಿತ್ತು. ನಾಲ್ಕು ದಿನದಿಂದ ಕಾಣೆಯಾಗಿದ್ದ ಅಜ್ಜ ಕಲ್ಲಿನ ಬಂಡೆಯ ಮೇಲೆ ನಿತ್ರಾಣನಾಗಿ ಕುಳಿತುಕೊಂಡಿದ್ದ. ಅಸ್ವಸ್ಥನಾಗಿದ್ದ ಆತ ಯುವಕರ ಅರಸುವಿಕೆಯ ಸಪ್ಪಳ ಆಲಿಸಿ ಕುಳಿತುಕೊಂಡಂತಿತ್ತು. ಅನ್ನ ನೀರಿಲ್ಲದೇ ಮೂರು ದಿನದಿಂದ ಬಳಲಿತ್ತು ಆ ಹಿರಿಯ ಜೀವ.

ಸ್ವಯಂಸೇವಕರ ಸಂತಸಕ್ಕೆ ಪಾರವೇ ಇರಲಿಲ್ಲ. ಲಘುಬಗೆಯಿಂದ ಅಜ್ಜನನ್ನು ಸಮೀಪಿಸಿದ ಅವರು ಕುಶಲೋಪಚರಿ ವಿಚಾರಿಸಿ, ಸಾಂತ್ವಾನ ನುಡಿದು ಸುರಕ್ಷಿತವಾಗಿ ಎತ್ತಿಕೊಂಡು ಊರಿಗೆ ಕರೆ ತಂದರು. ಊಟೋಪಚಾರ, ಔಷಧೋಪಚಾರ ಮಾಡಲಾಯಿತು.

ಆಕಳುಗಳನ್ನು ಮೇಯಿಸಲು ಒಯ್ದಿದ್ದ ಅಜ್ಜ ದಾರಿ ತಪ್ಪಿ ದಟ್ಟ ಕಾಡಿಗೆ ತೆರಳಿದ್ದ. ಮೊದಲ ದಿನ ಗುಡ್ಡದಲ್ಲಿ ಇರುವ ಗುಹೆಯಂತಹ ಸ್ಥಳದಲ್ಲಿ ಮಲಗಿಕೊಂಡಿದ್ದ. ಊಟ, ನೀರು ಇಲ್ಲದೇ ನಿತ್ರಾಣನಾಗಿದ್ದ ಆತ ಎರಡನೇ ದಿನ ಅಲ್ಲಿಯೇ ಸಮೀಪವಿರುವ ಕಲ್ಲಿನ ಬಂಡೆಯ ಮೇಲೇರಿದ್ದ. ಅಲ್ಲಿಂದ ಅಜ್ಜನಿಗೆ ಕದಲಲು, ಎದ್ದೇಳಲು ಸಾಧ್ಯವಾಗಿರಲಿಲ್ಲ. ಆತನ ಸ್ಥಿತಿ ಅರಣ್ಯ ರೋದನವಾಗಿತ್ತು.

## 2021 ರಲ್ಲಿ ನಡೆದ ಘಟನೆ:



2021 ರ ಅಕ್ಟೋಬರ್ ತಿಂಗಳಲ್ಲಿ ನಡೆದ ಘಟನೆಯಿದು. ಎಪ್ರಿಲ್ ಮೊದಲ ವಾರದಲ್ಲಿ ಅಜ್ಜನನ್ನು ಭೇಟಿ ಮಾಡಿ ಕುಶಲೋಪಚರಿ ವಿಚಾರಿಸಲೆಂದು ಜನಜಾಗೃತಿ ಪ್ರಾದೇಶಿಕ ನಿರ್ದೇಶಕರಾದ ವಿವೇಕ್ ಪಾಯ್ಸ್, ಯೋಜನಾಧಿಕಾರಿ ಜಯಕರ್ ಶೆಟ್ಟಿ, ವಿಪತ್ತು ನಿರ್ವಹಣೆ ಕಾರ್ಯಕ್ರಮದ ಯೋಜನಾಧಿಕಾರಿ ಜೈವಂತ ಪಟಗಾರ ಅಜ್ಜನ ಮನೆ ಭೇಟಿ ಮಾಡಿದ್ದರು. ಎಂಭತ್ತೈದರ ವಯಸ್ಸಿನಲ್ಲಿಯೂ ಅಜ್ಜ ಉತ್ಸಾಹದಿಂದ ಇದ್ದು

ಸ್ವಯಂಸೇವಕರ ಸಾಹಸವನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿದ್ದಾನೆ. ಇತ್ತೀಚೆಗೆ ವಯೋಸಹಜ ಅನಾರೋಗ್ಯದಿಂದ ಅಜ್ಜ ಮೃತನಾಗಿದ್ದಾನೆ. ಕಾರ್ಯಾಚರಣೆಯಲ್ಲಿ ಭಾಗವಹಿಸಿದ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಾದ ರತನ್ ಶೆಟ್ಟಿ, ವಿನಯಚಂದ್ರ ಹಾಗೂ ವಿವಿಧ ಸಂಘಟನೆಗಳಲ್ಲಿರುವ ಅವರ ಸ್ನೇಹಿತರ ಸೇವಾಕಾರ್ಯ ಮಾತ್ರ ಕುಟುಂಬದ ಸದಸ್ಯರು ಪಾಲಿಗೆ ಅಳಿಸಲಾಗದ ನೆನಪಿನ ಬುತ್ತಿಯಾಗಿದೆ.

**************

## 23. ಬಡ ಕುಟುಂಬಕ್ಕೆ ನೆರವಾಗಿ ಮಾನವೀಯತೆ ಮೆರೆದ ಜನಜಾಗೃತಿ ವೇದಿಕೆ ವಿಜಯವಾಣಿ ಪತ್ರಿಕೆಯ ಕಳಕಳಿಗೆ ಸ್ಪಂದಿಸಿದ ಹೇಮಾವತಿ ವಿ. ಹೆಗ್ಗಡೆಯವರು.



ಆರ್ಥಿಕ ಸಂಕಷ್ಟ, ಅಸಹಾಯಕತೆ, ಮಾನಸಿಕ ಅನಾರೋಗ್ಯದಿಂದ ಹದಗೆಟ್ಟಿರುವ ಪುಷ್ಪಾ ನಿಡ್ಲೆ ಅವರ ಬದುಕು ಅಸಹನೀಯವಾಗಿತ್ತು. ಅವರ ಕಷ್ಟಕ್ಕೆ ಮಾತೃಶ್ರೀ ಅಮ್ಮನವರು ಸ್ಪಂದಿಸಿದ್ದಾರೆ. ಪರಿಣಾಮ ಅವರ ಕುಟುಂಬದಲ್ಲೀಗ ಸಂಭ್ರಮದ ಕಳೆ ನಿತ್ಯ ನಿರಂತರ.

### ಮಾತೃಶ್ರೀ ಅಮ್ಮನವರಿಂದ ಸ್ಪಂದನೆ:

ಬೆಳ್ತಂಗಡಿ ತಾಲೂಕಿನ, ನಿಡ್ಲೆ ಪಂಚಾಯತ್ ವ್ಯಾಪ್ತಿಯ, ಸಂಕದಕಟ್ಟೆ ಚೆನ್ನಪ್ಪ ಗೌಡ ಮತ್ತು ಕಮಲ ದಂಪತಿಗಳ ಕುಟುಂಬದ ಕರಾಳ ಕಥೆಯನ್ನು ವಿಜಯವಾಣಿ ಪತ್ರಿಕೆಯು ವರದಿ ಮಾಡಿತ್ತು. ಇದಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಜ್ಞಾನವಿಕಾಸ ಮಹಿಳಾ ಕಾರ್ಯಕ್ರಮದ ಅಧ್ಯಕ್ಷರಾದ ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆಯವರು ತಕ್ಷಣ ಸ್ಪಂದಿಸಿ, ಈ ಬಗ್ಗೆ ಪರಿಶೀಲಿಸುವಂತೆ ಜನಜಾಗೃತಿ ಪ್ರಾದೇಶಿಕ ನಿರ್ದೇಶಕರಾದ ವಿವೇಕ್ ವಿ. ಪಾಯ್ಸ್ ರವರಿಗೆ ಜವಾಬ್ದಾರಿ ವಹಿಸಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ವಿವೇಕ್ ಪಾಯಸ್ ಅವರು ಪತ್ರಿಕೆಗೆ ವರದಿ ಮಾಡಿದ ವಿಜಯವಾಣಿ ವರದಿಗಾರರಾದ ಮನೋಹರ ಬಳಂಜ ಅವರನ್ನು ಸಂಪರ್ಕಿಸಿದ್ದರು. ಬೆಳ್ತಂಗಡಿ ತಾಲ್ಲೂಕಿನ ಯೋಜನಾಧಿಕಾರಿ ಜಯಕರ ಶೆಟ್ಟಿ, ಕರ್ನಾಟಕ ದಲಿತ ಸಂಘರ್ಷ ಜಿಲ್ಲಾ ಸಮಿತಿಯ ಸದಸ್ಯರಾದ ವೆಂಕಣ್ಣ ಕೊಯ್ಯೂರು, ಪತ್ರಕರ್ತ ಸಂಘದ ಅಧ್ಯಕ್ಷರಾದ ಅಶ್ರಫ್ ಆಲಿ, ಸ್ನೇಹಾಲಯ ಚಾರಿಟೇಬಲ್ ಟ್ರಸ್ಟ್ ರಿ. ಮಂಜೇಶ್ವರ ಇದರ ತಾಲೂಕು ಸಂಯೋಜಕ ಸಂತೋಷ ಅವರ ಜೊತೆಯಲ್ಲಿ ಸಂಕಷ್ಟದ ಪರಿಸ್ಥಿತಿಯಲ್ಲಿರುವ ಚೆನ್ನಪ್ಪ ಗೌಡರ ಮನೆಭೇಟಿ ಮಾಡಿದರು.

## ಕೋಣೆಯಲ್ಲಿ ಕೂಡಿ ಹಾಕಿದ್ದರು:




ಪತ್ರಿಕೆಯಲ್ಲಿ ವಿವರಿಸಿದಂತೆಯೇ ಅತ್ಯಂತ ನಿಕೃಷ್ಠ ಸ್ಥಿತಿಯಲ್ಲಿ ಆ ಕುಟುಂಬವಿತ್ತು. ಚೆನ್ನಪ್ಪ ಗೌಡರ ಮಗಳಾದ ಪುಷ್ಪಾವತಿ ಅನಾರೋಗ್ಯದಿಂದ ಬಳಲುತ್ತಿದ್ದರು. ಮಾನಸಿಕ ಆರೋಗ್ಯ ಹದಗೆಟ್ಟಂತೆ ಇರುವ ಅವರನ್ನು ಜನ ಸಂಪರ್ಕದಿಂದ ದೂರವಿಡಲಾಗಿತ್ತು. ಜನರ ತಿರಸ್ಕಾರ, ಮಾನಸಿಕ ಅಸ್ವಸ್ಥತೆ, ಕಾಡುತ್ತಿರುವ ಅನಾರೋಗ್ಯ ಪುಷ್ಪ ಅವರನ್ನು ಹೈರಾಣಾಗಿಸಿತ್ತು. ಮನಸ್ಸಿಗೆ ತೋಚಿದಂತೆ ಮಾತನಾಡುವ, ತನ್ನಷ್ಟಕ್ಕೆ ತಾನು ಕೂಗುತ್ತಾ, ಒದರುತ್ತಾ ಇತರರಿಗೆ ಕಿರಿಕಿರಿ ಉಂಟುಮಾಡುತ್ತಿರುವ ಅವರ ನಡವಳಿಕೆಯನ್ನು ಸಹಿಸಲಾಗದೇ ಕುಟುಂಬದ ಸದಸ್ಯರು ಕತ್ತಲೆ ಕೋಣೆಯಲ್ಲಿ ಅವಳನ್ನು ಕೂಡಿ ಹಾಕಿದ್ದರು. ಅತ್ತಿತ್ತ ಓಡಿಹೋಗದಂತೆ, ಜನರಿಗೆ ತೊಂದರೆ ಕೊಡದಂತೆ ತಡೆಯಲು ಅಸ್ವಸ್ಥೆಗೆ ಮೀಸಲಾಗಿಟ್ಟ ಕೋಣೆಗೆ ಬೀಗ ಹಾಕಲಾಗಿತ್ತು. ನಾಲ್ಕು ಗೋಡೆಯ ಮಧ್ಯೆ ನರಕದ ಬದುಕು ಪುಷ್ಪಾ ಅವರದಾಗಿತ್ತು.

## ಅನಾರೋಗ್ಯದಿಂದ ಹೈರಾಣಾದ ಬದುಕು:

ಅನಾರೋಗ್ಯಕ್ಕೆ ತುತ್ತಾಗಿದ್ದ ಪುಷ್ಪ ಹೈರಾಣಾಗಿದ್ದರು. ಮನೆಯಲ್ಲಿ ಹಿರಿಯ ದಂಪತಿಗಳಾದ ಚೆನ್ನಪ್ಪ ಗೌಡ ಮತ್ತು ಕಮಲ ಇದ್ದರು. ಪುಷ್ಪಾ ಇವರ ಎರಡು ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಈ ಹಿರಿಯ ದಂಪತಿಗಳ ಹೆಗಲೇರಿತ್ತು. ಹಿರಿಯ ಮಗಳಾದ ಪ್ರೇಮ ಮನೆಯಲ್ಲಿದ್ದು ಮನೆಯ ಖರ್ಚನ್ನು ನಿಭಾಯಿಸುತ್ತಿದ್ದರು. ಕೂಲಿಗೆ ತೆರಳಬೇಕು. ದುಡಿಮೆ ಮಾಡಬೇಕು. ಸಂಸಾರದ ಜವಾಬ್ದಾರಿ ನೋಡಿಕೊಳ್ಳಬೇಕು. ಇವೆಲ್ಲಾ ಪ್ರೇಮ ಅವರಿಗೆ ಅನಿವಾರ್ಯವಾಗಿತ್ತು. ಕೇವಲ ದುಡಿಮೆ, ಸಂಪಾದನೆ ಸಂಸಾರ ನಿರ್ವಹಣೆ ಮಾತ್ರ ಆಗಿದ್ದರೆ ಈ ಕುಟುಂಬದ ಬದುಕು ಇತರರಂತೆ ಸುಂದರವಾಗಿರುತ್ತಿತ್ತು. ಆದರೆ ವಾಸ್ತವ ಹಾಗಿರಲಿಲ್ಲ. ಅಸ್ವಸ್ಥತೆಯಿಂದ ಬಳಲುತ್ತಿದ್ದ ಪುಷ್ಪ ಮನೆಯಲ್ಲಿದ್ದರು. ಅವರ ಅನಾರೋಗ್ಯವೇ ಇವರ ತಲೆನೋವಿಗೆ ಕಾರಣವಾಗಿತ್ತು. ಆಸ್ಪತ್ರೆಯ ಖರ್ಚು, ಮಕ್ಕಳ ಶಿಕ್ಷಣದ ವೆಚ್ಚ, ಮನೆಯ ಖರ್ಚುಗಳು ಇವೆಲ್ಲವೂ ಒಬ್ಬರ ದುಡಿಮೆಯಿಂದ ನಿಭಾಯಿಸಬೇಕಿತ್ತು. ಸಮಸ್ಯೆಗಳ ಸುಳಿಯಲ್ಲಿ ದಾರುಣತೆಯ ಬದುಕು ಒಂದು ಈ ಕುಟುಂಬದ ಪಾಲಿಗೆ ಒಲಿದಂತಿತ್ತು. ಹೊತ್ತಿನ ಊಟಕ್ಕೂ ಪರದಾಡುವ ಪರಿಸ್ಥಿತಿ ಕಂಗೆಡುವಂತೆ ಮಾಡಿತ್ತು.

ಅಸ್ವಸ್ಥತೆಯಿಂದ ಬಳಲುತ್ತಿದ್ದ ಪುಷ್ಪಾವತಿಯವರ ಗಂಡ ಮನೆ ಬಿಟ್ಟು ಹೋಗಿದ್ದರು. ಮನೆಯ ಜವಾಬ್ದಾರಿಯನ್ನು ವಹಿಸಿಕೊಂಡ ಪ್ರೇಮ ಬೀಡಿ ಕಟ್ಟಿ ಜೀವನ ನಿರ್ವಹಿಸುತ್ತಿದ್ದರು. ಓದುತ್ತಿದ್ದ ಪುಷ್ಪಾವತಿಯವರ ಎರಡು ಗಂಡು ಮಕ್ಕಳು ಶಾಲೆಗೆ ತೆರಳಿ ವಿದ್ಯಾಭ್ಯಾಸ ಮಾಡಲೂ ಸಾಧ್ಯವಾಗದ ಸ್ಥಿತಿಯಲ್ಲಿದ್ದರು.

## ಜನಜಾಗೃತಿ ಪ್ರಾದೇಶಿಕ ನಿರ್ದೇಶಕರ ಸ್ಪಂದನೆ:



ಪರಿಸ್ಥಿತಿಯನ್ನು ಅವಲೋಕಿಸಿದ ಜನಜಾಗೃತಿ ವೇದಿಕೆಯ ಪ್ರಾದೇಶಿಕ ನಿರ್ದೇಶಕರು ನಾಲ್ಕು ಗೋಡೆಯ ಮಧ್ಯೆ ಅಮಾನವೀಯ ಬದುಕು ಸವೆಸುತ್ತಿದ್ದ ಪುಷ್ಪಾವತಿಯವರಿಗೆ ಶಾಶ್ವತ ಚಿಕಿತ್ಸೆ ಕೊಡಿಸುವ ಬಗ್ಗೆ ಚಿಂತನೆ ನಡೆಸಿದರು. ಮಂಜೇಶ್ವರದ ಸ್ನೇಹಾಲಯ ಚಾರಿಟೇಬಲ್ ಟ್ರಸ್ಟ್ ರಿ. ಇವರಿಗೆ ಪರಿಸ್ಥಿತಿಯನ್ನು ವಿವರಿಸಿದಾಗ ಮಹಿಳೆಯ

ಆರೋಗ್ಯದ ಸಂಪೂರ್ಣ ಜವಾಬ್ದಾರಿಯನ್ನು ಆ ಸಂಸ್ಥೆ ವಹಿಸಿಕೊಂಡಿತು. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಸ್ಪತ್ರೆ, ಉಜಿರೆಯ ಅಂಬುಲೆನ್ಸ್‌ನಲ್ಲಿ ದಿನಾಂಕ:14.08.2020 ರಂದು ಯೆನಪೋಯ ಆಸ್ಪತ್ರೆ (ಮಾನಸಿಕ ಚಿಕಿತ್ಸಾ ವಿಭಾಗ)ಕ್ಕೆ ಅಸ್ವಸ್ಥೆ ಪುಷ್ಪಾ ಅವರನ್ನು ಕರೆದೊಯ್ದು ದಾಖಲಿಸಲಾಯಿತು.

ಸರಿಸುಮಾರು ಹತ್ತು ವರ್ಷಗಳಿಂದ ಈ ಮಹಿಳೆ ಇಂತಹ ಸಮಸ್ಯೆಯ ಸುಳಿಯಲ್ಲಿ ಬಳಲುತ್ತಿದ್ದಳು. ಆಸ್ಪತ್ರೆಗೆ ಸೇರ್ಪಡೆಗೊಂಡ ನಂತರವೇ ಆಕೆ ನಾಲ್ಕು ಗೋಡೆಯ ಮಧ್ಯದ ನರಕದ ಜೀವನದಿಂದ ಹೊರ ಬಂದಿರುವುದು. ಯೆನಪೋಯ ಆಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸೆ ದೊರೆಯಿತು. ನಿಧಾನವಾಗಿ ಪುಷ್ಪ ಚೇತರಿಸಿಕೊಳ್ಳತೊಡಗಿದರು. ಸ್ನೇಹಾಲಯ ಆಶ್ರಮದ ಸ್ಥಾಪಕರಾದ ಶ್ರೀ ಜೋಸೆಫ್ ಕ್ರಾಸ್ತ ಮತ್ತು ಸಲಹೆಗಾರರಾದ ಶ್ರೀ ಜಿಯೋ ಅಗ್ರಾರ್ ಅವರು ತೋರಿದ ಕಾಳಜಿಯಿಂದಾಗಿ ಪುಷ್ಪಾ ಸ್ವಸ್ಥ ಜೀವನಕ್ಕೆ ಕಾಲಿಟ್ಟರು. ಆಸ್ಪತ್ರೆಯ ವೆಚ್ಚವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅನುದಾನ ನೀಡಿತು. ಪರಿಣಾಮ ಪುಷ್ಪ ಅವರ ಬದುಕು ಬದಲಾಯಿತು. ಸುಂದರವಾಯಿತು.

## ಮಕ್ಕಳ ಶಿಕ್ಷಣಕ್ಕೆ ನೆರವು:

ಗುಣಮಟ್ಟದ ಚಿಕಿತ್ಸೆ ದೊರೆತಾಗ ಪುಷ್ಪಾವತಿಯವರ ಆರೋಗ್ಯ ಸುಧಾರಿಸಿತು. ನಂತರ ಸ್ವತಃ ಪುಷ್ಪ ಅವರಿಗೆ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಆಲೋಚನೆ ಶುರುವಾಯಿತು. ಸಮಸ್ಯೆಯ ನಡುವೆಯೇ ನಿತ್ಯ ದಿನ ದೂಡಬೇಕಿದ್ದ ಅನಿವಾರ್ಯತೆ ಇದ್ದುದರಿಂದ ಮಕ್ಕಳಿಬ್ಬರ ಓದು ಕುಂಠಿತವಾಗಿತ್ತು. ಹಿರಿಯ ಮಗ ಪುಷ್ಪರಾಜ್ ಪಿಯುಸಿಯಲ್ಲಿ ಅನುತ್ತೀರ್ಣನಾಗಿದ್ದ. ಐಟಿಐ ಓದಿ ತನ್ನ ತಾಯಿಯನ್ನು ಬಹಳ ಚೆನ್ನಾಗಿ ನೋಡಿಕೊಳ್ಳಬೇಕು ಎನ್ನುವ ಹಂಬಲ ಈತನಲ್ಲಿತ್ತು. ಆದರೆ ಸಮಸ್ಯೆಯ ಸುಳಿಯಲ್ಲಿ ಈತನ ಓದು ಕುಗ್ಗಿತ್ತು. ತಾಯಿ ಚೇತರಿಸಿಕೊಂಡ ಬಳಿಕ ಈತನಲ್ಲಿಯೂ ಹೊಸ ಉತ್ಸಾಹ ಮೂಡಿತ್ತು. ಅದನ್ನು ಗಮನಿಸಿದ ಶ್ರೀ ಕ್ಷೇತ್ರ ಧರ್ಮಸ್ಥಳ 2 ವರ್ಷದ ಫಿಟ್ಟರ್ ಕೋರ್ಸ್ ಓದಲು ವೇಣೂರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಅವಕಾಶ ಮಾಡಿಕೊಟ್ಟಿತು. ದಾಖಲಾತಿ, ಹಾಸ್ಟೆಲ್ ವ್ಯವಸ್ಥೆಗೆ, ಶುಲ್ಕದಲ್ಲಿ ವಿನಾಯಿತಿ ಮುಂತಾದವುಗಳ ಕುರಿತಂತೆ ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆಯವರ ಸೂಚನೆಯಂತೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಯವರಾದ ಶ್ರೀ ಯಶೋವರ್ಮ ಅ'ವರು ಸಹಕಾರ ನೀಡಿದರು. ಈತನ ಎರಡು ವರ್ಷದ ವಿದ್ಯಾಭ್ಯಾಸದ ಸಂಪೂರ್ಣ ಖರ್ಚುಗಳನ್ನು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ ನೋಡಿಕೊಂಡಿದೆ.

ಪುಷ್ಪ ಅವರ ಎರಡನೇ ಮಗ ಪದ್ಮರಾಜ್ 10 ನೇ ತರಗತಿ ಫೇಲಾಗಿದ್ದ. ಇವನನ್ನು ಸಹ ವೇಣೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೈಗಾರಿಕಾ ತರಬೇತಿ ಸಂಸ್ಥೆಗೆ ಒಂದು ವರ್ಷದ ವೆಲ್ಡರ್ ಕೋರ್ಸ್ ಓದಲು ಸೇರಿಸಲಾಗಿದೆ. ಈ ಸಂಬಂಧ ತಗಲುವ ವಿದ್ಯಾರ್ಥಿಯ ಎಲ್ಲಾ ಖರ್ಚುಗಳನ್ನು ಬೆಳ್ತಂಗಡಿ ರೋಟರಿ ಕ್ಲಬ್ ಭರಿಸಿದೆ. ರೋಟರಿ ಕ್ಲಬ್ ಅಧ್ಯಕ್ಷರಾದ ಶ್ರೀ ಧನಂಜಯ ರಾವ್, ಡಾ। ಶಶಿಧರ್ ಡೋಂಗ್ರೆ, ಕಾರ್ಯದರ್ಶಿ ಶ್ರೀಧರ್ ರವರು ರೂ.15,000/-ದ ಚೆಕ್‌ನ್ನು ವೇಣೂರು ಐ.ಟಿ.ಐ.ನ ಪ್ರಾಂಶುಪಾಲರಾದ ಶ್ರೀ ವಿಶ್ವೇಶ್ವರ ಪ್ರಸಾದ್ ರವರಿಗೆ ಹಸ್ತಾಂತರಿಸಿದ್ದಾರೆ.



## ಯೋಜನೆಯಿಂದ ಅನುದಾನ:

ಚೇತರಿಕೆ ಕಂಡುಕೊಂಡ ಈ ಕುಟುಂಬಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಪತ್ತು ನಿರ್ವಹಣಾ ಕಾರ್ಯಕ್ರಮದಡಿಯಲ್ಲಿ ರೂ.30,000/- ಅನುದಾನವನ್ನು ಮಾನ್ಯ ಕಾರ್ಯನಿರ್ವಾಹಕ ನಿರ್ದೇಶಕರು ಬಿಡುಗಡೆಗೊಳಿಸಿದರು. ಬೆಳ್ತಂಗಡಿಯ ಸ್ಪಂದನಾ ಸೇವಾ ಸಂಘ ರೂ.15,000/- ನೀಡಿರುತ್ತಾರೆ. ಅಖಿಲ ಕರ್ನಾಟಕ ರಾಜಕೇಸರಿ ಸಂಘದಿಂದ 50 ಕೆ.ಜಿ. ಅಕ್ಕಿ ಮತ್ತು ದಿನಸಿ ಸಾಮಾಗ್ರಿಗಳನ್ನು ನೀಡಿರುತ್ತಾರೆ.

ಪುಷ್ಪಾ ಅವರ ಕುಟುಂಬ ಹೊಸ ಬದುಕು ಕಟ್ಟಿಕೊಳ್ಳಲು ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಜನಜಾಗೃತಿ ವೇದಿಕೆ ನಿರಂತರ ಅನುಪಾಲನೆ ಮಾಡಿದೆ. ಪ್ರಾದೇಶಿಕ ನಿರ್ದೇಶಕರಾದ ವಿವೇಕ್ ಪಾಯಸ್ ಅವರು ಚಿಕಿತ್ಸೆ ನೀಡಿದ ಆಸ್ಪತ್ರೆ, ವಿವಿಧ ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳನ್ನು ಸಂಪರ್ಕಿಸಿ ಕುಟುಂಬದ ಸಮಸ್ಯೆ ಶಮನಗೊಳ್ಳಲು ಶ್ರಮ ವಹಿಸಿದ್ದಾರೆ. ಗ್ರಾಮಾಭಿವೃದ್ಧಿ ಯೋಜನೆಯ ಮಾನವೀಯ ಕಾರ್ಯದಿಂದಾಗಿ ಕತ್ತಲೆ ತುಂಬಿದ ಪುಷ್ಪಾ ಅವರ ಕುಟುಂಬದಲ್ಲೀಗ ನೆಮ್ಮದಿಯ ಬೆಳಕು ಪಸರಿಸಿದೆ. ಆನಂದ ಮನೆಮಾಡಿದೆ.

***********

## 24. ಮಾನಸಿಕ ಅಸ್ವಸ್ಥನಿಗೆ ಮಾನವೀಯತೆ ಮೆರೆದ ಸ್ವಯಂಸೇವಕರು



ಮಾನಸಿಕ ಅಸ್ವಸ್ಥನಂತೆ ಊರೂರು ಅಲೆಯುತ್ತಾ ದಿನ ಕಳೆಯುತ್ತಿದ್ದ ಈತನನ್ನು ಯಾರೂ ಗಮನಿಸುತ್ತಿರಲಿಲ್ಲ. ಭಿಕ್ಷುಕನಂತೆ ಕಾಣುತ್ತಿದ್ದ ಆತನನ್ನು ಯಾರೂ ಸಮೀಪಿಸುತ್ತಿರಲಿಲ್ಲ. ಸ್ನಾನ ಮಾಡಿ ಅದೆಷ್ಟು ದಿನಗಳಾಗಿತ್ತೋ! ರೋಗಿಯಂತೆ ಕಂಡುಬರುತ್ತಿದ್ದ ಆತನಿಂದ ಜನ ದೂರ ನಿಲ್ಲುತ್ತಿದ್ದರು. ನಿಪ್ಪಾಣಿ ತಾಲ್ಲೂಕಿನ ಬೆನ್ನಾಡಿ ಗ್ರಾಮದ ಚಂದ್ರು ಎನ್ನುವ ವ್ಯಕ್ತಿಯ ಕತೆಯಿದು. ಜೋಪಡಿ ಮನೆಯಲ್ಲಿ ವಾಸವಾಗಿದ್ದ ಈತ ಊರಿನಲ್ಲಿ ತೀರಾ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ.

ಬೇನಾಡಿ ಗ್ರಾಮದ ಮಾರ್ಗವಾಗಿ ಸಾಗುತ್ತಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಚಿಕ್ಕೋಡಿ ಜಿಲ್ಲಾ ನಿರ್ದೇಶಕರಾದ ವಿಟ್ಠಲ್ ಸಾಲ್ಯಾನ್ ರವರು ಈತನನ್ನು ಗಮನಿಸಿ ಮಾತನಾಡಿಸಿದಾಗ ಸ್ಥಳೀಯನೆಂಬುದು ಗಮನಕ್ಕೆ ಬಂದಿದೆ. ಕೂಡಲೇ ಸ್ಥಳೀಯ ಬೇನಾಡಿ ವಿಪತ್ತು ನಿರ್ವಹಣಾ ಶೌರ್ಯ ಘಟಕದ ಸ್ವಯಂಸೇವಕರನ್ನು ಕರೆಯಿಸಿದಾಗ ಸ್ವಯಂಸೇವಕರು ಆತನಿಗೆ ಕ್ಷೌರ ಮಾಡಿಸಿ, ಸ್ನಾನ ಮಾಡಿಸಿ, ಪ್ರಥಮ ಚಿಕಿತ್ಸೆ ನೀಡಿದ್ದಾರೆ. ನಿರ್ದೇಶಕರು ಆತನಿಗೆ ಹೊಸ ಬಟ್ಟೆಯನ್ನು ನೀಡಿ, ಧರಿಸಲು ಸಹಾಯ ಮಾಡಿ ಮನೆಗೆ ಕಳುಹಿಸಿರುತ್ತಾರೆ.



ನಿರ್ಲಕ್ಷಿತನಾಗಿ ರೋಗಿಯಂತೆ ಕಂಡುಬರುತ್ತಿದ್ದ ಈತ ಶೌರ್ಯ ಸ್ವಯಂಸೇವಕರ ಆರೈಕೆಯ ನಂತರ ಲವಲವಿಕೆಯಿಂದ ಓಡಾಡುತ್ತಿದ್ದಾನೆ. ಸ್ಥಳೀಯರಿಗೆ ಈತನ ಗುರುತು ಸಿಗದಷ್ಟು ಬದಲಾಗಿದ್ದಾನೆ. ಕರೆಯದೇ ಬಂದು ಕಾಳಜಿ ತೋರಿ, ಪ್ರೀತಿ ಧಾರೆ ಎರೆದ ಧರ್ಮಸ್ಥಳ ಯೋಜನೆಯ ಕಾರ್ಯಕರ್ತರ, ಶೌರ್ಯ ಸ್ವಯಂಸೇವಕರ ಈ ಮಾನವೀಯ ಸ್ಪಂದನೆ ಆತನನ್ನು ಭಾವುಕನನ್ನಾಗಿಸಿದೆ. ಮೌನ ವದನನಾಗಿ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದ್ದ ಈತ ತನ್ನ ಮನೆಗೆ ತೆರಳಿದ್ದಾನೆ. ಸ್ವಯಂಸೇವಕರ ಸೇವೆಗೆ ಸ್ಥಳೀಯರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

********

# 25. ಉತ್ತರ ಪ್ರದೇಶ ಮೂಲದ ಅನಾಥ ವ್ಯಕ್ತಿಯನ್ನು ಅನಾಥಾಶ್ರಮಕ್ಕೆ ಸೇರಿಸಿ ಮಾನವೀಯತೆ ಮೆರೆದ ಸ್ವಯಂಸೇವಕರು




ಮೂಡಿಗೆರೆಯಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಊರಿಗೆ ಪ್ರವೇಶಿಸಿ ಅಲ್ಲಲ್ಲಿ ಏಕಾಂಗಿಯಾಗಿ ಅಲೆಯುತ್ತಿರುವುದನ್ನು ಕಂಡ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಆತನನ್ನು ಮಾತನಾಡಿ ಊಟ ಉಪಾಹಾರದ ವ್ಯವಸ್ಥೆ ಮಾಡಿರುವುದು ಮಾತ್ರವಲ್ಲದೇ ಅನಾಥಾಶ್ರಮಕ್ಕೆ ಸೇರಿಸಿ ಮಾನವೀಯತೆ ಮೆರೆದಿದ್ದಾರೆ.

## ಕಾಣಿಸಿಕೊಂಡ ಅನಾಥ:

ದಿನಾಂಕ :12.02.2020 ರಂದು ಅಪರಿಚಿತ ವ್ಯಕ್ತಿ ಮೊದಲ ಬಾರಿಗೆ ಖಾಂಡ್ಯ ವ್ಯಾಪ್ತಿಯ ಬಿದರೆಗೆ, ಸಂಜೆಯ ವೇಳೆಯಲ್ಲಿ ಪ್ರವೇಶಿಸಿದ್ದ. ಗಡ್ಡ ಬಿಟ್ಟಿದ್ದು, ತಲೆ ಬಾಚದೇ ಕುರೂಪಿಯಾಗಿರುವ ಆ ವ್ಯಕ್ತಿ ಬಹಳ ದಿನಗಳಿಂದ ಸ್ನಾನ ಮಾಡದೇ ಮೇಲ್ನೋಟಕ್ಕೆ ಭಯ ಹುಟ್ಟಿಸುವ ರೀತಿಯಲ್ಲಿದ್ದ. ಅವನನ್ನು ನೋಡಿದ ಜನ ಕಳ್ಳನಿರಬಹುದೆಂದು ಆತ ಹೋದೆಡೆಯಲ್ಲೆಲ್ಲಾ ಓಡಿಸುತ್ತಿದ್ದರು. ಹಸಿವಿನಿಂದ ಬಳಲುತ್ತಿದ್ದ ಆತನ ಸಹಾಯಕ್ಕೆ ನಿಲ್ಲಲೂ ಅಂಜುತ್ತಿದ್ದರು. ಮಾನಸಿಕ ಅಸ್ವಸ್ಥನಂತೆ ಕಂಡುಬರುತ್ತಿದ್ದ ಆತನನ್ನು ಆ ದಾರಿಯಲ್ಲಿ ತೆರಳುತ್ತಿದ್ದ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಾದ ರಘುಪತಿ ಅವರು ಗಮನಿಸಿದ್ದರು, ಮತ್ತು ಮಾತನಾಡಿಸಿದ್ದರು. ಇದೇ ವ್ಯಕ್ತಿ ಮೂರು ದಿನಗಳ ಹಿಂದೆ ಖಾಂಡ್ಯದ ಹತ್ತಿರ ರಸ್ತೆಯ ಬದಿಯಲ್ಲಿ ಮಲಗಿದ್ದುದನ್ನು ಸಹ ಅವರು ಗಮನಿಸಿದ್ದರು. ಅದಾಗಿ ಮೂರು ದಿನಗಳ ನಂತರ ಆತ ಬಿದಿರೆ ಊರಿಗೆ ಪ್ರವೇಶಿಸಿದ್ದ.

## ಉತ್ತರ ಪ್ರದೇಶ ಮೂಲದ ವ್ಯಕ್ತಿ:

ಅನಾಥ ವ್ಯಕ್ತಿಗೆ ಕನ್ನಡ ಭಾಷೆ ಬರುತ್ತಿರಲಿಲ್ಲ. ಹಿಂದಿಯಲ್ಲಿ ಮಾತನಾಡುತ್ತಿದ್ದ. ಉತ್ತರ ಪ್ರದೇಶ ಮೂಲದ ವ್ಯಕ್ತಿ ಎನ್ನುವುದು ಆತನನ್ನು ಮಾತನಾಡಿಸಿದಾಗ ತಿಳಿದು ಬಂತು. ಅಲ್ಲಿನ ಯಾರು ಮಾತನಾಡಿಸಿದರೂ ಆತನಿಗೆ ಅರ್ಥವಾಗುತ್ತಿರಲಿಲ್ಲ. ಹಸಿದು ಬಳಲುತ್ತಿದ್ದ ಆತನಿಗೆ ಊಟ ನೀಡಿ ಬಂದಿದ್ದರು ರಘುಪತಿ. ಅಪರಿಚಿತ ಆ ವ್ಯಕ್ತಿ ಬಸ್ ನಿಲ್ದಾಣದಲ್ಲಿ, ರಸ್ತೆಯ ಬದಿಯಲ್ಲಿ ದಿನ ಕಳೆಯುತ್ತಿದ್ದ.ಮಾರನೆಯ



ದಿನವೂ ಆತ ಊರಿನಲ್ಲಿ ಅಲ್ಲಲ್ಲಿ ಅಲೆಯುತ್ತಿರುವುದು ಕಂಡುಬಂದ ಹಿನ್ನೆಲೆಯಲ್ಲಿ ರಘುಪತಿ ಅವರು ವಿಪತ್ತು ನಿರ್ವಹಣಾ ಘಟಕದ ಸಂಯೋಜಕರಾದ ಚಂದ್ರಶೇಖರಯ್ಯ ಅವರ ಗಮನಕ್ಕೆ ತಂದರು. ಅವರಿಂದಲೂ ಸಹಕಾರ ದೊರಕಿತು.

## ಅನಾಥಾಶ್ರಮಕ್ಕೆ ಸೇರ್ಪಡೆಗೆ ನಿರ್ಧಾರ:

ಖಾಂಡ್ಯ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಒಂದೆಡೆ ಸೇರಿ ಚರ್ಚಿಸಿ ಆ ವ್ಯಕ್ತಿಯನ್ನು ಯಾವುದಾದರೂ ಆಶ್ರಮಕ್ಕೆ ಸೇರಿಸಬೇಕು ಎಂದು ನಿರ್ಧರಿಸಿದರು. ರಘುಪತಿ ಅವರು ತಮಗೆ ಪರಿಚಯ ಇರುವ ಹಲವಾರು ವ್ಯಕ್ತಿಗಳನ್ನು, ಗಣ್ಯರನ್ನು, ಸಂಘಟನೆಗಳನ್ನು ಸಂಪರ್ಕಿಸಿದರು.ನಿರ್ಗತಿಕರ ಕೇಂದ್ರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪೋಲಿಸ್ ಠಾಣೆ, ಕೆಲವು ಸಮಾಜ ಸೇವಕರು, ಪತ್ರಕರ್ತರು ಹೀಗೆ ಎಷ್ಟು ಸಾಧ್ಯವೋ ಅಷ್ಟು ಪರಿಚಿತರನ್ನು ಸಂಪರ್ಕಿಸಿ ವಿಚಾರಿಸಿದರು.ಮಂಗಳೂರಿನಲ್ಲಿ ಇರುವ ಆಶ್ರಮಕ್ಕೆ ಬಿಟ್ಟು ಬರುವಂತೆ ಸಲಹೆಯೂ ಬಂತು. ಎಲ್ಲರ ಅಭಿಪ್ರಾಯಗಳನ್ನು ಆಲಿಸಿದ ಸ್ವಯಂಸೇವಕ ರಘುಪತಿ ಅವರು ಈ ಕುರಿತಂತೆ ವಿಪತ್ತು ನಿರ್ವಹಣಾ ತಾಲ್ಲೂಕು ಘಟಕದ ಸ್ವಯಂಸೇವಕರಲ್ಲಿ ಅಭಿಪ್ರಾಯ ಕೇಳಿದ್ದರು.

## ಹಲವರಿಂದ ಬೆಂಬಲ:




ಸ್ವಯಂಸೇವಕರು ಮಾಡುತ್ತಿರುವ ಸಾಮಾಜಿಕ ಸೇವಾಕಾರ್ಯಕ್ಕೆ ಹಲವರಿಂದ ಬೆಂಬಲ ವ್ಯಕ್ತವಾಯಿತು. ಕಳಸ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಾದ ಅಶೋಕ್ ಕುಮಾರ್ ಅವರು ವಿಶೇಷ ಕಾಳಜಿ ವಹಿಸಿ ರಘುಪತಿ ಅವರ ಬೆಂಬಲಕ್ಕೆ ನಿಂತರು.ಪೋಲಿಸ್ ಠಾಣೆಯನ್ನು ಭೇಟಿ ಮಾಡಿದರು. ಸಮೀಪದ ಅನಾಥಾಶ್ರಮಕ್ಕೆ ತೆರಳಿ ಅಲ್ಲಿನ ಮುಖ್ಯಸ್ಥರಾದ ಬಿಬಿನ್ ಜೋಸ್ ಅವರಲ್ಲಿ ಚರ್ಚಿಸಿ ಪತ್ರವನ್ನು ನೀಡಿದರು.ಕಳಸ ಸಮೀಪದ ದೇವರಗುಡ್ಡ ಎಂಬಲ್ಲಿನ "ದಿವ್ಯ ಕಾರುಣ್ಯಾಲಯ" ಅನಾಥಾಶ್ರಮದಲ್ಲಿ ಉತ್ತರ ಪ್ರದೇಶ ಮೂಲದ ಅನಾಥ ವ್ಯಕ್ತಿಗೆ ಆಶ್ರಯಕ್ಕೆ ನೆಲೆ ದೊರೆತಂತಾಯಿತು.ಆರೋಗ್ಯದ ವಿಷಯದಲ್ಲಿ ವಿಚಲಿತನಾಗಿರುವಂತೆ ಕಂಡುಬಂದ ಹಿನ್ನೆಲೆಯಲ್ಲಿ ಸ್ವಯಂಸೇವಕರು ಆತನನ್ನು ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಚಿಕಿತ್ಸೆಯನ್ನು ಕೊಡಿಸಿದ್ದಾರೆ. ಕೋವಿಡ್ ಪರಿಶೀಲನೆ ಮಾಡಿಸಿದ್ದಾರೆ.ಕುರೂಪಿಯಾಗಿದ್ದ ಆತನನ್ನು ಒಂದೆಡೆ ಕುಳ್ಳರಿಸಿ ಸ್ನಾನ ಮಾಡಿಸಿ, ತಲೆ ಕೂದಲು ಕತ್ತರಿಸಿ, ಶೇವ್ ಮಾಡಿಸಿ ಬಟ್ಟೆಗಳನ್ನು ತೊಡಿಸಿ ಮಾನವೀಯತೆ ಮೆರೆದಿದ್ದಾರೆ.ಖಾಂಡ್ಯ ಹಾಗೂ ಕಳಸ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಇಂದು ಅಂದರೆ ದಿನಾಂಕ 15.02.2021 ರಂದು ಅಪರಿಚಿತ ಆ ವ್ಯಕ್ತಿಯನ್ನು ಆಶ್ರಮಕ್ಕೆ ದಾಖಲಿಸಿದ್ದಾರೆ. ಆತನ ಬದುಕು ಇನ್ನೊಂದು ಮಗ್ಗುಲಿಗೆ ಹೊರಳುವಂತೆ ಮಾಡಿದ್ದಾರೆ. ಆತನ ಮುಖದಲ್ಲಿ ಮಂದಹಾಸ ಮೂಡಿದೆ.ರೈಲು ಹತ್ತಿ ಎಲ್ಲಿ ತೋಚುತ್ತೋ ಅಲ್ಲೆಲ್ಲಾ ಸುತ್ತಾಡಿ ಖಾಂಡ್ಯ ಗ್ರಾಮಕ್ಕೆ ಬಂದ ಈತನ ಸುಳಿವು ರಘುಪತಿ ಅವರ ಗಮನಕ್ಕೆ ಬಂದಿದ್ದೇ ಆತನಿಗೆ ವರವಾಗಿ ಪರಿಣಮಿಸಿದೆ. ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರ ಸೇವಾಕಾರ್ಯ ಸರ್ವರ ಮೆಚ್ಚುಗೆಗೆ ಪಾತ್ರವಾಗಿದೆ.ಕಳಸ ಘಟಕದ ಸ್ವಯಂಸೇವಕರಾದ ಅಶೋಕ್ ಕುಮಾರ್ ಸಿ, ಮೃತ್ಯುಂಜಯ ಆಚಾರ್, ಮಂಜುನಾಥ್, ಸೇವಾಪ್ರತಿನಿಧಿ ಸುಧಾಕರ್ ಹಾಗೂ ಖಾಂಡ್ಯ ಘಟಕದ ರಘುಪತಿ ಹಾಗೂ ಚಂದ್ರಶೇಖರಯ್ಯ ವಿಶೇಷವಾದ ಕಾಳಜಿ ವಹಿಸಿದ್ದಾರೆ.

***************

# 26. ಪೊಲೀಸ್ ಇಲಾಖೆಯೊಂದಿಗೆ ಶೌರ್ಯ ಶ್ರೀ ಧರ್ಮಸ್ಥಳ ತಂಡ ಲಕ್ಷಾಂತರ ಮಂದಿ ಸೇರುವ ಜಾತ್ರೆಯಲ್ಲಿ ಭದ್ರತಾ ವ್ಯವಸ್ಥೆಗೆ ಶೌರ್ಯ ತಂಡವನ್ನು ನಿಯೋಜಿಸಿದ ಪೊಲೀಸ್ ಇಲಾಖೆ




ಖಾನಾಪುರ, ಫೆಬ್ರವರಿ 10: ಐತಿಹಾಸಿಕ ಹಿನ್ನೆಲೆ ಹೊಂದಿರುವ ಕ್ಷೇತ್ರ ನಂದಗಡದ ಗ್ರಾಮ ದೇವತೆ ಶ್ರೀ ಲಕ್ಷ್ಮೀ ದೇವಿಯ ಜಾತ್ರೆಯು 25 ವರ್ಷಗಳ ನಂತರ ನಡೆಯುತ್ತಿರುವ ಹಿನ್ನೆಯಲ್ಲಿ ಮೂರು ಲಕ್ಷಕ್ಕೂ ಅಧಿಕ ಭಕ್ತಾದಿಗಳು ಆಗಮಿಸುವ ಸಂಭವನೀಯತೆ ಇರುವುದರಿಂದ ಭದ್ರತೆಯ ದೃಷ್ಟಿಯಿಂದ ಪೊಲೀಸ್ ಇಲಾಖೆಯು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್(ರಿ) ಯ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ತಂಡದ ಸಹಕಾರ ಕೋರಿ ಪತ್ರ ಬರೆದಿದೆ.

## 10 ದಿನ ಜಾತ್ರೆ:

ನಂದಗಡ ಗ್ರಾಮದಲ್ಲಿ ಇದೇ ಬರುವ 12 ರಂದು ಆರಂಭವಾಗಲಿರುವ ಜಾತ್ರೆಯು 22 ರ ವರೆಗೆ ನಡೆಯಲಿದೆ. ರಾಜ್ಯದ ಭಕ್ತಾದಿಗಳು ಮಾತ್ರವಲ್ಲದೇ ನೆರೆಯ ಮಹಾರಾಷ್ಟ್ರ, ಗೋವಾ ರಾಜ್ಯಗಳಿಂದಲೂ ಭಕ್ತಾದಿಗಳು ಬರುವುದರಿಂದ ಸೂಕ್ತ ಭದ್ರತೆ, ಜನಸಂದಣಿ ನಿಯಂತ್ರಣೆ, ಟ್ರಾಫಿಕ್ ನಿಯಂತ್ರಣೆ ಸವಾಲಿನ ಕೆಲಸವಾಗಿದೆ. ಭದ್ರತಾ ಸಿಬ್ಬಂದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಗತ್ಯವಿದ್ದು ಪರಿಣಿತರಾಗಿರಬೇಕಾದ ಅವಶ್ಯಕತೆ ಇರುವುದರಿಂದ ಪೊಲೀಸ್ ಇಲಾಖೆಯು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ, ಎನ್.ಡಿ.ಆರ್.ಎಫ್ ಮೂಲಕ ತರಬೇತಿ ಪಡೆದಿರುವ ಸಂಘಟನೆಯಾದ 'ಶೌರ್ಯ' ವಿಪತ್ತು ನಿರ್ವಹಣಾ ಸಮಿತಿಗೆ ಅವಕಾಶ ಒದಗಿಸಿದೆ.

## ಪತ್ರ ಬರೆದ ಪೊಲೀಸ್ ಇಲಾಖೆ:



ನಂದಗಡ ಪೊಲೀಸ್ ಠಾಣೆಯ ಠಾಣಾಧಿಕಾರಿಯವರಾದ ಶ್ರೀಯುತ ಸಿ ಸಿ ಪಾಟೀಲ್ ರವರು ಭದ್ರತಾ ವ್ಯವಸ್ಥೆಗೆ ಸ್ವಯಂಸೇವಕರನ್ನು ಅಪೇಕ್ಷಿಸಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿಗಳಿಗೆ ಪತ್ರ ಮಾಡಿತ್ತು. ಪೂರ್ವಭಾವಿ ತರಬೇತಿಯನ್ನು ನಂದಗಡ

ಪೊಲೀಸ್ ಠಾಣೆಯ ಆವರಣದಲ್ಲಿ ನೀಡಿದರು. ಭದ್ರತೆಯ ಜೊತೆಗೆ ಭಕ್ತರ ಆರೋಗ್ಯ ಸ್ಥಿತಿ, ಜನರ ಹಿತಾಸಕ್ತಿ, ಊಟ ಉಪಚಾರ, ಶೌಚ, ಸ್ವಚ್ಚತೆ ಮತ್ತು ಸುವ್ಯವಸ್ಥೆಯ ಬಗ್ಗೆ ಮಾಹಿತಿ ನೀಡಿದರು. ಜನರೊಂದಿಗೆ ಸಭ್ಯವಾಗಿ ನಡೆದುಕೊಳ್ಳುವುದು, ಮಾತಿನ ಚಕಮಕಿ ನಡೆಸದೇ ಶಾಂತಚಿತ್ತರಾಗಿ ಪರಿಸ್ಥಿತಿಯನ್ನು ನಿಭಾಯಿಸುವ ಬಗ್ಗೆ ಸ್ವಯಂಸೇವಕರಿಗೆ ತರಬೇತಿ ನೀಡಿದರು.

**ತರಬೇತಿ ನೀಡಿದ ಪೊಲೀಸರು:**

ಭದ್ರತಾ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ಹೆಸರು ನೋಂದಾಯಿಸಿದ ಶೌರ್ಯ ವಿಪತ್ತು ನಿರ್ವಹಣಾ ಸಮಿತಿಯ ಸ್ವಯಂಸೇವಕರಿಗೆ ಪೊಲೀಸ್ ಇಲಾಖೆಯಿಂದ ಕ್ಯಾಪ್, ರಿಫ್ಲೆಕ್ಟರ್ ಜಾಕೆಟ್, ಮಾಸ್ಕ್ ಪೂರೈಸಲಾಗಿದೆ. ಬೆಳಗ್ಗಿನ ಜಾವ ೩ ಗಂಟೆಯಿಂದಲೇ ಸ್ವಯಂಸೇವಕರು ಕರ್ತವ್ಯ ನಿರ್ವಹಣೆ ಆರಂಭಿಸಬೇಕಾಗಿದ್ದು, ಸುಗಮ ಕೆಲಸಕ್ಕೆ ಅನುಕೂಲವಾಗುವಂತೆ ನಾಲ್ಕು ಜನರಂತೆ ತಲಾ ಒಂದೊಂದು ತಂಡವನ್ನು ರಚಿಸಿ ವಿವಿಧ ಸ್ಥಳಗಳಿಗೆ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಪ್ರತಿ ನಾಲ್ಕು ಜನರ ಸ್ವಯಂಸೇವಕರ ತಂಡಕ್ಕೆ ಓರ್ವ ಪೊಲೀಸ್ ಸಿಬ್ಬಂದಿ ಮಾರ್ಗದರ್ಶನ ನೀಡಲಿದ್ದಾರೆ.

**ಭದ್ರತೆಗೆ ಸಿದ್ಧಗೊಂಡ ಶೌರ್ಯ ತಂಡ:**

ಯಾವುದೇ ಘಟನೆಗಳು ನಡೆದರೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡಲು ತಿಳಿಸಿದ್ದು ಸ್ವಯಂಸೇವಕರು ಜವಾಬ್ದಾರಿ ನಿರ್ವಹಣೆಗೆ ಸಜ್ಜುಗೊಂಡಿದ್ದಾರೆ. ಖಾನಾಪುರ ತಾಲ್ಲೂಕು ಯೋಜನಾಧಿಕಾರಿಯವರಾದ ಶ್ರೀ ಗಣಪತಿ ನಾಯ್ಕ್ ಇವರ ಮಾರ್ಗದರ್ಶನದಲ್ಲಿ ಶೌರ್ಯ ತಂಡಗಳು ತಮಗೆ ದೊರಕಿರುವ ಅವಕಾಶವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನೀಡಲಾದ ರಕ್ಷಣಾ ಪರಿಕರಗಳನ್ನು ಬಳಸಿಕೊಂಡು ಶಿಸ್ತಿನಿಂದ, ಬದ್ಧತೆಯಿಂದ ನಿರ್ವಹಿಸಲು ಯೋಜನೆ ರೂಪಿಸಿದೆ.

ಜಾತ್ರಾ ಮಹೋತ್ಸವದ ಭದ್ರತೆಯ ಕುರಿತಂತೆ ಪೂರ್ವ ಸಿದ್ಧತಾ ಸಭೆಯು ಪೊಲೀಸ್ ಠಾಣೆ ನಂದಗಡದಲ್ಲಿ ನಡೆದಿದ್ದು ಸಿ.ಪಿ.ಐ ಶ್ರೀ ಸಿ. ಸಿ ಪಾಟೀಲ್ ಖಾನಾಪುರ ತಾಲೂಕಿನ ಯೋಜನಾಧಿಕಾರಿ ಶ್ರೀ ಗಣಪತಿ ನಾಯ್ಕ, ಪೊಲೀಸ್ ಇಲಾಖೆ ಅಧಿಕಾರಿಗಳು, ಫೇಸ್ಬುಕ್ ಗ್ರೂಪ್ ನಿರ್ವಹಣಾ ಪೊಲೀಸ್ ಅಧಿಕಾರಿಗಳು, ವಲಯ ಮೇಲ್ವಿಚಾರಕರು, ಸಂಯೋಜಕರು, ಮಾಸ್ಟರ್, ಕ್ಯಾಪ್ಟನ್, ಘಟಕ ಪ್ರತಿನಿಧಿಗಳು ಹಾಗೂ ಸ್ವಯಂ ಸೇವಕರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಗ್ರಾಮದಲ್ಲಿ ಪರೇಡ್ ನಡೆಸುವ ಮೂಲಕ ಜಾಗೃತಿ ಮೂಡಿಸಲಾಯಿತು.



## 27. ಬಡ ಕುಟುಬವೊಂದಕ್ಕೆ ಉಚಿತವಾಗಿ ಶೌಚಾಲಯ ರಚಿಸಿದ ಸ್ವಯಂಸೇವಕ.



ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡದ ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಘಟಕದ ಸ್ವಯಂಸೇವಕರಾದ ನಾರಾಯಣ ಗೌಡ ಅವರು ಬಡ ಕುಟುಂಬವೊಂದಕ್ಕೆ ಉಚಿತವಾಗಿ ಶೌಚಾಲಯ ರಚಿಸಿಕೊಟ್ಟು ಮಾದರಿ ಕಾರ್ಯ ಮಾಡಿದ್ದಾರೆ.

ರೆಕ್ಯ ಗ್ರಾಮದ ಕೆಲೆಂಜಿನೋಡಿ ಎನ್ನುವ ಕಾಡಿನಿಂದ ಕೂಡಿರುವ ಪ್ರದೇಶದಲ್ಲಿ ಗಿರಿಜಾ ಅವರ ಕುಟುಂಬ ವಾಸವಿದೆ. ಆರ್ಥಿಕವಾಗಿ ಬಹಳ ಕಷ್ಟದ ಸ್ಥಿತಿಯಲ್ಲಿ ಇದ್ದುದರಿಂದ ಅವರಿಗೆ ಶೌಚಾಲಯ ರಚಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ತನ್ನ ಮಗಳೊಂದಿಗೆ ವಾಸವಾಗಿದ್ದ ಇವರ ಕುಟುಂಬದಲ್ಲಿ ಶೌಚಕ್ಕಾಗಿ ಬಯಲನ್ನು ಆಶ್ರಯಿಸಬೇಕಾಗಿತ್ತು.

ಈ ಕುಟುಂಬದ ಸಮಸ್ಯೆಯನ್ನು ಗುರುತಿಸಿದ ಸ್ಥಳೀಯ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಧರ್ಮರಾಜ್ ಅಡ್ಕಾಡಿ ಅವರು ಶೌಚಾಲಯ ಕಟ್ಟಿಸಲು ಅಗತ್ಯವಿರುವ ಇಟ್ಟಿಗೆ, ಸಿಮೆಂಟ್, ಉಸುಕುಗಳನ್ನು ಒದಗಿಸಿದ್ದರು. ಕಟ್ಟಿಕೊಳ್ಳುವಂತೆ ಮನವಿ ಮಾಡಿದ್ದರು. ಆದಾಗ್ಯೂ ಈ ಕುಟುಂಬ ಶೌಚಾಲಯ ಕಟ್ಟುವ ಗೋಜಿಗೆ ಹೋಗಿರಲಿಲ್ಲ. ದುಡಿಮೆಗಾಗಿ ಕೂಲಿ ಮಾಡಿಕೊಂಡಿದ್ದ ಇವರಿಗೆ ಶೌಚಾಲಯ ಕಟ್ಟಿಕೊಟ್ಟ ಗಾರೆ ಕೆಲಸದವರಿಗೆ ನೀಡುವ ಬಾಪ್ತು ಕೊಡುವುದು ಸಹ ಅವರಿಗೆ ಕಷ್ಟವಿತ್ತು. ಕೇವಲ ಗಾರೆ ಕೆಲಸದವರಿಗೆ ಮಾತ್ರ ಹಣ ಕೊಟ್ಟು ಶೌಚಾಲಯ ಕಟ್ಟಿಕೊಳ್ಳುವುದಾದರೆ ಕಟ್ಟಿಸಿ ಕೊಳ್ಳುತ್ತಿದ್ದರೋ ಏನೋ. ಆದರೆ ಅವರ ಸಮಸ್ಯೆ ಏನೆಂದರೆ ಅವರ ಮನೆ ಇರುವುದು ಯಾವುದೇ ವಾಹನ ಬರದಷ್ಟು ದುರ್ಗಮ ಸ್ಥಳದಲ್ಲಿ. ರೆಕ್ಯ ಗ್ರಾಮದಿಂದ ಇವರ ಮನೆಗೆ ತಲುಪಲು ಎರಡು ಕಿಲೋಮೀಟರ್ ನಡೆಯಬೇಕು.

ಶೌಚಾಲಯ ಕಟ್ಟಿಸುವುದಾದಲ್ಲಿ ಎರಡು ಕಿಲೋಮೀಟರ್ ದೂರದವರೆಗೆ ತಲೆಹೊರೆಯಲ್ಲಿ ಇಟ್ಟಿಗೆ, ಉಸುಕು, ಸಿಮೆಂಟ್ ಜಲ್ಲಿಗಳನ್ನು ಸಾಗಿಸಬೇಕು. ಇದು ಬಹಳ ವೆಚ್ಚದಾಯಕ. ಕೂಲಿಯಾಳುಗಳಿಗೆ ನೀಡಲು ನೀಡುವ ಹಣವೂ ಜಾಸ್ತಿಯಾಗುತ್ತದೆ. ಒಂದೆರಡು ದಿನದಲ್ಲಿ ಮುಗಿದು ಹೋಗುವ ಕೆಲಸವೂ ಇದಲ್ಲ. ಈ ಕಾರಣದಿಂದಾಗಿಯೇ ಆ ಕುಟುಂಬ ಶೌಚಾಲಯ ನಿರ್ಮಿಸುವ ಗೋಜಿಗೆ ಹೋಗಿರಲಿಲ್ಲ. ಸಹೃದಯಿಗಳಾದ ಪಂಚಾಯತಿ ಸದಸ್ಯರು ನೀಡಿದ ಸಲಕರಣೆಗಳನ್ನೂ ಬಳಸಿಕೊಂಡಿರಲಿಲ್ಲ.



ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಘಟಕದ ಸ್ವಯಂಸೇವಕರಾದ ನಾರಾಯಣ ಗೌಡ ಅವರು 'ಪೂಜ್ಯರ ಸಾಮಾಜಿಕ ಸೇವಾ ಕಾರ್ಯಕ್ರಮ ಭಾಗವಾದ ವಿಪತ್ತು ನಿರ್ವಹಣೆಯ ಕಾರ್ಯಕ್ರಮದಲ್ಲಿ ತಾನು ಸದಸ್ಯತ್ವ ಪಡೆದಿದ್ದು, ಆ ಕುಟುಂಬದ ಪಾಲಿಗೆ ಅನಾನುಕೂಲತೆಗೆ ಕಾರಣವಾಗಿದ್ದ ಶೌಚಾಲಯವನ್ನು ಸೇವಾಕಾರ್ಯದ ಮೂಲಕ ಏಕೆ ಕಟ್ಟಿಕೊಡಬಾರದು?' ಮನಗಂಡು ಶ್ರಮ ವಹಿಸಲು ಸಿದ್ಧರಾದರು. ತನ್ನ

ಆಲೋಚನೆಯನ್ನು ವಿಪತ್ತು ನಿರ್ವಹಣೆ ಘಟಕದ ಸ್ವಯಂಸೇವಕರಲ್ಲಿ ಹಂಚಿಕೊಂಡರು. ಸ್ಥಳೀಯರ ಸಹಕಾರ ಮತ್ತು ಸ್ವಯಂಸೇವಕರ ಸಹಾಯ ಪಡೆದು ತಲೆಹೊರೆಯಲ್ಲಿ ಇಟ್ಟಿಗೆ, ಉಸುಕು, ಸಿಮೆಂಟ್, ಜಲ್ಲಿ, ಗುಂಡಿಯ ರಿಂಗ್‌ನ್ನು ಸಾಗಿಸಿದರು.

ಎರಡು ದಿನದಲ್ಲಿ ಎಲ್ಲಾ ವಸ್ತುಗಳು ಎರಡು ಕಿಲೋಮೀಟರ್ ದೂರದಲ್ಲಿರುವ ಗಿರಿಜಾ ಅವರ ಮನೆ ಸೇರಿತ್ತು. ಸ್ವತಃ ಗಾರೆ ಕೆಲಸ ಮಾಡುವ ನಾರಾಯಣ ಅವರು ಶೌಚಾಲಯದ ಕಟ್ಟಡವನ್ನು ನಿರ್ಮಿಸತೊಡಗಿದರು. ಏಕಾಂಗಿಯಾಗಿ ಗೋಡೆಗಳಿಗೆ ಪ್ಲಾಸ್ಟರಿಂಗ್ ಮುಗಿಸಿಕೊಟ್ಟರು. ಬೇಸಿನ್ ಅಳವಡಿಸಿ, ಗುಂಡಿ ತೆಗೆದು ರಿಂಗ್ ಅಳವಡಿಸಿ ಶೌಚಾಲಯ ರಚನೆಯ ಸೇವೆ ಪೂರ್ತಿಗೊಳಿಸಿದರು.

ನಾರಾಯಣ ಗೌಡ ಅವರ ವೃತ್ತಿ ಗಾರೆ ಕೆಲಸವಾಗಿದ್ದರಿಂದ ಅವರು ತನಗೆ ಗೊತ್ತಿರುವ ಕೌಶಲ್ಯವನ್ನು ಕುಟುಂಬವೊಂದಕ್ಕೆ ಒಳಿತಾಗುವ ನಿಟ್ಟಿನಲ್ಲಿ ಬಳಸಿಕೊಂಡಿದ್ದಾರೆ. ಶ್ರಮದಾನ ನಡೆಸಿ ಯಾವುದೇ ಸಂಭಾವನೆ ಪಡೆಯದೇ ಉಚಿತವಾಗಿ ಶೌಚಾಲಯ ಕಟ್ಟಿಕೊಟ್ಟು ನಾರಾಯಣ ಅವರು ಮಾನವೀಯತೆ ಮೆರೆದಿದ್ದಾರೆ. ಇವರ ಸೇವಾಕಾರ್ಯ ಸ್ಥಳೀಯರ ಮೆಚ್ಚುಗೆಗೆ ಪಾತ್ರವಾಗಿದೆ.

## 28. ಹುಲಿ ದಾಳಿಯಿಂದ ಗಾಯಗೊಂಡ ಆಕಳು: ಪ್ರಾಥಮಿಕ ಚಿಕಿತ್ಸೆ ನೀಡಿ ವಾರಸುದಾರರಿಗೆ ತಲುಪಿಸಿದ ಸ್ವಯಂಸೇವಕರು




'ಜಡ್ಡಿಗದ್ದೆಯ ಮಂಜುನಾಥ್ ಭಟ್ ಅವರ ಅಡಿಕೆ ತೋಟದ ಬದಿಯಲ್ಲಿ ಆಕಳೊಂದು ಬೆನ್ನು ಮೂಳೆ ಮುರಿದುಕೊಂಡು ಬಿದ್ದಿದೆ. ಅದಕ್ಕೆ ಎದ್ದು ನಿಲ್ಲಲು ಆಗುತ್ತಿಲ್ಲ. ಹೊರಳಾಡಲೂ ಸಂಕಟ ಪಡುತ್ತಿದೆ. ತೀವ್ರ ನೋವು ಅನುಭವಿಸುತ್ತಿದೆ. ಆ ಮೂಖ ಪ್ರಾಣಿಯ ನರಳಾಟ ನೋಡಲಾಗುತ್ತಿಲ್ಲ. ಬಿದ್ದಲ್ಲಿಯೇ ಇದ್ದು ಎರಡು ದಿನ ಆಯ್ತಂತೆ. ಯಾರೂ ನೋಡಿರಲಿಲ್ಲ. ಇಂದು ಮುಂಜಾನೆ ತೋಟದ ಕೆಲಸದವರು ಗಮನಿಸಿದ್ದಾರೆ. ಆಕಳ ಪರಿಸ್ಥಿತಿ ಬಹಳ ಕಷ್ಟದಲ್ಲಿದೆ', ಹೀಗೊಂದು ಸುದ್ದಿ ಕಿವಿಗೆ ಬಿದ್ದ ತಕ್ಷಣ ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಘಟಕದ ಸಂಯೋಜಕ ಮಾರುತಿ ಅಂಬಿಗ ಸ್ವಯಂಸೇವಕರೊಬ್ಬರ ಜೊತೆಗೂಡಿ ತೋಟದತ್ತ ಧಾವಿಸಿದ್ದರು. ಕೊಡ್ಲಗದ್ದೆ ಗ್ರಾಮದಿಂದ ಆರು ಕಿಲೋಮೀಟರ್ ದೂರದಲ್ಲಿ ಆ ತೋಟವಿದೆ. ಕಾಡಿನ ನಡುವಿರುವ ತೋಟವದು. ಸುತ್ತಮುತ್ತ ಯಾವುದೇ ಮನೆಗಳು ಅಲ್ಲಿಲ್ಲ.

ಹೌದು, ಅಲ್ಲಿ ಆಕಳು ನೋವಿನಿಂದ ನರಳುತ್ತಿತ್ತು. ಗಾಯಗೊಂಡ ಸ್ಥಳದಲ್ಲಿ ರಕ್ತ ಇಳಿದು ದೇಹದಲ್ಲಿಯೇ ಗಟ್ಟಿಯಾಗಿತ್ತು. ಅಂಟಿಕೊಂಡ ರಕ್ತದ ಕಲೆಯೇ ಸಾರಿ ಹೇಳದಂತಿತ್ತು, ಈ ಆಕಳು ವಿಪತ್ತಿಗೆ ಸಿಲುಕಿ ಮೂರು ದಿನ ಕಳೆಯಿತೆಂದು. ಆಕಳು ನರಳುತ್ತಿದೆ. ದೇಹವನ್ನು ಅತ್ತಿಂದ ಇತ್ತ ಸರಿದಾಡಲು ಸಹ ಸಾಧ್ಯವಾಗದೇ ಒಂದೇ ಮಗ್ಗುಲಲ್ಲಿ ಮಲಗಿದೆ. ಬಹಳಷ್ಟು ತೊಂದರೆ ಪಡುತ್ತಿದೆ.

ದಟ್ಟ ಕಾಡಿನ ಬದಿಯಲ್ಲಿ ಇರುವ ಅಡಿಕೆ ತೋಟವದು. ತೋಟದ ಸುತ್ತಲೂ ಕಲ್ಲಿನ ಕಂಪೌಂಡ್ ರಚಿಸಲಾಗಿತ್ತು. ತೋಟದ ತುದಿಯಲ್ಲಿರುವ ಆ ಕಲ್ಲಿನ ಪಾಗಾರದ ಪಾರ್ಶ್ವದಲ್ಲಿಯೇ ಆಕಳು ಬಿದ್ದುಕೊಂಡಿತ್ತು. ಊರಿನ ಆಕಳುಗಳು ಮೇಯಲು ಅದೇ ಸ್ಥಳಕ್ಕೆ ಬರುತ್ತವೆ. ದನದ ಹಾವಳಿ ತಪ್ಪಿಸಿಕೊಳ್ಳಲೆಂದೇ ತೋಟದ ಮಾಲಕರು ಕಂಪೌಂಡ್ ಕಟ್ಟಿರುವುದು. 'ಮಾಮೂಲಿನಂತೆ ಮೇಯಲು ಬಂದ ಆಕಳು ತೋಟವನ್ನು ದಾಟಿ ಕಾನಿಗೆ ನುಗ್ಗಿತ್ತು. ಭರ್ತಿ ಮೇಯ್ದಿತ್ತು. ಅದನ್ನು ನೋಡಿದ ಹುಲಿಯೊಂದು ಕಟ್ಟುಮಸ್ತಾಗಿರುವ ಆಕಳನ್ನು ಅಟ್ಟಿಸಿಕೊಂಡು ಬಂದಿತ್ತು. ಭಯಗೊಂಡ ಆಕಳು ಪ್ರಾಣ ರಕ್ಷಣೆಗಾಗಿ ಕಂಪೌಂಡ್ ಜಿಗಿದಿತ್ತು. ರಭಸದಿಂದ ಜಿಗಿದಾಗ ಪ್ರಾಣ ಭಯದಲ್ಲಿದ್ದ ಆಕಳು ಕಲ್ಲಿನ ಪಾಗಾರಕ್ಕೆ ಗುದ್ದಿ ಎಡವಿ ತೋಟಕ್ಕೆ ಬಂದು ಬಿದ್ದಿತ್ತು. ಆದುದರಿಂದಲೇ ಆಕಳ ಬೆನ್ನು ಮೂಳೆ ಈ ರೀತಿ ಮುರಿದಿರುವುದು' ಸ್ಥಳೀಯರು ವಿಶ್ಲೇಷಿಸುತ್ತಿದ್ದರು.




ಮೂರು ದಿನದ ನಂತರ ಆ ತೋಟದಲ್ಲಿ ಕೆಲಸಕ್ಕೆಂದು ಬಂದವರಿಗೆ ಆಕಳಿನ ಅರಣ್ಯ ರೋಧನ ಅರಿವಿಗೆ ಬಂದಿದೆ. ಆಕಳ ವಾರಸುದಾರರು ಯಾರೆಂದು ಗೊತ್ತಿರಲಿಲ್ಲ. ಸಿಕ್ಕ ಸಿಕ್ಕವರಲ್ಲಿ ಆಕಳ ಸ್ಥಿತಿಯ ಬಗ್ಗೆ ತಿಳಿಸಿ ಸಂಬಂಧಿಸಿದವರು ಬಂದು ಕೊಂಡೊಯ್ಯಲು ಮನವಿ ಮಾಡಿಕೊಳ್ಳುತ್ತಿದ್ದರು ಅಲ್ಲಿನ ಕಾರ್ಮಿಕರು.

ಆಕಳ ವಾರಸದಾರರು ಬರದಿದ್ದರೆ ಏನಂತೆ ಮಾನವೀಯ ನೆಲೆಯಲ್ಲಿ ಸಂಕಷ್ಟದಲ್ಲಿರುವ ಆಕಳನ್ನು ಮನೆಗೆ ಕೊಂಡೊಯ್ದಾದರೂ ರಕ್ಷಣೆ ನೀಡಬಹುದಲ್ಲವೇ? ಯೋಚನೆ ಮಾಡಿದವರು ಹಲವಿದ್ದರು. ಆದರೆ ಅದು ಸುಲಭದ ಮಾತಲ್ಲ ಎಂದರಿತು ಆಲೋಚನೆ ಕೈ ಬಿಟ್ಟಿದ್ದರು.

ಆಕಳು ಬಿದ್ದಿರುವ ಸ್ಥಳದಿಂದ ಜನವಸತಿ ಸ್ಥಳಕ್ಕೆ ತೆರಳಬೇಕೆಂದರೆ ಮೂರ್ನಾಲ್ಕು ಕಿಲೋಮೀಟರ್ ಕ್ರಮಿಸಬೇಕು. ಕಲ್ಲು ಮುಳ್ಳುಗಳಿರುವ ಸ್ಥಳವದು. ಕಿರು ಕಾಲು ದಾರಿ ಮಾತ್ರ ಅಲ್ಲಿದ್ದುದು. ಆ ಮಾರ್ಗವಾಗಿ ಜನ ಸಂಚಾರ ಅಪರೂಪವಾಗಿದ್ದರಿಂದ ಆ ಕಿರು ದಾರಿಯ ಕುರುಹು ಸಹ ಹೊಸದಾಗಿ ಹೋದವರಿಗೆ ತಿಳಿಯುತ್ತಿರಲಿಲ್ಲ. ಆ ಮಾರ್ಗದಲ್ಲಿ ಹೆಜ್ಜೆ ಇಡಬೇಕೆಂದರೆ ಕೈಯಲ್ಲಿ ಒಂದು ಕತ್ತಿ ಇರಲೇ ಬೇಕು. ದಾರಿಗೆ ಅಡ್ಡಲಾಗುವ ಗಿಡಗಳನ್ನು, ಕಾಲಿಗೆ ತಡವುವ ಮುಳ್ಳು ಕಂಟಿಗಳನ್ನು ಕತ್ತರಿಸಿ ದಾರಿ ಮಾಡಿಕೊಳ್ಳಲು ಹರಿತ ಕತ್ತಿಯ ಅವಶ್ಯಕತೆ. ಕಿರು ಸಂದಿಯಲ್ಲಿ ಕಷ್ಟದಲ್ಲಿಯೇ ಸಾಗಿದರೆ ಮಾರ್ಗಮಧ್ಯೆ ನೀರು ಹರಿಯುವ ಕೊಡ್ಲು ಬೇರೆ ಎದುರಾಗುತ್ತದೆ. ಬೆಣಚು ಕಲ್ಲುಗಳ ರಾಶಿ ಕಾಲಿಗೆ ಚುಚ್ಚುತ್ತವೆ. ಅಲ್ಲಲ್ಲಿ ಇರುವ ಗುಂಡಿಯಲ್ಲಿ ನೀರು ನಿಂತಿವೆ. ಸಣ್ಣ ಸಪ್ಪಳದೊಂದಿಗೆ ಜೀವಜಲ ಹರಿಯುವ ಆ ಕೊಡ್ಲು ದಾಟಲು ಹರಸಾಹಸದ ಅಗತ್ಯತೆಯೇ ಇದೆ.

ಪರಿಸ್ಥಿತಿ ಹೀಗಿರುವುದರಿಂದ ಯಾರೊಬ್ಬರೂ ಆಕಳನ್ನು ಕೊಂಡೊಯ್ಯಲು ಮನಸ್ಸು ಮಾಡಿರಲಿಲ್ಲ. ಜಾನುವಾರಿನ ವಾರಸುದಾರನೇ ಬಂದೊಯ್ಯಲಿ ಎನ್ನುವ ನಿಲುವಿಗೆ ಬಂದಿದ್ದರು. ಹಾಗೆಂದ ಮಾತ್ರಕ್ಕೆ ಆಕಳನ್ನು ಉಪವಾಸ ಬೀಳಿಸಿರಲಿಲ್ಲ. ಯಾರೋ ಒಬ್ಬರು ಹುಲ್ಲು ತಂದು ಹಾಕುತ್ತಿದ್ದರು. ಇನ್ಯಾರೋ ಒಣಮೇವು ತಂದಿಡುತ್ತಿದ್ದರು. ಮತ್ತ್ಯಾರೋ ನೀರು ತಂದು ಮುಂದಿಡುತ್ತಿದ್ದರು. ಆಕಳ ಸಮಸ್ಯೆ ಹಸಿವಿನದ್ದಾಗಿರಲಿಲ್ಲ. ಕಾಲು ಮುರಿದುಕೊಂಡು ಮಗ್ಗಲು ಬದಲಿಸಲೂ ಸಾಧ್ಯವಾಗದ ನೋವಿನ ಸಮಸ್ಯೆ ಅದರದ್ದಾಗಿತ್ತು.

ಪಶು ಆಸ್ಪತ್ರೆಗಾದರೂ ಒಯ್ಯೋಣವೆಂದರೆ ಅದೂ ಸವಾಲಿನದೇ. ಆರು ಕಿಲೋಮೀಟರ್ ಕಷ್ಟದ ಹಾದಿ ಎದುರಿಸಲೇ ಬೇಕು. ಹಾಗಾಗಿ ರಿಸ್ಕ್ ತೆಗೆದುಕೊಳ್ಳುವ ಗೋಜಿಗೆ ಯಾರೂ ಹೋಗಿರಲಿಲ್ಲ. ಅದು ಒಂದೆರಡು ಮಂದಿಯಿಂದ ಸಾಧ್ಯದ ಮಾತೂ ಆಗಿರಲಿಲ್ಲ.

ವಿಷಯ ತಿಳಿದ ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಘಟಕದ ಸಂಯೋಜಕ ಮಾರುತಿ ಅಂಬಿಗ ಆಕಳನ್ನು ನೋಡಲು ಬರುವಾಗ ಮೇವನ್ನು ಹಿಡಿದುಕೊಂಡು ಬಂದಿದ್ದರು. ಆಕಳ ಸ್ಥಿತಿಯನ್ನು ಸೂಕ್ಷ್ಮವಾಗಿ

ಅವಲೋಕಿಸಿದರು. ಅಲ್ಲಿಂದ ಹೊರಡುವಾಗ ಆಕಳೆದುರಿಗೆ ಸಾಕಷ್ಟು ಮೇವಿಟ್ಟು ಮನೆಗೆ ಮರಳಿದ್ದರು. ಊರಿಗೆ ತೆರಳಿದ ಮಾರುತಿ ಸುಮ್ಮನಿರಲಿಲ್ಲ. ಅವರ ತಂಡದ ಹದಿನೈದು ಮಂದಿ ಸ್ವಯಂಸೇವಕರಿಗೂ ದೂರವಾಣಿ ಕರೆ ಮಾಡಿ ಆಕಳ ಪರಿಸ್ಥಿತಿ ವಿವರಿಸಿದರು. ನಾಳೆಯೇ ಅದನ್ನು ಸುರಕ್ಷಿತ ಸ್ಥಳಕ್ಕೆ ರವಾನಿಸಲು ಸಹಾಯ ಕೋರಿದರು. ಸ್ವಯಂಸೇವಕರು ಒಲ್ಲೆಯೆನ್ನಲಿಲ್ಲ. ಮುಂಜಾನೆ ತೆರಳಿ ಆಕಳನ್ನು ಹೊತ್ತು ತರುವುದೆಂದು ತೀರ್ಮಾನವಾಯ್ತು.

ಊರು ತುಂಬಾ ಸುದ್ದಿ ಹರಡುತ್ತಿದ್ದಂತೆಯೇ ಹಸುವಿನ ಮಾಲಕ ಯಾರು ಎನ್ನುವುದು ಪತ್ತೆಯಾಯಿತು. ಆಕಳನ್ನು ನೋಡಿ ಬಂದ ಮಾಲಕ ಆರು ಕಿಲೋಮೀಟರ್ ದೂರದಿಂದ ವಾಹನ ತೆರಳದ ಸ್ಥಳದಿಂದ ಆಕಳನ್ನು ತರುವುದು ಕಷ್ಟ ನಿರ್ಧರಿಸಿ ಆತಂಕದಿಂದಿದ್ದ. ಕೂಲಿಯವರನ್ನು ಬಳಸಿಕೊಂಡು ತರೋಣವೆಂದರೆ ಅಂತಹ ಕೆಲಸಕ್ಕೆ ಜನವನ್ನು ಎಲ್ಲಿಂದ ಹುಡುಕುವುದು. ಮನಸ್ಸಿನಲ್ಲಿಯೇ ಮಂಡಿಗೆ ಹಾಕುತ್ತಾ ಗ್ರಾಮ ಪಂಚಾಯತಿಯತ್ತ ತೆರಳಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರ ಸಹಾಯ ಕೋರಿದ್ದ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಾದ ಗಿರೀಶ್ ನಾಯಕ್ ಅವರಿಗೆ ತಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಸ್ವಯಂಸೇವಕರ ಸೇವಾ ಕಾರ್ಯದ ಬಗ್ಗೆ ಅರಿವಿತ್ತು. ಆಕಳು ಕಳೆದುಕೊಂಡ ರೈತನಿಗೆ ಸಹಾಯ ಮಾಡುವಂತೆ ಸ್ವಯಂಸೇವಕರಲ್ಲಿ ದೂರವಾಣಿ ಕರೆ ಮಾಡಿ ವಿನಂತಿಸಿಕೊಂಡಿದ್ದರು. ತಕ್ಷಣ ಸ್ಪಂದಿಸಿದ ವಿಪತ್ತು ಸೇವಾ ಸಮಿತಿಯ ಸ್ವಯಂಸೇವಕರು ಆಕಳನ್ನು ಹೊತ್ತು ಮಾಲಿಕ ಚಂದ್ರಕಾಂತ್ ಮಡಿವಾಳರವರ ಮನೆಯ ವರೆಗೆ ತಲುಪಿಸಿ ಮಾನವೀಯತೆ ಮೆರೆದರು.

ಪಶುವಿಗೆ ಯಾವುದೇ ಅಪಾಯವಾಗದಂತೆ ಸಾಗಿಸಲು ಪೂರ್ವ ತಯಾರಿ ಶಿಸ್ತುಬದ್ಧವಾಗಿ ಮಾಡಿದ್ದರು. ಆಕಳ ಮುರಿದ ಕಾಲಿಗೆ ತೊಂದರೆ ಆಗದಂತೆ ಸೆಣಬಿನ ಚೀಲವನ್ನು ಜೋಡಿಸಿ ಆಕಳು ಮಲಗುವಷ್ಟು ವಿಸ್ತಾರವಾಗಿ ಹೊಲಿದರು. ಅದನ್ನು ಎರಡು ಉದ್ದನೆಯ ಕಂಬಕ್ಕೆ ಜೋಡಿಸಿ ಆಕಳು ಚೀಲದೊಳಗೆ ಮೆಲ್ಲನೆ ತೆರಳುವಂತೆ ಎತ್ತಿ ಹಾಕಿದರು. ತೋಟ, ಗದ್ದೆ, ಕಾಲುವೆ, ಹಳ್ಳವನ್ನು ದಾಟಿ ಆಕಳನ್ನು ಸಾಗಿಸಲಾಯಿತು. ಹೊತ್ತು ಸಾಗಿಸುವಾಗ ಮುಳ್ಳು ಕಂಟಿಗಳು ಕಾಲಿಗೆ ಚುಚ್ಚಿದವು. ಸಣ್ಣ ಪುಟ್ಟ ಗಾಯಗಳಾದವು. ಉರಿ ತಡೆಯಲಾಗದ ನೋವು ಕಾಲಿಗೆ ಚುಚ್ಚಿದ ಕಲ್ಲುಗಳಿಂದ ಉಂಟಾದವು. ಸ್ವಯಂಸೇವಕರಿಗೆ ಇವುಗಳೆಲ್ಲಾ ದೊಡ್ಡದೆನಿಸಲಿಲ್ಲ. ಆಕಳು ಎದುರಿಸುವ ನೋವಿನೆದುರಿಗೆ ಇದೆಂತಹ ನೋವು ಎಂದುಕೊಂಡು ಭಾರವಾದ ಹೆಜ್ಜೆಯನ್ನು ಕಿತ್ತಿಡತೊಡಗಿದ್ದರು.

ಹಟ ಬಿಡದೇ ಆರು ಕಿಲೋಮೀಟರ್ ದೂರದವರೆಗೆ ಹಸುವನ್ನು ಹೊತ್ತು ಸಾಗಿಸಲಾಯಿತು. ಆಕಳು ಸುರಕ್ಷಿತವಾಗಿತ್ತು. ಸ್ಥಳೀಯರಾದ ಶೇಖರ್ ಪಟಗಾರ ತಮ್ಮ ರಿಕ್ಷಾವನ್ನು ತಂದು ಆಕಳನ್ನು ರಿಕ್ಷಾಕ್ಕೇರಿಸಿ ಮನೆಯವರೆಗೆ ತಂದು ಬಿಟ್ಟರು. ತೋಟದ ಮಾಲಿಕರಾದ ಮಂಜುನಾಥ್ ಭಟ್ ಅವರು ಪಶುವಿನ ಚಿಕಿತ್ಸೆಗೆ ವೆಚ್ಚವಾದ ಹಣವನ್ನು ಭರಿಸಿದರು.

'ಅಷ್ಟೊಂದು ದೂರದಿಂದ ಆಕಳನ್ನು ಹೊತ್ತು ತರುವುದು ಅಸಾಧ್ಯವಾದ ಕೆಲಸ' ಜನ ಮಾತನಾಡಿಕೊಳ್ಳುತ್ತಿದ್ದರು. ಅಂತಹ ನಕಾರಾತ್ಮಕ ಮಾತುಗಳಿಗೆ ಕಿವಿ ಕೊಡದ ಸ್ವಯಂಸೇವಕರು ಅರಣ್ಯಕ್ಕೆ ತೆರಳಿ ಅಸಾಧ್ಯವೆಂದು ಬಗೆದಿದ್ದ ಕೆಲಸವನ್ನು ಮಾಡಿ ತೋರಿಸಿದ್ದರು. ಮೂಕ ಪ್ರಾಣಿಯ ವೇದನೆಯನ್ನು ತಗ್ಗಿಸಲು ತಮ್ಮದೇ ಆದ ಕೊಡುಗೆ ನೀಡಿದ್ದರು.

ಸ್ವಯಂಸೇವಕರಾದ ಮುಕುಂದ, ನಾಗರಾಜ್, ರಾಘವೇಂದ್ರ, ಕೃಷ್ಣ, ಗುರುರಾಜ್, ಮಹಾದೇವ, ಸುನೀಲ್, ಅರುಣ್, ಸ್ಥಳೀಯರಾದ ನರಸಿಂಹ ಸಿದ್ದಿ, ಶೇಖರ್, ಮಹದೇವ್, ಮಂಜುನಾಥ್ ಭಟ್, ಕೇಶವ್, ಪಶು ಇಲಾಖೆಯ ಕಂಪೌಂಡರ್ ವಿನಾಯಕ, ಪಶುವಿನ ಮಾಲೀಕರಾದ ಚಂದ್ರಕಾಂತ್ ಶ್ರಮ ವಹಿಸಿ ಆಕಳನ್ನು ರಕ್ಷಿಸಿದರು. ಸ್ವಯಂಸೇವಕರ ಈ ಸೇವಾಕಾರ್ಯ ಊರಿನ ನಾಗರಿಕರ ಮೆಚ್ಚುಗೆಗೆ ಪಾತ್ರವಾಯಿತು. ಪಂಚಾಯತಿ ಅಧಿಕಾರಿಗಳು ಸ್ವಯಂಸೇವಕರಿಗೆ ಅಭಿನಂದನೆ ಸಲ್ಲಿಸಿದರು.

## 29. ಕುಸಿದ ಗುಡ್ಡ, ಓರ್ವ ಮಣ್ಣಿನಡಿ; ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ವಿಪತ್ತು ಸೇವಾ ಸ್ವಯಂಸೇವಕರು



ಬೆಳ್ತಂಗಡಿ ತಾಲೂಕಿನ ಗಡಿ ಪ್ರದೇಶ ಎಳನೀರು-ಸಂಸೆ ಭಾಗದಲ್ಲಿ ಜಲಪಾತವೊಂದಿದೆ. ತೀರಾ ದುರ್ಗಮ ಪ್ರದೇಶದಲ್ಲಿರುವ ಅದು ಜನವಸತಿ ಸ್ಥಳದಿಂದ ಬಹು ದೂರದಲ್ಲಿದೆ. ಪರಿಶುದ್ಧವಾದ ಧುಮ್ಮಿಕ್ಕುವ ನೀರು, ಈಜಲು ಅನುಕೂಲವಾಗುವಂತೆ ವಿಶಾಲವಾಗಿರುವ ಬಲು ಆಳವಿಲ್ಲದ ಹೊಂಡ, ಮೌನ ಕಾಡಿನ ನಡುವೆ ಧುಮ್ಮಿಕ್ಕುವ ನೀರಿನ ನಾದ ಕಿವಿಗೆ ಇಂಪು. ಇಂತಹ ಅಪರೂಪದ ವೈಶಿಷ್ಟ್ಯ ಆ ಜಲಪಾತದ್ದಾಗಿದ್ದರಿಂದ ಸಹಜವಾಗಿಯೇ ಪ್ರವಾಸಿಗರು ಅಲ್ಲಿ ತೆರಳುತ್ತಾರೆ. ಈಜುತ್ತಾರೆ, ಮೇಲಿನಿಂದ ಬೀಳುವ ಜಲಧಾರೆಗೆ ಮೈಯೊಡ್ಡಿ ಆನಂದ ಪಡುತ್ತಾರೆ.

ಜನವರಿ 25, 2021 ರಂದು ಆ ಜಲಪಾತದಡಿಯಲ್ಲಿ ಶೋಚನೀಯ ವಾತಾವರಣ ಸೃಷ್ಟಿಯಾಗಿತ್ತು. ಜಲಪಾತದ ಪಾರ್ಶ್ವದಲ್ಲಿರುವ ಗುಡ್ಡವೊಂದು ಕುಸಿದು ನೀರು ತುಂಬಿದ ಹೊಂಡಕ್ಕೆ ಜರಿದಿತ್ತು. ಆ ಸಮಯ ಪ್ರವಾಸಕ್ಕೆಂದು ಬಂದಿದ್ದ ನಾಲ್ವರು ಯುವಕರು ಆ ನೀರಿನಲ್ಲಿ ಈಜುತ್ತಿದ್ದರು. ಸಂಭ್ರಮಿಸುತ್ತಿದ್ದರು. ಗುಡ್ಡ ಕುಸಿಯುತ್ತಿರುವ ಮುನ್ಸೂಚನೆ ಅವರಿಗೆ ಸಿಕ್ಕಿರಬೇಕು ದಿಕ್ಕಾಪಾಲಾಗಿ ಓಡತೊಡಗಿದರು. ಬೃಹತ್ ಬಂಡೆಗಳು ಉರುಳತೊಡಗಿದ್ದವು. ಮಣ್ಣು ದೊಪ್ಪನೆ ನೀರಿಗೆ ಬಿದ್ದಿತ್ತು. ಸುತ್ತಲಿದ್ದ ಬೃಹತ್ ಮರಗಳು ಕಲ್ಲುಬಂಡೆಗಳ ಹೊಡೆತಕ್ಕೆ ಸಿಲುಕಿ ಜರುಗಿ ಜಲಪಾತ ಸೇರಿತ್ತು. ಇವೆಲ್ಲಾ ಸರಸರನೆ ನಡೆದು ಹೋಗಿತ್ತು. ನೀರಿಗಿಳಿದ ಯುವಕರ ಓಟವೂ ಮಿಂಚಿನಂತೆ ಇತ್ತು.

ಜಲಪಾತದ ವೀಕ್ಷಣೆಗೆ ಬಂದಿದ್ದ ನಾಲ್ವರು ಯುವಕರ ಪೈಕಿ ಓರ್ವ ಯುವಕ ತಪ್ಪಿಸಿಕೊಳ್ಳಲಾಗಲಿಲ್ಲ. ಕುಸಿದ ಮಣ್ಣಿನಡಿಯಲ್ಲಿ ಸಿಲುಕಿಕೊಂಡ. ಆತನ ಸ್ನೇಹಿತರು ಬಚಾವಾಗಿದ್ದರು. ಕಣ್ಮರೆಯಾದ ಯುವಕ ಮಾತ್ರ ಎಲ್ಲಿ ಹೋಗಿದ್ದಾನೆಂದು ಯಾರಿಗೂ ಗೊತ್ತಾಗಲಿಲ್ಲ. ಮಣ್ಣಿನೊಳಗೆ ಹೂತು ಹೋದನೇ? ಕಾಡು ದಾರಿಯಿಂದ ದಿಕ್ಕು ತಪ್ಪಿ ತಪ್ಪಿಸಿಕೊಂಡನೇ? ಏನೂ ಅರಿಯದಂತಾಗಿತ್ತು.

ಜಲಪಾತವಿರುವ ಆ ಸ್ಥಳಕ್ಕೆ ವಾಹನಗಳು ಹೋಗುವ ಮಾರ್ಗವಿರಲಿಲ್ಲ. ಕಾರ್ಯಾಚರಣೆ ನಡೆಸಲು ಯಂತ್ರಗಳನ್ನೂ ಕೊಂಡೊಯ್ಯುವಂತಿರಲಿಲ್ಲ. ವಾಹನಗಳ ಸಂಚಾರವೂ ಇರದ ದುರ್ಗಮ ಸ್ಥಳ ಅದಾಗಿದ್ದರಿಂದ ಅಲ್ಲಿಗೆ ತೆರಳುವುದೇ ದೊಡ್ಡ ಸಾಹಸವಾಗಿತ್ತು. ನಾಪತ್ತೆಯಾದ ಯುವಕನನ್ನು ಹುಡುಕುವ ಕೆಲಸ ಶುರುವಾಯಿತು. ಸ್ಥಳೀಯ ಗ್ರಾಮಪಂಚಾಯತಿ, ತಾಲ್ಲೂಕು ಹಾಗೂ ಜಿಲ್ಲಾಡಳಿತ ವಿಶೇಷ ಕಾಳಜಿ ವಹಿಸಿ ಕಾರ್ಯಾಚರಣೆ ಚುರುಕುಗೊಳಿಸಿತ್ತು.

ಗುಡ್ಡ ಜರಿದ ವಿಷಯ ತಿಳಿಯುತ್ತಿದ್ದಂತೆಯೇ ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಘಟಕದ ಸ್ವಯಂಸೇವಕರಾದ ರತನ್ ಹಾಗೂ ವಿನಯಚಂದ್ರ ತಕ್ಷಣ ಸ್ಥಳಕ್ಕೆ ಧಾವಿಸಿದರು. ಕಾರ್ಯಾಚರಣೆಗೆ ಯಂತ್ರಗಳ ಬಳಕೆ ಅಸಾಧ್ಯವಾಗಿರುವುದರಿಂದ ಮಾನವ ಶ್ರಮ ಬಹಳ ಅಗತ್ಯವಿತ್ತು. ಸ್ವಯಂಸೇವಕರ ಪಾಲ್ಗೊಳ್ಳುವಿಕೆ ಅಗತ್ಯವಿದೆ ಎಂದರಿತು ವಿಪತ್ತು ನಿರ್ವಹಣಾ ಯೋಜನಾಧಿಕಾರಿಯವರಿಗೆ ಕರೆ ಮಾಡಿ ಸ್ವಯಂಸೇವಕರನ್ನು ಕರೆದೊಯ್ಯುವ ಬಗ್ಗೆ ವಿನಂತಿಸಿಕೊಂಡರು. ಜನಜಾಗೃತಿ ವೇದಿಕೆಯ ಪ್ರಾದೇಶಿಕ

ನಿರ್ದೇಶಕರಾದ ವಿವೇಕ್ ವಿನ್ಸೆಂಟ್ ಪಾಯ್ಸ್ ಅವರ ಸಲಹೆಯಂತೆ ಘಟನೆ ನಡೆದ ಸ್ಥಳಕ್ಕೆ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ತೆರಳಿ ಕಾರ್ಯಾಚರಣೆಗೆ ತೊಡಗಿಕೊಂಡರು.



ಘಟನೆ ನಡೆದ ಮಾರನೆಯ ದಿನ ಇನ್ನಷ್ಟು ಸ್ವಯಂಸೇವಕರ ಅಗತ್ಯ ಮನಗಂಡ ವಿನಯಚಂದ್ರ ಬೆಳ್ತಂಗಡಿ ಹಾಗೂ ಗುರುವಾಯನಕೆರೆ ಘಟಕದ ಸ್ವಯಂಸೇವಕರಲ್ಲಿ ಸ್ಥಳಕ್ಕೆ ಆಗಮಿಸುವಂತೆ ಮನವಿ ಮಾಡಿಕೊಂಡರು. ಕೂಡಲೇ ಸ್ಪಂದಿಸಿದ ಬೆಳ್ತಂಗಡಿ ಘಟಕದ ಸಂಯೋಜಕ ಜಗನ್ನಾಥ, ಬೆಳಾಲು ಘಟಕದ ಸ್ವಯಂಸೇವಕ, ಮುಳುಗು ತಜ್ಞ ಹರೀಶ್ ಬೆಳಾಲ್, ಸಂತೋಷ್, ಧರ್ಮಸ್ಥಳ ಘಟಕದ ಸ್ವಯಂಸೇವಕ ಸ್ವಸ್ತಿಕ್ ಕನ್ಯಾಡಿ, ಅಳದಂಗಡಿ ಘಟಕದ ಸಂಯೋಜಕ ಶ್ರೀಕಾಂತ್ ಪಟವರ್ಧನ ಅವರ ನೇತ್ರತ್ವದಲ್ಲಿ ಸ್ವಯಂಸೇವಕರ ತಂಡ ಸ್ಥಳಕ್ಕೆ ಭೇಟಿ ನೀಡಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದರು.

ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್.ಡಿ.ಆರ್.ಎಫ್) ಅಗ್ನಿಶಾಮಕದಳ, ಅರಣ್ಯ ಇಲಾಖೆಯ ಸಿಬ್ಬಂದಿ, ಆರಕ್ಷಕ ಸಿಬ್ಬಂದಿಯವರು ಕಾರ್ಯಾಚರಣೆಯಲ್ಲಿ ತೊಡಗಿದ್ದು ಅವರೊಂದಿಗೆ ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಘಟಕದ ಸ್ವಯಂಸೇವಕರು ಜೊತೆಗೂಡಿ ಕಾರ್ಯಾಚರಣೆಯಲ್ಲಿ ತೊಡಗಿಕೊಂಡರು. ನಾರಾವಿ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಾದ ರತನ್ ಶೆಟ್ಟಿ ಹಾಗೂ ವಿನಯಚಂದ್ರ ಅವರ ನೇತ್ರತ್ವದಲ್ಲಿ ಸ್ವಯಂಸೇವಕರು ಐದು ದಿನಗಳ ಕಾಲ ಕಾರ್ಯಾಚರಣೆಯಲ್ಲಿ ತೊಡಗಿಕೊಂಡರು.

ಸ್ವಯಂಸೇವಕರ ಕಾರ್ಯಾಚರಣೆ ವೀಕ್ಷಿಸಲು ದುರ್ಘಟನೆ ನಡೆದ ಸ್ಥಳಕ್ಕೆ ಜನಜಾಗೃತಿ ಪ್ರಾದೇಶಿಕ ನಿರ್ದೇಶಕರಾದ ಶ್ರೀಯುತ ವಿವೇಕ್ ವಿನ್ಸೆಂಟ್ ಪಾಯ್ಸ್ ಅವರು ಭೇಟಿ ನೀಡಿದರು. ಕುಸಿತಗೊಂಡ ಗುಡ್ಡದ ಮಣ್ಣು ಮತ್ತು ಕಲ್ಲುಗಳ ತೆರವು ಕಾರ್ಯಾಚರಣೆ ನಡೆಯುತ್ತಿದ್ದು ಅದರ ಉಸ್ತುವಾರಿ ನೋಡಿಕೊಳ್ಳುತ್ತಿರುವ ಮಲವಂತಿಗೆ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಪ್ರಕಾಶ್ ಜೈನ್ ಅವರನ್ನು ಭೇಟಿ ಮಾಡಿ ಘಟನೆಯ ಕುರಿತು ಮಾಹಿತಿ ಪಡೆದುಕೊಂಡರು.

ಸುಮಾರು 20 ದಿನಗಳ ಕಾಲ ಕಾರ್ಯಾಚರಣೆ ನಡೆಯಿತು. ಇಪ್ಪತ್ತು ದಿನದ ಬಳಿಕ ಫೆಬ್ರವರಿ 16 ರಂದು ಸಂಜೆ ಯುವಕನ ಮೃತದೇಹ ದೊರಕಿತ್ತು. ಬೆಳ್ತಂಗಡಿ ತಾಲ್ಲೂಕಿನ ಮಲವಂತಿಗೆ ಗ್ರಾಮದ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಅಂಚಿನಲ್ಲಿರುವ ಬಂಗಾರಪಲ್ಕೆ ಸ್ಥಳಕ್ಕೆ ತೆರಳುವುದೇ ಒಂದು ದೊಡ್ಡ ಸವಾಲು. ದಿಡುಪೆ ಗ್ರಾಮದಿಂದ ದುರ್ಘಟನೆ ನಡೆದ ಸ್ಥಳಕ್ಕೆ ತೆರಳಬೇಕೆಂದರೆ 12 ಕಿಲೋಮೀಟರ್ ಕ್ರಮಿಸಬೇಕು. ಇಂತಹ ದುರ್ಗಮ ಸ್ಥಳಕ್ಕೆ ಸ್ವಯಂಸೇವಕರು ಎಸ್.ಡಿ.ಆರ್.ಎಫ್, ಅಗ್ನಿಶಾಮಕದಳ, ಪೊಲೀಸ್ ಇಲಾಖೆ, ಅರಣ್ಯ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸ್ವಯಂಸೇವಕರ ಜೊತೆಗೂಡಿ ಅವಿರತ ಶ್ರಮವನ್ನು ವಹಿಸಿದ್ದರು. ಸ್ವಯಂಸೇವಕರ ಈ ಮಾನವೀಯ ಕಾರ್ಯ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆಗೆ ಪಾತ್ರವಾಯಿತು.

*************

## ೩೦. ಬಾವಿಯಲ್ಲಿ ಬಿದ್ದ ಕಡವೆ: ಮೇಲೆತ್ತಲು ಯಶಸ್ವೀಯಾದ ಸ್ವಯಂಸೇವಕರು



ಬೆಳ್ತಂಗಡಿ, ಡಿಸೆಂಬರ್ ೨೫, ೨೦೨೨: ಬೆಳಾಲು ಸಮೀಪದ ಮಾಯ ಎಂಬಲ್ಲಿ ೨೦ ಅಡಿ ಆಳವಿರುವ ತೆರೆದ ಬಾವಿಯಲ್ಲಿ ಕಡವೆಯೊಂದು ಬಿದ್ದಿದ್ದು ಗಮನಕ್ಕೆ ಬರುತ್ತಿದ್ದಂತೆಯೇ ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಧಾವಿಸಿದ ವಿಪತ್ತು ನಿರ್ವಹಣಾ ಸ್ವಯಂಸೇವಕರು ಮೇಲೆತ್ತುವ ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಗಳಿಗೆ ಸಹಕರಿಸಿದರು. ಕಾರ್ಯಾಚರಣೆ ಯಶಸ್ವೀಯಾಗಿದ್ದು ಕಡವೆ ಸುರಕ್ಷಿತವಾಗಿ ಕಾಡಿಗೆ ಮರಳಿದೆ. ಉಜಿರೆ-ಬೆಳಾಲು ಘಟಕದ ಸ್ವಯಂಸೇವಕರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಸಮಿತಿಯ ಮಾಸ್ಟರ್ ಸ್ನೇಕ್ ಪ್ರಕಾಶ್, ಕ್ಯಾಪ್ಟನ್ ಸಂತೋಷ್ ಉಪಸ್ಥಿತರಿದ್ದರು.



***************

## ೩೧. ಬಸ್ ನಿಲ್ದಾಣ ಅಂದಗೊಳಿಸಿದ ಕೊಪ್ಪ ಸ್ವಯಂಸೇವಕರು



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೊಪ್ಪ ಯೋಜನಾ ಕಚೇರಿ ವ್ಯಾಪ್ತಯ ಕೊಪ್ಪ ಶೌರ್ಯ ಘಟಕದ ಸ್ವಯಂಸೇವಕರು ಬಸ್ ತಂಗುದಾಣಕ್ಕೆ ಬಣ್ಣ ಬಳಯುವ ಕೆಲಸ ಮಾಡಿದ್ದಾರೆ.

ಸೋಮವಾರಪಟ್ಟಣದ ಹೊರವಲಯದಲ್ಲಿರುವ ಎನ್. ಕೆ. ರಸ್ತೆಯ ಅಂದಗಾರು ಬಸ್ ತಂಗುದಾಣದ ಬಣ್ಣ ಮಾಸಿತ್ತು. ಸ್ವಚ್ಛತಾ ಶ್ರಮದಾನ ನಡೆಸಿ ಸುಣ್ಣ ಬಣ್ಣ ಬಳದಿದ್ದಾರೆ.



***************

## 32. ಹಾವಿನ ಆತಂಕ ದೂರ ಮಾಡುವ ಮಂಜುನಾಥ



ಹಾವೆಂದರೆ ಬೆಚ್ಚಿ ಬೀಳುವುದು ಸಾಮಾನ್ಯ. ಎಲ್ಲಿಯೋ ದೂರದಲ್ಲಿ ಮನೆಯೊಳಗೆ ಉರಗ ಸೇರಿಕೊಂಡರೆ ನಮ್ಮ ಮನೆಯೊಳಗೂ ಬಂದುಬಿಟ್ಟಿದೆಯೇನೋ ಎಂಬಂತೆ ಭಯಭೀತಿಗೊಳ್ಳುವವರ ಸಂಖ್ಯೆ ಅಧಿಕವಿದೆ. ಅರಿತೋ ಅರಿಯದೆಯೋ ಮನೆಯ ಪರಿಸರದೊಳಗೆ ಸೇರಿಕೊಂಡ ಹಾವು ಕಡಿಯುತ್ತದೆಯೋ ಬಿಡುತ್ತದೆಯೋ ಗೊತ್ತಿಲ್ಲ. ಆ ಸ್ಥಳದ ಸುತ್ತಮುತ್ತಲಿನ ಜನರ ಎದೆ ಬಡಿತವಂತೂ ಜೋರಾಗುವುದು ಸಾಮಾನ್ಯ. ಒಟ್ಟಿನಲ್ಲಿ ಹಾವು, 'ನಾವು' ಭೀತಿಗೊಳ್ಳುವಂತೆ ಮಾಡುತ್ತದೆ.

ಬೆಳ್ತಂಗಡಿ ತಾಲ್ಲೂಕಿನ ನಡ ಕನ್ಯಾಡಿಯ ಸುತ್ತಲಿನ ನಾಲ್ಕಾರು ಗ್ರಾಮಗಳ ಜನವಸತಿ ಸ್ಥಳಗಳಲ್ಲಿ ಹಾವು ಸಂಚರಿಸಿದರೆ ಮಂಜುನಾಥ್ ಅವರ ಫೋನ್ ರಿಂಗಣಿಸುತ್ತದೆ. ವೃತ್ತಿಯಲ್ಲಿ ವಾಹನ ಚಾಲಕರಾಗಿರುವ ಮಂಜುನಾಥ್ ಕ್ಷಣ ವ್ಯಯಿಸದೇ ಸ್ಥಳಕ್ಕೆ ಧಾವಿಸಿ ಕಾರ್ಯಾಚರಣೆ ಶುರು ಮಾಡುತ್ತಾರೆ.

ಉರಗ ಪ್ರೇಮಿಯಾದ ಇವರು ಒಂದು ದಶಕದಿಂದ ಹಾವಿನ ರಕ್ಷಣೆಯಲ್ಲಿ ತೊಡಗಿಕೊಂಡಿದ್ದಾರೆ. ತಮ್ಮ ಇಪ್ಪತ್ತೊಂದನೇ ನೇ ವಯಸ್ಸಿನಲ್ಲಿ ಮೊದಲ ಹಾವು ಹಿಡಿದ ನೆನಪು ಇವರಿಗಿದೆ. ಇದುವರೆಗೆ ಐನೂರಕ್ಕೂ ಅಧಿಕ ಹಾವುಗಳನ್ನು ಹಿಡಿದು ಸುರಕ್ಷಿತವಾಗಿ ಕಾಡಿಗೆ ಹರಿಯ ಬಿಟ್ಟಿದ್ದಾರೆ. ಹೆಬ್ಬಾವು, ಕಾಳಿಂಗ ಸರ್ಪ, ನಾಗರ ಹಾವು ಹೀಗೆ ಯಾವುದೇ ವಿಷಕಾರಿ ಹಾವುಗಳಿರಲಿ, ಊರಿಗೆ ಬಂದ ಅವುಗಳನ್ನು ಕಾಡಿನ ದಾರಿ ತೋರುವ ಕೆಲಸವನ್ನು ಮಂಜುನಾಥ್ ಮಾಡುತ್ತಾರೆ. ತನ್ಮೂಲಕ ಜನರ ಭೀತಿಯನ್ನು ಹೋಗಲಾಡಿಸುತ್ತಾರೆ .

ಸಾಮಾಜಿಕ ಸೇವೆಯಲ್ಲಿ ಸದಾ ಸಕ್ರಿಯವಾಗಿರುವ ಇವರು ತಮ್ಮ ಗ್ರಾಮಗಳಲ್ಲಿ ಮಾತ್ರವಲ್ಲದೇ ತಾಲ್ಲೂಕಿನ ಯಾವುದೇ ಸ್ಥಳಗಳಲ್ಲಿ ವಿಪತ್ತಿನಲ್ಲಿರುವವರ ರಕ್ಷಣೆಗೆ ಮುಂದಾಗುತ್ತಾರೆ. ಆರೋಗ್ಯ ತಪ್ಪಿದವರನ್ನು ತಮ್ಮ ವಾಹನದಲ್ಲಿ ಆಸ್ಪತ್ರೆಗೆ ಕರೆದೊಯ್ಯುವುದು, ಗ್ರಾಮದಲ್ಲಿ ನಡೆಯುವ ಸೇವಾ ಚಟುವಟಿಕೆಗಳಲ್ಲಿ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಇವರು ರೂಢಿಸಿಕೊಂಡ ಅಭ್ಯಾಸ.

'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಸಮಿತಿ ಬೆಳ್ತಂಗಡಿಯ ನಡ/ಕನ್ಯಾಡಿ ಘಟಕದ ಸ್ವಯಂಸೇವಕರಾದ ಮಂಜುನಾಥ್ "ಶೌರ್ಯ" ತಂಡದ ಆಪತ್ಕಾಲದ ಬಾಂಧವರ ಪೈಕಿ ಒಬ್ಬರು...

***************

---

ಶ್ರೀ ವಿವೇಕ್ ಪ್ಯಾಸ್
ಪ್ರಾದೇಶಿಕ ನಿರ್ದೇಶಕರು
ಜನಜಾಗೃತಿ ಪ್ರಾದೇಶಿಕ ವಿಭಾಗ

ಶ್ರೀ ಅನಿಲ್ ಕುಮಾರ್ ಎಸ್.ಎಸ್
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ
ಬಿ.ಸಿ.ಟ್ರಸ್ಟ್ (ರಿ)

---